|| ಶ್ರೀ ಹರಿಃ || 721

# ಭಕ್ತ ಬಾಲಕರು

भक्त बालक ( कन्नड़ )

ತ್ವಮೇವ ಮಾತಾ ಚ ಪಿತಾ ತ್ವಮೇವ
ತ್ವಮೇವ ಬಂಧುಶ್ಚ ಸಖಾ ತ್ವಮೇವ ।
ತ್ವಮೇವ ವಿದ್ಯಾ ದ್ರವಿಣಂ ತ್ವಮೇವ
ತ್ವಮೇವ ಸರ್ವಂ ಮಮ ದೇವದೇವ ॥

ಹಿಂದೀ - ಸಂಪಾದಕರು :

**ಹನುಮಾನ್‌ಪ್ರಸಾದ್ ಪೋದ್ದಾರ್**

ಅನುವಾದಕರು :

**ತಂ.ಶ್ರೀ.ನ. ಮೂರ್ತಿ ತಂಡಗ.**

ಪರಿಷ್ಕರಣೆ :

**ಕೀರ್ತನಾಚಾರ್ಯ ಲಕ್ಷ್ಮಣದಾಸ ವೇಲಣಕರ್**

॥ ಶ್ರೀ ಹರಿಃ ॥

# ನಮ್ರ ನಿವೇದನೆ

ಭಗವಂತನ ಪ್ರಿಯ ಭಕ್ತರ ಜೀವನದ ಮಧುರವಾದ ನುಡಿಗಳನ್ನು ಓದುವುದರಿಂದ, ಕೇಳುವುದರಿಂದ ಆನಂದವು ಉಂಟಾಗುತ್ತದೆ, ಜೊತೆಗೆ ಹೃದಯದ ಕಲ್ಮಶವೂ ನಾಶವಾಗಿ ಅದರಲ್ಲಿ ಭಗವಂತನ ಪ್ರೇಮ, ಭಕ್ತಿಗಳು ಅಂಕುರಿಸಿ ದೃಢವಾಗಿ ನೆಲೆಸುತ್ತವೆ. ಆದುದರಿಂದ ಭಕ್ತರ ಚಿಕ್ಕ-ಪುಟ್ಟ ಚರಿತ್ರೆಗಳನ್ನು ಹೊರಡಿಸುವ ಯೋಚನೆ ಮಾಡಲಾಯಿತು. ಸಂಕ್ಷಿಪ್ತ 'ಭಕ್ತ ಚರಿತಮಾಲೆ'ಯ ಮೊದಲನೆಯ ಪುಷ್ಪವಿದು. ಇದರಲ್ಲಿ ಐದು ಕಥೆಗಳಿವೆ. ಅವುಗಳಲ್ಲಿ ಮೊದಲನೆಯದು ಮತ್ತು ಮೂರನೆಯದು ಭಕ್ತಮಾಲೆಯ, ಎರಡನೆಯದು ಒಂದು ಬಂಗಾಳೀ ಪುಸ್ತಕದ ಮತ್ತು ನಾಲ್ಕು ಮತ್ತು ಐದನೆಯವು ಜೈಮಿನೀಯ ಅಶ್ವಮೇಧಪುರಾಣದ ಆಧಾರದ ಮೇಲೆ ಬರೆಯಲ್ಪಟ್ಟಿವೆ. ಇದರ ಎರಡನೇ ಪುಷ್ಪವೂ ಸಹ ಬಹುಬೇಗ ಅರಳುವುದರಲ್ಲಿದೆ. ಈ ಪುಷ್ಪಗಳ ಮಧುರ ಮತ್ತು ಪವಿತ್ರ ಸುಗಂಧದಿಂದ ತಮ್ಮ ತನು, ಮನ ಮತ್ತು ವಚನಗಳನ್ನೂ ಆನಂದವಾಗಿಯೂ ಮತ್ತು ಪವಿತ್ರವಾಗಿಯೂ ಮಾಡಿಕೊಳ್ಳಬೇಕೆಂದು ಭಾವುಕ ಓದುಗರಲ್ಲಿ ವಿನಂತಿಸುತ್ತೇವೆ.

**– ಸಂಪಾದಕ**

❑❑❑

|| ಶ್ರೀ ಹರಿಃ ||

# ಅನುಕ್ರಮಣಿಕೆ


| | ಹೆಸರು | | | | ಪುಟ |
|---|---|---|---|---|---|
| 1. | ಗೋವಿಂದ | ..... | ..... | ..... | 5 |
| 2. | ಮೋಹನ | ..... | ..... | ..... | 13 |
| 3. | ಧನ್ನಾ ಜಾಟ | ..... | ..... | ..... | 26 |
| 4. | ಚಂದ್ರಹಾಸ | ..... | ..... | ..... | 36 |
| 5. | ಸುಧನ್ವ | ..... | ..... | ..... | 51 |


❑❑❑

|| ಶ್ರೀ ಹರಿಃ ||

# ೧. ಗೋವಿಂದ

**ಗೋ**ವರ್ಧನ ಒಂದು ಬಹು ಸುಂದರವಾದ ಊರು. ಊರಿನಲ್ಲಿ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರ ನಿವಾಸವೇ ಹೆಚ್ಚಾಗಿದೆ. ಊರಿನ ಮಧ್ಯೆ ಒಂದು ದೇವಾಲಯ, ಅದರಲ್ಲಿ ಶ್ರೀನಾಥ ಪ್ರಭುವಿನ ಬಹುಸುಂದರವಾದ ವಿಗ್ರಹ ರಾರಾಜಿಸುತ್ತಿದೆ. ಅದರ ಚರಣಗಳಲ್ಲಿ ಗೆಜ್ಜೆಗಳು, ಕೊರಳಿನಲ್ಲಿ ಮನೋಹರವಾದ ವನಮಾಲೆ ಮತ್ತು ತಲೆಯಲ್ಲಿ ಮಯೂರ-ಮುಕುಟ ಶೋಭಿಸುತ್ತಿವೆ. ಗುಂಗುರು ಕೂದಲುಗಳು, ಕಣ್ಣುಗಳ ಮಾಟ ಮನಮೋಹಕ ಮತ್ತು ಪೀತಾಂಬರಧಾರಿ ಯಾಗಿದ್ದಾನೆ. ನೋಡುವವರ ಮನಸ್ಸಿಗೆ ತೃಪ್ತಿಯೇ ಆಗದಷ್ಟು ಆ ಮೂರ್ತಿ ಸುಂದರವಾಗಿದೆ. ದೇವಾಲಯದ ಹತ್ತಿರದಲ್ಲಿಯೇ ಒಬ್ಬ ಬಡ ಬ್ರಾಹ್ಮಣನ ಮನೆಯಿತ್ತು. ಬ್ರಾಹ್ಮಣ ಬಡವನಾಗಿದ್ದ. ಆದರೆ ಅವನ ಹೃದಯ ಭಗವದ್ಭಕ್ತಿಯಿಂದ ತುಂಬಿತುಳುಕುತ್ತಿತ್ತು. ಬ್ರಾಹ್ಮಣನ ಹೆಂಡತಿಯೂ ಸಹ ತನ್ನ ಪತಿ ಮತ್ತು ಪರಮಪತಿಯಾದ ಪರಮಾತ್ಮನ ಪ್ರೇಮದಲ್ಲಿ ಮಗ್ನಳಾಗಿದ್ದಳು. ಆಕೆಯ ಸ್ವಭಾವ ಬಹು ಸರಳ ಮತ್ತು ಮೈತ್ರಿಯಿಂದ ಕೂಡಿತ್ತು. ಎಂದೂ ಯಾರೂ ಆಕೆಯ ಬಾಯಿಂದ ಕಠೋರವಾದ ಶಬ್ದವನ್ನು ಕೇಳಲಿಲ್ಲ. ಮಾತಾ-ಪಿತೃಗಳಂತೆ ಬಹುಶಃ ಪುತ್ರನ ಸ್ವಭಾವವುಂಟಾಗುತ್ತದೆ. ಅದರಂತೇ ಬ್ರಾಹ್ಮಣ-ದಂಪತಿಗಳ ಮಗ ಗೋವಿಂದನೂ ಸಹ ಬಹು ಸುಂದರ ಸ್ವಭಾವದ ಬಾಲಕನಾಗಿದ್ದನು. ಅವನ ವಯಸ್ಸು ಹತ್ತು ವರ್ಷ. ಗೋವಿಂದನ ಶರೀರ ಮಾಟ ಎಷ್ಟು ಸುಂದರವಾಗಿತ್ತೆಂದರೆ, ಜನರು ಅವನನ್ನು ಕಾಮದೇವನ ಅವತಾರವೆಂದು ಹೇಳುವುದಕ್ಕೂ ಸಹ ಅಂಜುತ್ತಿರಲಿಲ್ಲ.

ಗೋವಿಂದನು ಊರಿನ ಹೊರಗಡೆ ತನ್ನ ಜೊತೆಯವರಾದ ಸದಾನಂದ ಮತ್ತು ರಾಮದಾಸ ಇವರ ಸಂಗಡ ಆಟವಾಡುತ್ತಿದ್ದನು. ಒಂದು ದಿವಸ ಆಟವಾಡುತ್ತಾ-ಆಡುತ್ತಾ ಸಾಯಂಕಾಲವಾಗಿಹೋಯಿತು. ಗೋವಿಂದ ಮನೆಗೆ

ಹಿಂದಿರುಗುತ್ತಿದ್ದ, ಆಗ ದೇವಾಲಯದಲ್ಲಿ ನಡೆಯುತ್ತಿದ್ದ ಆರತಿಯ ಶಬ್ದವನ್ನು ಕೇಳಿದ. ಶಂಖ, ಘಂಟೆ, ಜಾಗಟೆ ಮತ್ತು ತಾಳದ ಶಬ್ದ ಕೇಳಿ ಗೋವಿಂದನಿಗೂ ಸಹ ದೇವಾಲಯಕ್ಕೆ ಹೋಗಿ ನೋಡಬೇಕೆಂಬ ಇಚ್ಛೆಯಾಯಿತು. ಮತ್ತು ಆ ಕ್ಷಣವೇ ಅವನು ಓಡಿ ಶ್ರೀನಾಥನ ಆರತಿ ನೋಡುವುದಕ್ಕಾಗಿ ದೇವಾಲಯವನ್ನು ಹೊಕ್ಕನು. ಶ್ರೀನಾಥನ ದರ್ಶನಮಾಡಿ ಬಾಲಕನ ಮನಸ್ಸು ಆತನಲ್ಲಿಯೇ ಆನಂದಪಟ್ಟಿತು. ಗೋವಿಂದನು ಇದೊಂದು ಕಲ್ಲಿನ ವಿಗ್ರಹ ಎಂಬುದನ್ನು ತಿಳಿದುಕೊಳ್ಳಲಿಲ್ಲ. ಒಂದು ಜೀವಂತ ಮನೋಹರ ಬಾಲಕ ನಿಂತುಕೊಂಡು ನಗುತ್ತಿದ್ದಾನೆ ಎಂಬಂತೆ ಪ್ರತ್ಯಕ್ಷವಾಗಿ ನೋಡಿದನು. ಗೋವಿಂದನು ಶ್ರೀನಾಥನ ಮಧುರ ಮುಗುಳ್ನಗೆಯಿಂದ ಮೋಹಿತನಾದನು. ‘ಈ ಹುಡುಗ ನನ್ನ ಸ್ನೇಹಿತನಾಗಲಿ ಮತ್ತು ನನ್ನೊಡನೆ ಆಟವಾಡಿದರೆ ಬಹಳ ಆನಂದವಾಗುವುದು’ ಎಂದು ಅಂದುಕೊಂಡನು. ಅಷ್ಟರಲ್ಲಿ ಆರತಿ ಮುಗಿದು ಹೋಯ್ತು. ಜನರೆಲ್ಲಾ ತಮ್ಮ-ತಮ್ಮ ಮನೆಗೆ ಹೊರಟುಹೋದರು. ಅರ್ಚಕರೂ ಸಹ ದೇವಾಲಯದ ಬಾಗಿಲನ್ನು ಮುಚ್ಚಿಕೊಂಡು ಹೊರಟುಹೋದರು. ದೇವಾಲಯದ ಹೊರಗಡೆ ಕತ್ತಲಿನಲ್ಲಿ ಗೋವಿಂದನೊಬ್ಬನೇ ನಿಂತುಕೊಂಡು ಶ್ರೀನಾಥನ ಬರುವಿಕೆಗಾಗಿ ಕಾಯುತ್ತಿದ್ದನು. ಗೋವಿಂದನು ಸುತ್ತಲೂ ನೋಡಿ ಎಲ್ಲಿಯೂ ಯಾರೂ ಇಲ್ಲವೆಂಬುದನ್ನು ತಿಳಿದುಕೊಂಡನು. ಆಗ ಅವನು ಕಿಟಕಿಯ ಸಂದಿನಿಂದ ಒಳಗಡೆ ಬಗ್ಗಿ ಒಂಟಿಯಾಗಿ ನಿಂತಿರುವ ಶ್ರೀನಾಥನನ್ನು ಬಹಳ ಗಟ್ಟಿಯಾದ ಶಬ್ದದಿಂದ ಗದ್ಗದ - ಕಂಠನಾಗಿ ಪ್ರೀತಿಯಿಂದ ಕೂಗಿ ಹೇಳಿದ - ‘ನಾಥ! ಅಣ್ಣಾ! ನೀನು ನನ್ನ ಜೊತೆಯಲ್ಲಿ ಆಡುವುದಿಲ್ಲವೇ! ನಿನ್ನ ಜೊತೆಯಲ್ಲಿ ಆಡಬೇಕೆಂದು ನನ್ನ ಮನಸ್ಸು ಬಹಳ ಚಡಪಡಿಸುತ್ತಿದೆ. ಅಣ್ಣಾ! ಬಾ, ನೋಡು, ಎಂತಹ ಬೆಳದಿಂಗಳ ರಾತ್ರಿ ಇದೆ. ಬಾ, ಇಬ್ಬರೂ ಸೇರಿ ಅಂಗಳದಲ್ಲಿ ಚಿಣ್ಣಿ-ದಾಂಡು ಆಡೋಣ. ನಾನು ಸತ್ಯವಾಗಿ ಹೇಳುತ್ತೇನೆ, ಅಣ್ಣಾ! ಎಂದಿಗೂ ನಿನೊಡನೆ ಜಗಳ ಅಥವಾ ಹೊಡೆದಾಟ ಮಾಡುವುದಿಲ್ಲ.’

ಸರಳ ಹೃದಯೀ ಬಾಲಕನ ಅಂತಃಕರಣದ ಮೇಲೆ ಆರತಿಯ ಸಮಯದಲ್ಲಿ ಉಂಟಾದ ಭಾವನೆಯಿಂದ ಅವನು ಉನ್ಮತ್ತನಾಗಿ ಹೋದನು. ಪರಮಾತ್ಮನ ಮಧುರ ಮತ್ತು ಅನಂತ ಪ್ರೇಮದ ಅಮೃತಮಯೀ ಮಲಯ ಮಾರುತದಿಂದ

ಗೋವಿಂದನು ಪ್ರೇಮಮಗ್ನನಾಗಿ ದೇವಾಲಯದ ಒಳಗಡೆ ನಿಂತುಕೊಂಡು ಆ ಭಕ್ತ - ಪ್ರಾಣ- ಧನ ಗೋವಿಂದನನ್ನು ಅಳುತ್ತಳುತ್ತಾ ಕರೆಯಲಾರಂಭಿಸಿದನು. ಬಾಲಕನ ಕಣ್ಣೀರಿನಿಂದ ತೋಯ್ದ ಶಬ್ದಗಳು ದೊಡ್ಡ ಕೆಲಸ ಮಾಡಿದವು. **'ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್'** (ಗೀತಾ೪/೧೧) ಎಂಬ ಪ್ರತಿಜ್ಞೆಗೆ ಅನುಸಾರವಾಗಿ ಪರಮಾತ್ಮ ಶ್ರೀನಾಥನಿಗೆ ದೇವಾಲಯದಲ್ಲಿ ಇರಲಾಗಲಿಲ್ಲ. ಭಕ್ತನ ಪ್ರೇಮಾವೇಶವು ಭಗವಂತನನ್ನು ಆಕರ್ಷಿಸಿತು. ಒಳಗಡೆಯಿಂದ ಶಬ್ದ ಬರುತ್ತಿರುವಂತೆ ಗೋವಿಂದನಿಗೆ ಕೇಳಿಸಿತು - 'ತಮ್ಮಾ! ನಡೆ, ಬರುತ್ತೇನೆ, ನಾವಿಬ್ಬರೂ ಆಡೋಣ!'

ಸರಳ ಬಾಲಕರ ಮಧುರ ಪ್ರೇಮವು ಭಗವಂತನನ್ನು ಬಹು ಬೇಗನೇ ಆಕರ್ಷಿಸುತ್ತದೆ. ಬಾಲಕನಾದ ಧ್ರುವನಿಗಾಗಿ ಚತುರ್ಭುಜಧಾರಿ ರೂಪದಲ್ಲಿ ಕಾಡಿಗೆ ಹೋಗಬೇಕಾಯಿತು. ಭಕ್ತ ಪ್ರಹ್ಲಾದನಿಗಾಗಿ ಅದ್ಭುತವಾದ ನರಸಿಂಹ ರೂಪವನ್ನು ಧರಿಸಿದ ಮತ್ತು ಗೊಲ್ಲ ಬಾಲಕರೊಡನೆ ತಾನೂ ದನಗಳನ್ನು ಮೇಯಿಸಲು ಕಾಡು-ಮೇಡುಗಳಲ್ಲಿ ಅಲೆದಾಡಿದನು. ಇಂದು ಗೋವಿಂದನ ಆವೇಶದ ಕರೆಯನ್ನು ಕೇಳಿಸಿಕೊಂಡು ಅವನೊಡನೆ ಆಟವಾಡಲು ದೇವಾಲಯದಿಂದ ಹೊರಕ್ಕೆ ಬಂದನು. ಪ್ರಭು! ಧನ್ಯ! ಧನ್ಯ! ನೀನು ಮಾಯೆಯೊಡನೆ ಆನಂದಿಸಿ ಎಷ್ಟು ಆಟಗಳನ್ನು ಆಡುತ್ತಿರುವೆಯೋ ತಿಳಿಯದು? ನಿನ್ನ ರಹಸ್ಯವನ್ನು ಯಾರು ತಿಳಿಯಬಲ್ಲರು? ಸಾಧಾರಣ ಮಾಯಾವಿಯ ಆಟದಿಂದ ಜನರು ಭ್ರಮೆಗೊಳಗಾಗುತ್ತಾರೆ, ಆದರೆ ನೀನು ಮಾಯಾವಿಗಳ ಒಡೆಯನಾಗಿರುವೆ! ಬಡಪಾಯಿ ಮಾಯೆಯಾದರೋ ನಿನ್ನ ಭಕ್ತ-ಭ್ರಮರ ಸೇವಿತ ಚರಣಕಲಮಗಳ ಸೇವಕಿಯಾಗಿರುವಳು. ಆದುದರಿಂದ ನಿನ್ನ ಆಟದ ರಹಸ್ಯವನ್ನು ಯಾರು ಅರಿಯಬಲ್ಲರು? ನಿನಗೆ ನಿನ್ನ ಭಕ್ತರೊಡನೆ ಆಡುವುದು ಬಹಳ ಪ್ರಿಯವಾಗುತ್ತದೆ - ಎಂದು ಇಷ್ಟು ಮಾತ್ರ ಅವಶ್ಯವಾಗಿ ಹೇಳಲಾಗುತ್ತದೆ. ಆದ್ದರಿಂದ ನೀನು ಭಕ್ತಧನ್ನಾಜಾಟನ ಜೊತೆ ಹಾಲು ಹಿಂಡುತ್ತಾ ತಿರುಗಾಡಿದ್ದೆ ಮತ್ತು ಇಂದು ಬಾಲಕ ಗೋವಿಂದನು ಕರೆದ ಕೂಡಲೇ ಅವನೊಡನೆ ಆಡುವುದಕ್ಕೆ ಸಿದ್ಧನಾದೆ!

ಶ್ರೀನಾಥ ಭಗವಂತನು ನಗುತ್ತಾ ಗೋವಿಂದನ ಹತ್ತಿರಕ್ಕೆ ಬಂದು

ನಿಂತುಕೊಂಡನು. ಗೋವಿಂದನು ಬಹಳ ಪ್ರೀತಿಯಿಂದ ಆತನ ಕೈ ಹಿಡಿದನು. ಇಂದು ಗೋವಿಂದನ ಆನಂದಕ್ಕೆ ಮಿತಿಯೇ ಇಲ್ಲ, ಅವನು ಒಮ್ಮೆ ಶ್ರೀನಾಥನ ಮುಖಕಮಲವನ್ನು ನೋಡಿ ಉನ್ಮತ್ತನಾಗುತ್ತಿದ್ದನು, ಮತ್ತೊಮ್ಮೆ ಆತನ ಕರ-ಕಮಲಗಳನ್ನು ಮುಟ್ಟಿ ತನ್ನನ್ನು ಧನ್ಯನೆಂದುಕೊಳ್ಳುತ್ತಾನೆ. ಒಮ್ಮೆ ಆತನ ಸುಂದರವಾದ ಕಣ್ಣುಗಳನ್ನು ದಿಟ್ಟಿಸಿ ನೋಡಿ ಮೋಹಗೊಳ್ಳುತ್ತಾನೆ, ಹಾಗೆ ಮತ್ತೊಮ್ಮೆ ಆತನ ಮಧುರ ಶಬ್ದಗಳನ್ನೂ ಕೇಳಿ ಮತ್ತೆ ಕೇಳಲಿಚ್ಛಿಸುತ್ತಾನೆ. ಗೋವಿಂದನ ಹೃದಯದಲ್ಲಿ ಆನಂದವು ತುಳುಕುತ್ತಿತ್ತು. ಜಗತ್ತಿನ ಸಮಸ್ತ ಸೌಂದರ್ಯವೂ ಆತನ ಸೌಂದರ್ಯರಾಶಿಯ ಒಂದು ತುಚ್ಛ ಅಂಶ, ಆ ಅನಂತ ಮತ್ತು ಸೀಮಾತೀತ ರೂಪರಾಶಿಯನ್ನು ಪ್ರತ್ಯಕ್ಷವಾಗಿ ಕಂಡು ಮುಗ್ಧರಾಗದಿರುವವರು ಯಾರಿದ್ದಾರೆ? ಈ ವಿಷಯವೇ ಹೀಗಿದೆ.

ಹೊಸ ಸ್ನೇಹಿತನನ್ನು ಜೊತೆಯಲ್ಲಿ ಕರೆದುಕೊಂಡು ಗೋವಿಂದನು ಊರಿನಿಂದ ಹೊರಕ್ಕೆ ಬಂದನು. ಚಂದ್ರನ ಬೆಳದಿಂಗಳು ಸುತ್ತಲೂ ಹರಡಿತ್ತು. ಪ್ರಿಯತಮನನ್ನು ಕಂಡು ಸರೋವರದಲ್ಲಿ ನೈದಿಲೆ ನಗುತ್ತಿತ್ತು. ಹೂಗಳ ಅರ್ಧ ಅರಳಿದ ಮೊಗ್ಗುಗಳು ತಮ್ಮ ಮಂದ ಸುಗಂಧದಿಂದ ಸಮಸ್ತ ವನವನ್ನೂ ಮಧುಮಯವಾಗಿ ಮಾಡಿದ್ದವು. ಪ್ರಕೃತಿಯು ತನ್ನ ನಾಥನ ಪ್ರಾರ್ಥನೆಗಾಗಿ ಎಲ್ಲಾ ರೀತಿಯಿಂದ ಸುಸಜ್ಜಿತವಾಗಿ ಭಕ್ತಿ ಪೂರಿತವಾದ ಪುಷ್ಪಾಂಜಲಿ ಅರ್ಪಿಸಲೋಸುಗ ಮೊದಲೇ ಸಿದ್ಧಳಾಗಿದ್ದಳೋ ಎಂಬಂತಿತ್ತು. ಅಂತಹ ಮನೋಹರ ರಾತ್ರಿಯಲ್ಲಿ ಗೋವಿಂದನು ಶ್ರೀನಾಥನೊಡನಿದ್ದು ತನ್ನ ಮನೆ-ಮಠ, ತಾಯಿ-ತಂದೆ ಮತ್ತು ಹಸಿವು-ನಿದ್ದೆ ಇತ್ಯಾದಿಗಳನ್ನೆಲ್ಲಾ ಮರೆತುಬಿಟ್ಟನು. ಇಬ್ಬರು ಮಿತ್ರರೂ ಬಹಳ ಪ್ರೇಮದಿಂದ ಬಗೆ ಬಗೆಯ ಆಟಗಳನ್ನೂ ಆಡಲಾರಂಭಿಸಿದರು.

ತಾನು ಜಗಳ ಅಥವಾ ಹೊಡೆದಾಟ ಮಾಡುವುದಿಲ್ಲವೆಂದು ಗೋವಿಂದ ಹೇಳಿದ್ದನು. ಆದರೆ ವಿನೋದ ಪ್ರಿಯ ಶ್ರೀನಾಥನ ಮಾಯೆಯಿಂದ ಮೋಹ ಗೊಂಡು ಅವನು ಈ ಮಾತನ್ನು ಮರೆತುಬಿಟ್ಟನು. ಆಡುತ್ತಾ-ಆಡುತ್ತಾ ಯಾವುದೋ ಮಾತಿಗಾಗಿ ಇಬ್ಬರು ಮಿತ್ರರು ಜಗಳವಾಡಿದರು. ಗೋವಿಂದನು

ಸಿಟ್ಟಿಗೆದ್ದು ಶ್ರೀನಾಥನ ಕೆನ್ನೆಗೆ ಒಂದು ಪೆಟ್ಟು ಕೊಟ್ಟನು ಮತ್ತು ಹೇಳಿದ - 'ಮತ್ತೇನಾದರೂ ನನ್ನನ್ನು ರೇಗಿಸಿದರೆ ಹೊಡೆದು ಬೆನ್ನು ಮಳೆ ಮುರಿದು ಬಿಡುವೆನು ಜ್ಞಾಪಕವಿರಲಿ? ಸೂರ್ಯ-ಚಂದ್ರ ಮತ್ತು ಬೆಂಕಿ-ಗಾಳಿ ಯಾರ ಭಯದಿಂದ ತಮ್ಮ-ತಮ್ಮ ಕಾರ್ಯಗಳಲ್ಲಿ ತೊಡಗಿರುತ್ತವೆಯೋ, ಸ್ವತಃ ದೇವರಾಜ ಇಂದ್ರನು ಯಾರ ಭಯದಿಂದ ಸಕಾಲದಲ್ಲಿ ಮಳೆ ಸುರಿಸುವಲ್ಲಿ ಬಾಧ್ಯನಾಗಿದ್ದಾನೆಯೋ, ಭಯಾಧಿಪತಿ ಯಮರಾಜನು ಯಾರ ಭಯದಿಂದ ಪಾಪಿಗಳಿಗೆ ಭಯೋತ್ಪಾದಕ ನಾಗಿದ್ದಾನೆಯೋ, ಅಂತಹ ತ್ರಿಭುವನಾಥನು ಇಂದು ಮುಗ್ಧ ಬಾಲ - ಭಕ್ತನೊಡನೆ ಆಡುತ್ತಿರುವಾಗ ಅವನ ಏಟನ್ನು ತಿಂದು ಸಹ ಏನನ್ನೂ ಹೇಳುವುದಿಲ್ಲ.

ಶ್ರೀನಾಥನು ಅಳುತ್ತಾ ಹೇಳಿದ - 'ತಮ್ಮಾ ಗೋವಿಂದ! ನೀನು ಹೊಡೆ ಯುವುದಿಲ್ಲವೆಂದು ಹೇಳಿರಲಿಲ್ಲವೇ, ಮತ್ತೆ ನನ್ನನ್ನು ಹೊಡೆದೆ? ಶ್ರೀನಾಥನ ಮಾತನ್ನು ಕೇಳಿ ಮತ್ತು ಆತನು ಅಳುವುದನ್ನು ನೋಡಿ ಗೋವಿಂದನ ಹೃದಯ ತುಂಬಿ ಬಂತು. ಅವನು ಓಡಿಹೋಗಿ ಶ್ರೀನಾಥನ ಕಣ್ಣೀರನ್ನು ಒರೆಸಿದನು, ಆತನನ್ನು ಬಿಗಿದಪ್ಪಿಕೊಂಡನು ಮತ್ತು ಹೇಳಿದ - 'ಅಣ್ಣಾ! ಅಳಬೇಡ, ನೀನು ನನಗೆ ಬಹಳ ಪ್ರಿಯನಾಗಿ ಕಾಣುತ್ತಿರುವೆ, ನಿನ್ನ ಕಣ್ಣೀರನ್ನು ನೋಡಿದ ಕೂಡಲೇ ನನ್ನ ಎದೆ ಒಡೆದುಹೋದಂತಾಯ್ತು.' ಇಬ್ಬರೂ ಪುನಃ ಆಡಲಾರಂಭಿಸಿದರು. ರಾತ್ರಿಯಾಗಿ ಹೋಯ್ತು. ಇವನ ತಾಯಿ-ತಂದೆ ಬಹುವಾಗಿ ಚಿಂತಿಸುತ್ತಿರಬಹುದು ಎಂದು ಭಗವಂತನು ಯೋಚಿಸಿ, ತನ್ನ ಮಾಯೆಯಿಂದ ಗೋವಿಂದನ ಮನದಲ್ಲಿ ಮನೆಗೆ ಹೋಗಬೇಕೆಂಬ ಪ್ರೇರಣೆಯನ್ನುಂಟು ಮಾಡಿದನು. ಗೋವಿಂದ ಹೇಳಿದ - 'ನಾಥನೇ! ಬಹಳ ಹೊತ್ತಾಯ್ತು. ನಾನು ಮನೆಗೆ ಹೋಗುತ್ತೇನೆ. ನಾಳೆ ಪುನಃ ಆಡೋಣ.' ನಾಥನು ಅನುಮತಿ ಕೊಟ್ಟನು. ಗೋವಿಂದ ಮನೆಗೆ ಹೊರಟು ಹೋದನು ಮತ್ತು ಅನಾಥರ ಏಕಮಾತ್ರ ನಾಥನಾದ ಶ್ರೀನಾಥನು ದೇವಾಲಯಕ್ಕೆ ತೆರಳಿದನು.

ಪ್ರತಿದಿವಸವೂ ಇದೇ ಪ್ರಕಾರ ಆಟ ನಡೆಯುತ್ತಿತ್ತು. ಗೋವಿಂದನು ಈ

ನಯನ ಮನಮೋಹನ ಹೊಸ ಮಿತ್ರನನ್ನು ಸೇರಿ ಹಳೆಯ ಮಿತ್ರರಿಬ್ಬರನ್ನೂ ಮರೆತುಬಿಟ್ಟನು. ಒಂದು ದಿವಸ ಭಗವಾನ್ ಶ್ರೀನಾಥನು ಆಡುತ್ತಾ-ಆಡುತ್ತಾ ಗೋವಿಂದನಿಗೆ ಆಟದ ಸರತಿಯನ್ನು ಕೊಡದೆ ಓಡಿಬಿಟ್ಟನು. ಗೋವಿಂದನೂ ಹಿಂದೆ-ಹಿಂದೆಯೇ ಓಡಿದನು. ನಾಥನು ದೇವಾಲಯಕ್ಕೆ ನುಗ್ಗಿಬಿಟ್ಟನು. ದೇವಾಲಯದ ಬಾಗಿಲು ಮುಚ್ಚಿತ್ತು. ಆದ್ದರಿಂದ ಗೋವಿಂದನಿಗೆ ಒಳಗೆ ಹೋಗಲಾಗಲಿಲ್ಲ. ನಾಥನದು ಅನ್ಯಾಯವೆಂದು ತಿಳಿದುಕೊಂಡು ಅವನು ದೇವಾಲಯದ ಹೊರಗೆ ನಿಂತು ಆತನನ್ನು ಏನೇನೋ ದೂಷಿಸಲಾರಂಭಿಸಿದ. ಭಕ್ತ ಮಾಲಾದ ರಚನಕಾರ ರೀವಾನರೇಶ ರಘುರಾಜಸಿಂಹಜೀ ಬರೆಯುತ್ತಾರೆ -

**ಭಗಿ ಮಂದಿರ ಭೀತರ ಕೃಷ್ಣ ಗಯೇ, ತಬ ಗೋವಿಂದ ಭೀತರ ಜಾನಲಗೋ ।**
**ಜಬ ಪಂಡನ ಮಾರಿ ನಿಕಾಸಿ ದಿಯೋ, ತಬ ಬಾಹರ ಹಿ ಅತಿ ಕೋಪಜಗೋ ॥**
**ಮಹಿ ಠೋಂಕತ ದಂಡ, ಪ್ರಚಾರತ ಗಾರಿ ದೇ, ತೂ ಕಢಿಹೈ ಕಬಲೋ ನ ಭಗೋ ।**
**ಇತ ಬೈಠೇ ರಹೊಂಗೋ ಮೈ ತೇರೇ ಲಿಯೇ, ನಹಿ ದಾವ ದಿಯೋ ಅಹೈ ಪೂರೋಠಗೋ ॥**

ಶ್ರೀಕೃಷ್ಣ ಓಡಿ ದೇವಾಲಯಕ್ಕೆ ಸೇರಿದ. ಅವನ ಹಿಂದೆ ಗೋವಿಂದನೂ ಓಡಿಬಂದ. ಆದರೆ ಪೂಜಾರಿ ಅವನನ್ನು ಹೊಡೆದು ಹೊರಗೆ ತಳ್ಳಿದ. ಗೋವಿಂದನು ತುಂಬಾ ಕೋಪಗೊಂಡು ತನ್ನ ಕೈಯಲ್ಲಿರುವ ಬೆತ್ತದಿಂದ ಬಹು ಜೋರಿನಿಂದ ಬಡಿದು ಹೇಳಿದನು : - "ಶ್ರೀನಾಥನೇ ನೀನು ನನ್ನನ್ನು ಬಿಟ್ಟು ಓಡಿದೆ. ನಾನು ಇಲ್ಲೇ ಕುಳಿತುಕೊಂಡು ನೀನು ಎಲ್ಲಿ ಹೋಗುವಿ ಎಂದು ನೋಡುತ್ತೇನೆ. ನನ್ನೊಡನೆ ಆಟವಾಡದೆ ದೇವಾಲಯ ಸೇರಿರುವೆ. ನೀನು ಹೊರಗೆ ಬರುವವರೆಗೂ ಇಲ್ಲೇ ಕುಳಿತಿರುವೆನು.

ದೇವಾಲಯದ ಬಾಗಿಲು ತೆರೆದ ಕೂಡಲೇ ಗೋವಿಂದ ಒಳಗೆ ನುಗ್ಗಿದ ಮತ್ತು ಕೋಲಿನಿಂದ ಭಗವಾನ್ ಶ್ರೀನಾಥನ ವಿಗ್ರಹಕ್ಕೆ ಹೊಡೆದು ಹೇಳಿದ - 'ಪುನಃ ಎಂದಿಗೂ ಓಡಿಹೋಗುವುದಿಲ್ಲವಲ್ಲ! ಅರ್ಚಕರು ಹಾ! ಹಾ! ಎಂದು ಗೋವಿಂದನನ್ನು ಹಿಡಿದುಕೊಂಡರು ಮತ್ತು ಹೊಡೆದು-ಬಡಿದು ದೇವಾಲಯದಿಂದ ಹೊರಕ್ಕೆ ತಳ್ಳಿದರು. ಇದರಿಂದ ಅವನ ಪ್ರೇಮ-ಪ್ರಕೋಪ ಮತ್ತಷ್ಟು ಹೆಚ್ಚಿತು ಮತ್ತು ಅವನು ಹೇಳಿದ - 'ನಾಥಜೀ! ನೀನು ನನಗೆ

ಬಹಳ ಅನ್ಯಾಯ ಮಾಡಿರುವೆ, ಆಟದ ಸರತಿಯನ್ನು ಕೊಡದೆ ಓಡಿ ಬಂದಿರುವೆ ಮತ್ತು ಈಗ ನನ್ನನ್ನು ನಿನ್ನ ಕಡೆಯವರಿಂದ ಹೊಡೆಯಿಸಿ ಹೊರಕ್ಕೆ ಹಾಕಿಸಿರುವೆ; ಒಳ್ಳೆಯದು, ಇರಲಿ ನಾಳೆ ನೋಡುವೆನು. ಇದಕ್ಕೆ ನಿನ್ನೊಡನೆ ಸೇಡು ತೀರಿಸಿಕೊಳ್ಳುವವರೆಗೂ ನಾನು ನೀರನ್ನೂ ಕೂಡ ಕುಡಿಯುವುದಿಲ್ಲ.' ಹೀಗೆ ಹೇಳುತ್ತಾ ಕೋಪಿಸಿಕೊಂಡು ಹೊರಟು ಹೋಗಿ ಗೋವಿಂದ ಕುಂಡದ ಮೇಲೆ ಕುಳಿತುಬಿಟ್ಟನು. ಈ ಕಡೆ ದೇವಾಲಯದಲ್ಲಿ ನೈವೇದ್ಯ ಸಿದ್ಧವಾದಾಗ ಅರ್ಚಕರಿಗೆ ಆದೇಶವುಂಟಾಯಿತು 'ನೀವುಗಳೆಲ್ಲಾ ನನ್ನ ಭಕ್ತನನ್ನು ಹೊಡೆದು ಹೊರಕ್ಕೆ ತಳ್ಳಿರುವಿರಿ; ಅವನು ಬರುವವರೆಗೂ ನಾನು ನೈವೇದ್ಯವನ್ನು ಸ್ವೀಕರಿಸುವುದಿಲ್ಲ. ಅವನ ಶರೀರದ ಮೇಲೆ ಬಿದ್ದಿರುವ ಏಟುಗಳೆಲ್ಲಾ ನನ್ನ ಶರೀರಕ್ಕೆ ತಗುಲಿವೆ.' ಭಕ್ತ ಮತ್ತು ಭಕ್ತವತ್ಸಲ ಅಭಿನ್ನರೆಂಬುದು ಅರ್ಚಕರಿಗೇನು ಗೊತ್ತು? ಅರ್ಚಕರು ಬಹು ಗಾಬರಿಯಾಗಿ ಓಡುತ್ತಾ ಬಂದು ಹುಡುಕುತ್ತಾ ಹುಡುಕುತ್ತಾ ಕಟ್ಟೆಯ ಮೇಲೆ ಕುಳಿತಿದ್ದ ಗೋವಿಂದನನ್ನು ನೋಡಿ ಹೇಳಿದರು - 'ತಮ್ಮಾ! ನಡೆ, ಶ್ರೀನಾಥ ನಿನ್ನನ್ನು ಬರಹೇಳಿದ್ದಾನೆ, ಆತ ನಿನ್ನೊಡನೆ ಸೋಲನ್ನು ಒಪ್ಪಿಕೊಂಡಿದ್ದಾನೆ ಮತ್ತು ಪುನಃ ನಿನ್ನೊಡನೆ ಆಡುತ್ತೇನೆಂದು ಮಾತು ಕೊಟ್ಟಿದ್ದಾನೆ. ಬ್ರಾಹ್ಮಣರ ಮಾತನ್ನು ಕೇಳಿ ಗೋವಿಂದ ಹೇಳಿದ - 'ನಾನು ಹೋಗುವುದಿಲ್ಲ; ಅವನೇ ನನ್ನ ಹತ್ತಿರ ಬರಲಿ. ನಾನು ಅವನನ್ನು ಚೆನ್ನಾಗಿ ಹೊಡೆದಾಗಲೇ ಅವನು ನೆಟ್ಟಗೆ ದಾರಿಗೆ ಬರುತ್ತಾನೆ; ಆದರೆ ಈಗ ಅವನೇ ಸೋಲು ಒಪ್ಪಿಕೊಂಡಿರುವಾಗ, ನಡೆಯಿರಿ, ಬರುತ್ತೇನೆ; ಹೀಗೆಂದು ಹೇಳಿ ಗೋವಿಂದನು ದೇವಾಲಯಕ್ಕೆ ಹೋದನು. ವಿಜಯದ ಗರ್ವದಿಂದ ನಗುತ್ತಾ ಹೇಳಿದ - 'ಏನು ನಾಥಜೀ! ಪುನಃ ಇಂತಹ ಚಾತುರ್ಯ ಮಾಡುವೆಯಾ? ಒಳ್ಳೆಯದೇ ಆಯಿತು, ನೀನು ಸೋಲ ನ್ನೊಪ್ಪಿಕೊಂಡು ನನ್ನನ್ನು ಕರೆಸಿಕೊಂಡಿರುವೆ, ಇಲ್ಲವಾದರೆ ಜೀವಮಾನವೆಲ್ಲಾ ಜ್ಞಾಪಿಸಿಕೊಳ್ಳುವಂತೆ ಮಾಡುತ್ತಿದ್ದೆ.' ಗೋವಿಂದ ಈ ಮಾತುಗಳನ್ನೇನೋ ಆಡಿ ಬಿಟ್ಟನು. ಆದರೆ ಭಗವಾನ್ ಶ್ರೀನಾಥನ ಮುಖ ಸಪ್ಪಗಿರುವುದನ್ನು ಕಂಡು ಅವನ ಸರಳ ಹೃದಯದಲ್ಲಿ ಬಹು ವೇದನೆಯಾಯ್ತು. ಅವನು ಹೇಳಿದ - 'ಅಣ್ಣಾ! ನೀನು ಇದುವರೆಗೂ ನೈವೇದ್ಯವನ್ನು

ಏಕೆ ತೆಗೆದುಕೊಳ್ಳಲಿಲ್ಲ? ನಿನ್ನ ಮುಖ ಉದಾಸೀನವಾಗಿರುವುದನ್ನು ನೋಡಿ ನನಗೆ ಅಳು ಬರುತ್ತಿದೆ. ಅಣ್ಣಾ! ಮತ್ತೆ ಯಾವಾಗಲೂ ನಿನ್ನನ್ನು ಹೊಡೆಯುವುದಿಲ್ಲ. ನಿನ್ನ ಉದಾಸೀನತೆಯನ್ನು ನನ್ನಿಂದ ಸಹಿಸಲಾಗುವುದಿಲ್ಲ. ನಾನು ಇನ್ನು ನಿನ್ನೊಡನೆ ಮುನಿಸಿಕೊಳ್ಳುವುದಿಲ್ಲ. ನೀನು ಪ್ರಸನ್ನನಾಗಿ ನೈವೇದ್ಯವನ್ನು ಸ್ವೀಕರಿಸು.

ದೇವಾಲಯದ ಬಾಗಿಲು ಮುಚ್ಚಲ್ಪಟ್ಟಿತು. ಶ್ರೀನಾಥನು ಪ್ರತ್ಯಕ್ಷನಾಗಿ ಹೇಳಿದ 'ಸಹೋದರ! ನೀನು ಸಹ ಹಸಿದಿರುವೆ ಬಾ, ಇಬ್ಬರೂ ಊಟ ಮಾಡೋಣ.' ನಾಥನ ಪ್ರಸನ್ನ ಮುಖವನ್ನು ನೋಡಿ ಗೋವಿಂದನ ಹೃದಯ ಕಮಲವೂ ಅರಳಿತು. ಇಬ್ಬರೂ ನಗಲಾರಂಭಿಸಿದರು. ಆನಂದದ ಧ್ವನಿಯಿಂದ ದೇವಾಲಯ ತುಂಬಿಹೋಯಿತು. ಗೋವಿಂದನು ಗೋವಿಂದನ ಕೈಗೆ ಮಾರಲ್ಪಟ್ಟನು.

ಅಕಸ್ಮಾತ್ ಬಾಗಿಲು ತೆರೆಯಲ್ಪಟ್ಟಿತು, ಗೋವಿಂದನು ದಿವ್ಯ ಚಕ್ಷುಗಳನ್ನು ಪಡೆದನು ಮತ್ತು ಅವನಿಗೆ ಎಲ್ಲೆಲ್ಲಿಯೂ ಕೇವಲ ಶ್ರೀನಾಥನೇ ಕಾಣುತ್ತಿದ್ದನು.

**ಭಕ್ತನಿಗೂ ಮತ್ತು ಭಗವಂತನಿಗೂ ಜಯವಾಗಲಿ !**

❏❏❏

# ೨. ಮೋಹನ

**ಒಂ**ದು ಚಿಕ್ಕ ಊರಿನಲ್ಲಿ ಒಬ್ಬಳು ಬ್ರಾಹ್ಮಣ ವಿಧವೆ ವಾಸಿಸುತ್ತಿದ್ದಳು. ಆಕೆ ಕಡು ಬಡವಿ, ಆಕೆಗೆ ಒಬ್ಬ ಚಿಕ್ಕವಯಸ್ಸಿನ ಮಗನಲ್ಲದೆ ಬೇರೆ ಯಾರೂ ತನ್ನವರೆಂದು ಇರಲಿಲ್ಲ. ಆಕೆಯು ನಾಲ್ಕಾರು ಮನೆಯಲ್ಲಿ ಭಿಕ್ಷೆ ಬೇಡಿ ಸಿಕ್ಕಿದುದರಲ್ಲಿಯೇ ತಾನು ಮತ್ತು ತನ್ನ ಮಗು ಮೋಹನನ ಹೊಟ್ಟೆಪಾಡು ನಿರ್ವಹಿಸುತ್ತಾ ಇದ್ದಳು. ಬಹಳಷ್ಟು ಕಡಿಮೆ ಭಿಕ್ಷೆ ಸಿಕ್ಕಿದ ದಿವಸ ಆಕೆಯು ತಾನು ಹಸಿದಿದ್ದು ಮಗುವಿಗೇ ತಿನ್ನಿಸಿಬಿಟ್ಟು ಅವನನ್ನು ಎದೆಗಪ್ಪಿಕೊಂಡು ಸಂತೋಷದಿಂದ ಮಲಗಿಬಿಡುತ್ತಿದ್ದಳು. ಊರಿನಲ್ಲಿ ತೃಪ್ತಿಯಿಂದ ಜೀವನ ಸಾಗಿಸುತ್ತಿದ್ದ ಅನೇಕ ಜನರೂ ಇದ್ದರು; ಆದರೆ ಯಾರಿಗೂ ಈ ಅಸಹಾಯಕ ಬ್ರಾಹ್ಮಣ ಹೆಂಗಸಿನ ಬಗ್ಗೆ ಕನಿಕರ ಇರಲಿಲ್ಲ. ಮಹಡಿ-ಮನೆಗಳಲ್ಲಿ ವಾಸಿಸುವ ಶ್ರೀಮಂತರು ಅದೂ-ಇದೂ ಹೊಟ್ಟೆ ತುಂಬಾ ತಿಂದೂ-ತಿಂದೂ ಅಜೀರ್ಣ ಉಂಟಾಗುವಂತೆ ಮಾಡಿಕೊಳ್ಳುತ್ತಾರೆ. ಅವರಿಗೆ ತಿಂದ ಅನ್ನವೆಲ್ಲಾ ಪಚನವಾಗುವುದಿಲ್ಲ. ಆದರೂ ಬಡವರ ಸ್ಥಿತಿ ಅವರಿಗೆ ತಿಳಿಯುವುದಿಲ್ಲವೇಕೆ? ದೇಶದಲ್ಲಿ ಎಷ್ಟೊಂದು ಅಸಹಾಯಕ ಮತ್ತು ಬಡವರಾದ ನರ-ನಾರಿಯರು ಹಸಿವಿನ ಜ್ವಾಲೆಯಿಂದ ಪರಿತಪಿಸುತ್ತಾ ಸಾಯುತ್ತಿದ್ದಾರೆಯೋ ತಿಳಿಯದು. ಅವರ ಕಡೆಗೆ ಯಾರೂ ದೃಷ್ಟಿ ಹರಿಸುವುದಿಲ್ಲ. ಆದರೆ, ಅನಾಥರಿಗೆ ಭಗವಂತನೇ ನಾಥನಾಗಿದ್ದಾನೆ. ಆ ವಿಶ್ವನಾಥನು ಯಾವ ರೀತಿಯಲ್ಲಾದರೂ ಬಡವರ ಮುರುಕಲು ಗುಡಿಸಲಿಗೆ ಅವರ ಹೊಟ್ಟೆ ತುಂಬಿಸಲು ಕಿಂಚಿತ್ ಆಹಾರವನ್ನು ಖಂಡಿತವಾಗಿಯೂ ತಲುಪಿಸುತ್ತಾನೆ.

ಬ್ರಾಹ್ಮಣ ಹೆಂಗಸಿನ ಬಾಲಕ ಮೋಹನನ ವಯಸ್ಸು ಆರು ವರ್ಷಗಳಾಯ್ತು. ಬ್ರಾಹ್ಮಣ-ವಂಶ; ಏನಾದರೂ ಓದಲೇಬೇಕು. ಆದರೆ ಯಾವ ರೀತಿ ಓದಿಸುವುದು? ಊರಿನ ಹೆಚ್ಚು ಜನರ ದೃಷ್ಟಿಯಲ್ಲಿ ಆಕೆ ಬಡವಳಾದ ಕಾರಣ ತಿರಸ್ಕೃತಳಾಗಿದ್ದಳು. ಬ್ರಾಹ್ಮಣ ಹೆಂಗಸು ಬೇರೊಂದು ಊರಿನಲ್ಲಿ ಮೋಹನನ ವಿದ್ಯಾಭ್ಯಾಸದ ವ್ಯವಸ್ಥೆ ಮಾಡಿದಳು. ಒಂದು ದಿವಸ ಅವಳು ಅವನನ್ನು ಜೊತೆಯಲ್ಲಿ

ಕರೆದುಕೊಂಡು ಪರ ಊರಿನ ಗುರುಗಳ ಹತ್ತಿರಕ್ಕೆ ಹೋಗಿ ಅಳಲಾರಂಭಿಸಿದಳು. ಗುರುಗಳಿಗೆ ದಯೆ ಉಂಟಾಯಿತು. ಅವರು ಬಾಲಕನಿಗೆ ವಿದ್ಯಾಭ್ಯಾಸ ಮಾಡಿಸಲು ಒಪ್ಪಿಕೊಂಡರು. ಮೋಹನನು ವಿದ್ಯಾಭ್ಯಾಸಕ್ಕಾಗಿ ಹೋಗಲಾರಂಭಿಸಿದನು. ಆ ಊರು ಐದಾರು ಮೈಲಿ ದೂರವಿತ್ತು. ಆದರೆ ಬಡ ವಿಧವೆ ಬಾಲಕನಿಗೆ ವಾಹನವೆಲ್ಲಿಂದ ತಂದಾಳು? ಮೋಹನ ಕಾಲ್ನಡಿಗೆಯಲ್ಲಿಯೇ ಹೋಗಿಬರುತ್ತಿದ್ದನು. ಆ ಕಾಲದಲ್ಲಿ ಗುರುಗಳ ಮನೆಯಲ್ಲಿ ಬಾಲಕರು ಇರುವ ಪದ್ಧತಿಯಿದ್ದರೂ ಈ ಮೋಹನ ಬಹಳ ಚಿಕ್ಕವನಾದ ಕಾರಣ ಅವನು ಗುರುಗಳ ಮನೆಯಲ್ಲಿ ಉಳಿದುಕೊಳ್ಳಲು ಇಚ್ಛಿಸುತ್ತಿರಲಿಲ್ಲ ಮತ್ತು ತಾಯಿಯೂ ರಾತ್ರಿಯಲ್ಲಿ ತನ್ನ ಏಕಮಾತ್ರ ಮಗುವನ್ನು ಸೆರಗಿನಲ್ಲಿ ಅಡಗಿಸಿಕೊಂಡು ನಿದ್ರಿಸದ ಹೊರತು ನೆಮ್ಮದಿ ಪಡೆಯುತ್ತಿರಲಿಲ್ಲ. ದಾರಿಯಲ್ಲಿ ಸ್ವಲ್ಪ ದೂರ ನಿರ್ಜನವಾದ ಅರಣ್ಯವಿತ್ತು. ಮೋಹನನು ಆ ಮಾರ್ಗವಾಗಿಯೇ ಹೋಗಬೇಕಾಗಿತ್ತು. ಬೆಳಿಗ್ಗೆ ಸೂರ್ಯೋದಯದ ಸಮಯದಲ್ಲಿಯೇ ಅವನು ಹೋಗುತ್ತಿದ್ದ ಮತ್ತು ಸಾಯಂಕಾಲ ಹಿಂದಿರುಗುವಷ್ಟರಲ್ಲಿ ಕತ್ತಲಾಗುತ್ತಿತ್ತು. ಆದ್ದರಿಂದ ಮೋಹನನಿಗೆ ಕಾಡಿನಲ್ಲಿ ಬಹಳ ಭಯವಾಗುತ್ತಿತ್ತು.

ಒಂದು ದಿವಸ ಗುರುಗಳ ಮನೆಯಲ್ಲಿ ಯಾವುದೋ ಸಮಾರಂಭವಿತ್ತು. ಆದುದರಿಂದ ಮೋಹನ ಅಲ್ಲಿಂದ ಹಿಂದಿರುಗಲು ಸ್ವಲ್ಪ ತಡವಾಯಿತು. ಕೃಷ್ಣಪಕ್ಷವಾದ್ದರಿಂದ ಕಾಡಿನಲ್ಲಿ ಬರುವಷ್ಟರಲ್ಲಿ ಗಾಢವಾದ ಕತ್ತಲಾಗಿಹೋಗಿತ್ತು. ಮೋಹನ ದಾರಿಯಲ್ಲಿ ಬಹಳ ಹೆದರಿದ, ಕಾಡು ಪ್ರಾಣಿಗಳ ಮತ್ತು ನರಿಗಳ ಶಬ್ದವನ್ನು ಕೇಳಿ ಅವನು ನಡುಗಲಾರಂಭಿಸಿದ. ಬ್ರಾಹ್ಮಣಿಯು ಹೊತ್ತು ಮೀರಿದ್ದರಿಂದ ಅವನನ್ನು ಹುಡುಕಿಕೊಂಡು ಹೊರಟಳು. ಭಯದಿಂದ ನಡುಗುತ್ತಾ ಇದ್ದ ತನ್ನ ಮುದ್ದು ಮಗನನ್ನು ಎತ್ತಿಕೊಂಡು ಮನೆಗೆ ಬಂದಳು. ಎಲ್ಲವೂ ಶಾಂತವಾದ ನಂತರ ಮೋಹನ ತಾಯಿಯೊಡನೆ ಹೇಳಿದನು - 'ಅಮ್ಮಾ! ನಾನು ದಿನವೂ ಕಾಡಿನ ಮೂಲಕ ಹೋಗಿಬರುತ್ತಿದ್ದೇನೆ, ನನಗೆ ಅಲ್ಲಿ ಬಹಳ ಭಯವಾಗುತ್ತಿದೆ, ಈ ದಿನ ನೀನು ಬರದೇ ಇದ್ದಿದ್ದರೆ ನನ್ನ ಗತಿ ಏನಾಗುತ್ತಿತ್ತೋ ಕಾಣೆ? ಬೇರೆ ಹುಡುಗರ ಜೊತೆಯಲ್ಲಿ ಅವರ ಆಳುಗಳು ಹೋಗುತ್ತಾರೆ.

ಅವರು ಅವರನ್ನು ಜೋಪಾನವಾಗಿ ನೋಡಿಕೊಳ್ಳುತ್ತಾರೆ. ನನಗೂ ಒಬ್ಬ ಆಳನ್ನು ಇಡಲಾರೆಯಾ? ಬಾಲಕನ ಸರಳವಾದ ಮಾತುಗಳನ್ನು ಕೇಳಿ ತನ್ನ ದಾರಿದ್ರ್ಯದ ಅರಿವು ಉಂಟಾದ ಕೂಡಲೇ ಆಕೆಯ ಕಣ್ಣುಗಳು ಧಾರಾಕಾರವಾಗಿ ನೀರು ಸುರುಸಿದವು. ಆಕೆ ಬಹಳ ಧೈರ್ಯ ತಂದುಕೊಂಡಳು, ಆದರೆ ಸಹಿಸಿ ಕೊಳಲಾಗಲಿಲ್ಲ. ಅವಳು ಅಳುತ್ತಾ ಹೇಳಿದಳು - 'ಮಗೂ! ನನ್ನ ದುಃಖದ ಸ್ಥಿತಿಯನ್ನು ನಿನಗೆ ಹೇಗೆ ತಿಳಿಸಲಿ, ನಾವು ಬಹಳ ಬಡವರಪ್ಪ, ನಿನಗೆ ಆಳನ್ನು ನೇಮಿಸಲು ನನ್ನಲ್ಲಿ ಹಣವೆಲ್ಲಿದೆಯಪ್ಪಾ? ತಾಯಿಯ ಕಣ್ಣೀರನ್ನು ಕಂಡು ಮೋಹನನೂ ಸಹ ಅತ್ತನು. ಅವನು ಹೇಳಿದನು - 'ಅಮ್ಮಾ! ನೀನು ಅಳುವುದೇಕೆ? ನೀನು ಅಳುವುದನ್ನು ನೋಡಿದರೆ ನನಗೂ ಅಳು ಬರುತ್ತದೆ. ಅಮ್ಮಾ! ನಮಗೆ ಬೇರೆ ಯಾರೂ ಇಲ್ಲವೆ? ಮೋಹನನ ಸರಳವಾದ ಮರ್ಮಭೇದಕ ಪ್ರಶ್ನೆಯಿಂದ ಬ್ರಾಹ್ಮಣಿಯ ಹೃದಯ ವ್ಯಥೆಯಿಂದ ತುಂಬಿಹೋಯಿತು. ಭೂಮಿಯೇ ತಿರುಗಿ ಕಾಲು ಜಾರಿದಂತಾಯಿತು, ಧೈರ್ಯಗೆಟ್ಟಳು, ಆದರೆ ಆಕೆಗೆ ತಕ್ಷಣ ದೇವರು ಅನಾಥನಾಥನಾಗಿದ್ದಾನೆ ಎಂಬುದು ಮನಸ್ಸಿಗೆ ಹೊಳೆಯಿತು. ಆತ ನಮ್ಮವನಲ್ಲವೇ? ಈ ಸ್ಮರಣೆ ಮಾಡಿದ ಕೂಡಲೇ ವಿಧವೆಯ ಹೃದಯಕ್ಕೆ ಬಲ ಬಂದಿತು. ಕಣ್ಣೀರು ಇದ್ದಕ್ಕಿದ್ದಂತೆಯೇ ಬತ್ತಿಹೋಯಿತು. 'ಮಗೂ! ಏಕಿಲ್ಲ, ಗೋಪಾಲನಿದ್ದಾನೆ' ಎಂದು ಆಕೆ ಹೇಳಿದಳು. ಬಾಲಕ ಕೇಳಿದನು - 'ಅಮ್ಮಾ! ಗೋಪಾಲ ನನಗೆ ಏನಾಗಬೇಕು?' ಸ್ನೇಹಮಯೀ ಬ್ರಾಹ್ಮಣಿಯ ಬಾಯಿಂದ ಈ ಮಾತು ಹೊರಬಿತ್ತು : 'ಮಗೂ! ಗೋಪಾಲ ನಿನಗೆ ಅಣ್ಣ' ಬಾಲಕ ಹೇಳಿದ - 'ಅಮ್ಮಾ! ಆತನೆಲ್ಲಿದ್ದಾನೆ? ನಾನು ಆತನನ್ನು ಯಾವಾಗಲೂ ನೋಡಲೇ ಇಲ್ಲ!' ಬ್ರಾಹ್ಮಣಿಯ ಹೃದಯ ಭಗತ್ಪ್ರೇಮದಿಂದ ತುಂಬಿ ಹೋಯಿತು. ಮನುಷ್ಯನು ಎಲ್ಲಾ ಕಡೆಗಳಿಂದಲೂ ಪೂರ್ಣ ನಿರಾಶನಾಗಿ ಭಗವಂತನ ಶರಣಾಗತಿಯಲ್ಲಿ ನಂಬಿಕೆಯಿಟ್ಟು ಆ ಕಡೆಗೆ ನೋಡಿದಾಗ ಅವನಿಗೆ ತಕ್ಷಣ ಅಶ್ವಾಸನೆ ಮತ್ತು ಆಶ್ರಯ ದೊರೆಯುತ್ತದೆ. ಆ ಅವ್ಯಕ್ತ ಆಶ್ರಯವನ್ನು ಪಡೆದುಕೊಂಡ ಕೂಡಲೇ ಅವನ ಹೃದಯದಲ್ಲಿ ಬಲ, ಬುದ್ಧಿ, ತೇಜಸ್ಸು ಮತ್ತು ಜ್ಞಾನ ಸ್ವತಃ ವಿಕಾಸಗೊಳ್ಳುತ್ತದೆ. ಭಗವತ್ಪ್ರೇಮದಿಂದ

ಹೃದಯ ತುಂಬಿಹೋಗುತ್ತದೆ. ಬ್ರಾಹ್ಮಣಿಯು ಭ್ರಾಂತಿರಹಿತ ಮನಸ್ಸಿನಿಂದ ಹೀಗೆ ಹೇಳಿದಳು -

'ಮಗೂ! ನನ್ನ ಆ ಗೋಪಾಲನು ಎಲ್ಲಾ ಸ್ಥಳಗಳಲ್ಲಿಯೂ ಇದ್ದಾನೆ, ನೀರು-ಭೂಮಿ, ಬೆಂಕಿ-ಗಾಳಿ, ಆಕಾಶ-ಪಾತಾಳ, ಹಣ್ಣು-ಹೂ, ಸಮುದ್ರ-ನದಿ ಎಲ್ಲದರಲ್ಲಿಯೂ ಆತನಿರುತ್ತಾನೆ. ಜಗತ್ತಿನಲ್ಲಿ ಅವನಿಲ್ಲದಿರುವ ಯಾವ ಸ್ಥಳವೂ ಇಲ್ಲ. ಆದರೆ ಅವನು ಸಹಜವಾಗಿ ಕಾಣಿಸುವುದಿಲ್ಲ. ಅವನನ್ನು ನೋಡುವುದಕ್ಕಾಗಿ ಬಹಳ ವ್ಯಾಕುಲರಾದಾಗಲೇ ಅವನು ಕಾಣುತ್ತಾನೆ. ಒಂದು ಬಾರಿ ವೃಂದಾವನದಲ್ಲಿ ಗೋಪಿಕಾಸ್ತ್ರೀಯರು ವ್ಯಾಕುಲಗೊಂಡಾಗ ಅವರಿಗೆ ಆತ ಕಾಣಿಸಿಕೊಂಡಿದ್ದನು. ಒಂದು ಸಲ ಐದು ವರ್ಷದ ಬಾಲಕ ಧ್ರುವನಿಗೆ ಕಾಣಿಸಿಕೊಂಡಿದ್ದನು. ಒಂದು ಸಲ ಆತನನ್ನು ನೋಡಿದವರು ಆತನ ಸೌಂದರ್ಯ ಮತ್ತು ಸ್ವಭಾವಕ್ಕೆ ಶಾಶ್ವತವಾಗಿ ಮೋಹಿತರಾಗಿಬಿಡುತ್ತಾರೆ.'

ಮೋಹನ - ಅಮ್ಮಾ! ನನ್ನ ಅಣ್ಣ ಗೋಪಾಲ ಯಾವಾಗಲಾದರೂ ನಮ್ಮ ಮನೆಗೆ ಬರುವುದಿಲ್ಲವೇ?'

ಬ್ರಾಹ್ಮಣಿ - ಏಕೆ ಬರುವುದಿಲ್ಲ? ಅವನು ಯಾವಾಗಲೂ ಇಲ್ಲಿಯೇ ಇರುತ್ತಾನೆ.

ಮೋಹನ - ನೀನು ಅವನನ್ನು ಯಾವಾಗಲಾದರೂ ನೋಡಿರುವಿಯಾ?

ಬ್ರಾಹ್ಮಣಿ - ಇಲ್ಲಾ! ನಾನು ಅವನನ್ನು ನೋಡಿಲ್ಲ, ನಾನು ಅವನಿಗಾಗಿ ಎಂದೂ ವ್ಯಾಕುಲಪಟ್ಟಿಲ್ಲ. ಆದರೆ ವ್ಯಾಕುಲ ಪಟ್ಟುಕೊಂಡರೆ ಅವನು ಖಂಡಿತ ದರ್ಶನಕೊಡುತ್ತಾನೆಂದು ತಿಳಿದುಕೊಂಡಿದ್ದೇನೆ.

ಮೋಹನ - ಹಾಗಾದರೆ ನೀನು ಏಕೆ ವ್ಯಾಕುಲ ಪಡುವುದಿಲ್ಲ? ಅಂತಹ ಸುಂದರ ರೂಪು ಮತ್ತು ಒಳ್ಳೆಯ ಸ್ವಭಾವದವನನ್ನು ನೋಡದೆ ಹೇಗೆ ಇರುವುದಕ್ಕಾಗುತ್ತದೆ? ಅಮ್ಮಾ! ನಾನಂತೂ ಅವನನ್ನು ನೋಡದೇ ಇರಲಾರೆ. ನಾನು ಅವನಿಗಾಗಿ ಹೇಗೆ ವ್ಯಾಕುಲನಾಗಬೇಕು. ನನಗೆ ಹೇಳು?

ಬ್ರಾಹ್ಮಣಿ - ಮಗೂ ! ಹಸಿವಾದಾಗ ನೀನು ಊಟ ಮಾಡುವುದಕ್ಕಾಗಿ

ವ್ಯಾಕುಲನಾಗುವಂತೆ, ಬಾಯಾರಿದಾಗ ನೀರುಬೇಕೆಂದು ಕೂಗಾಡಿಕೊಳ್ಳುವಂತೆ, ಇಂದು ಕಾಡಿನಲ್ಲಿ ನೀನು ನನ್ನನ್ನು ನೋಡುವುದಕ್ಕಾಗಿ ಗಾಬರಿಗೊಂಡಂತೆ, ವ್ಯಾಕುಲನಾಗಿ ಕರೆಯುವುದರಿಂದ ಅವನು ಖಂಡಿತ ಬರುತ್ತಾನೆ. ಅಂದು ನಾನು ನಿನಗೊಂದು ಕಥೆ ಹೇಳಿರಲಿಲ್ಲವೇ, ಅದನ್ನು ಮರೆತುಬಿಟ್ಟೆಯಾ? ಪಾಂಡವರ ಪತ್ನೀ ದ್ರೌಪದಿಯ ಸೀರೆಯನ್ನು ದುಃಶ್ಯಾಸನನು ಸಭೆಯಲ್ಲಿ ಸೆಳೆದು ವಿವಸ್ತ್ರ ಮಾಡಲು ಪ್ರಯತ್ನಿಸಿದಾಗ ಆಕೆಯು ವ್ಯಾಕುಲಳಾಗಿ ಕೂಗಿಕೊಂಡಿದ್ದಳು; ಅವಳ ಕೂಗನ್ನು ಕೇಳಿದ ಕೂಡಲೇ ನನ್ನ ಗೋಪಾಲ ಅಲ್ಲಿಗೆ ಬಂದು ಆಕೆಯನ್ನು ಕಾಪಾಡಿದನು.

ಮೋಹನ - ಏನು ಅವನೇ ನನ್ನ ಅಣ್ಣ ಗೋಪಾಲನೇ?

ಬ್ರಾಹ್ಮಣಿ - ಹೌದು ಮಗು! ಅವನೇ. ಕರೆದ ಕೂಡಲೇ ಅವನು ಬರುತ್ತಾನೆ ಮತ್ತು ಎಲ್ಲಾ ಸಂಕಟಗಳನ್ನೂ ಪರಿಹರಿಸಿಬಿಡುತ್ತಾನೆ.

ಮೋಹನ - ಹಾಗಾದರೆ ಅಮ್ಮಾ! ನಾನು ಏನು ಮಾಡಲಿ? ಹೇಗೆ ಕೂಗಿ ಕರೆಯಲಿ?

ಬ್ರಾಹ್ಮಣಿಯು ದೃಢ ನಂಬಿಕೆಯಿಂದ ಹೇಳಿದಳು - 'ನೀನು ಹೋಗುವ ದಾರಿಯಲ್ಲಿರುವ ಕಾಡಿನಲ್ಲಿಯೇ ನಿನ್ನ ಅಣ್ಣ ಗೋಪಾಲನಿರುತ್ತಾನೆ. ಅವನನ್ನು ಹೃದಯಾಂತರಾಳದಿಂದ ಕೂಗಬೇಕು, ನಿನ್ನ ವ್ಯಾಕುಲತೆಯ ಕೂಗನ್ನು ಕೇಳಿಸಿಕೊಂಡ ಕೂಡಲೇ ಅವನು ಬಂದು ನಿನ್ನ ಜೊತೆಗೂಡುವನು!'

ಸರಳ ಸ್ವಭಾವದ, ನಂಬಿಕೆಯುಳ್ಳ ಬಾಲಕನು ಮರುದಿವಸ ಕಾಡನ್ನು ಸೇರಿದ ಕೂಡಲೇ ಅತ್ತಿತ್ತ ನೋಡಿ ಕೂಗಿ ಕರೆದನು - 'ಅಣ್ಣಾ! ಗೋಪಾಲಣ್ಣ! ನೀನು ಎಲ್ಲಿರುವೆ? ಬಾ, ನನಗೆ, ಭಯವಾಗುತ್ತಿದೆ?

'ಇಲ್ಲೇ ಇದ್ದೇನೆ ಬಂದೆ!' ಎಂದು ಯಾರೋ ಹೇಳುತ್ತಿರುವ ಹಾಗೆ ಬಾಲಕನಿಗೆ ಕೇಳಿಸಿತು. ಮಧುರ ಧ್ವನಿಯನ್ನು ಕೇಳಿದ ಕೂಡಲೇ ಬಾಲಕನಿಗೆ ಸಮಾಧಾನವಾಯ್ತು. ಅವನ ಭಯ ಓಡಿಹೋಯಿತು. ಸ್ವಲ್ಪ ದೂರ ಹೋದ ಬಳಿಕ ಅವನ ವಯಸ್ಸಿನವನೇ ಆದ ನಯನ-ಮನೋಹರ ಒಬ್ಬ ಚಿಕ್ಕ

ಸುಕುಮಾರ ಶ್ಯಾಮಸುಂದರ ಗೊಲ್ಲ-ಬಾಲಕನು ಕಾಡಿನ ಮರಗಳ ಗುಂಪಿನಿಂದ ಹೊರಗೆ ಬಂದು ಮೋಹನನೊಡನೆ ಆಟವಾಡಲು ಪ್ರಾರಂಭಿಸಿದನು. ಪ್ರೀತಿಯಿಂದ ಮಾತನಾಡುತ್ತಾ ಕೈಹಿಡಿದುಕೊಂಡು ಜೊತೆಗೂಡಿ ನಡೆಯತೊಡಗಿದ. ಗೋಪಾಲನು ಬಂದ ಕೂಡಲೇ ಮೋಹನನ ದುಃಖವೆಲ್ಲಾ ಮಾಯವಾಯಿತು. ಮೋಹನನು ಮನೆಗೆ ಬಂದು ಎಲ್ಲವನ್ನೂ ತಾಯಿಯೊಡನೆ ಹೇಳಿಬಿಟ್ಟನು. ಬ್ರಾಹ್ಮಣಿಯು ಭಗವಂತನ ದಯೆಯೆಂದು ತಿಳಿದುಕೊಂಡು ಅತ್ತಳು. 'ಯಾವ ದಯಾಮಯನು ಬಾಲಕ ಧ್ರುವನ ಕೂಗನ್ನು ಕೇಳಿಸಿಕೊಂಡು ಅವನಿಗೆ ದರ್ಶನ ಕೊಟ್ಟಿದ್ದನೋ ಅವನೇ ನನ್ನ ಮಗುವಿನ ಕರೆಗೆ ಬಂದಿದ್ದರೆ ಅದರಲ್ಲಿ ಆಶ್ಚರ್ಯವೇನು!' - ಎಂದು ಆಕೆ ಯೋಚಿಸಿದಳು.

ಕಾಲಾಂತರದಲ್ಲಿ ಗುರುಗಳ ತಂದೆಯವರ ದೇಹಾಂತ್ಯವಾಯಿತು, ಶ್ರಾದ್ಧದ ವ್ಯವಸ್ಥೆಯಾಯ್ತು. ಶ್ರಾದ್ಧಕ್ಕಾಗಿ ಎಲ್ಲಾ ವಿದ್ಯಾರ್ಥಿಗಳೂ ಗುರುಗಳಿಗೆ ಏನಾದರೂ ಕಾಣಿಕೆ ಕೊಡುವರು. ಬ್ರಾಹ್ಮಣಿಯ ಮೋಹನನೂ ಸಹ ಸರಳ ಸ್ವಭಾವದಿಂದ ಗುರುಗಳನ್ನು ಕೇಳಿದನು - 'ಗುರುಗಳೇ! ನನಗೇನು ಅಪ್ಪಣೆ ಕೊಡುವಿರಿ, ನಾನು ಏನನ್ನು ತೆಗೆದುಕೊಂಡು ಬರಲಿ?' ಗುರುಗಳಿಗೆ ಬ್ರಾಹ್ಮಣಿಯ ಪರಿಸ್ಥಿತಿ ಚೆನ್ನಾಗಿ ಗೊತ್ತಿತ್ತು. ಅವರು ಹೇಳಿದರು, 'ಮಗೂ! ನೀನು ಏನನ್ನೂ ತರಬೇಕಾಗಿಲ್ಲ. ಅವನು ಹೇಳಿದನು - 'ಇಲ್ಲಾ ಗುರುಗಳೇ! ಎಲ್ಲಾ ಹುಡುಗರೂ ತರುತ್ತಿರುವಾಗ, ಏನನ್ನಾದರೂ ತೆಗೆದುಕೊಂಡು ಬರುವಂತೆ ನನಗೂ ಆಜ್ಞೆ ಮಾಡಿರಿ.' ಬಾಲಕನು ಪದೇ-ಪದೇ ಒತ್ತಾಯ ಮಾಡಿದ ಮೇಲೆ ಗುರುಗಳು ಹೇಳಿಬಿಟ್ಟರು - 'ಒಂದು ಲೋಟಾ ಹಾಲು ತೆಗೆದುಕೊಂಡು ಬಾ.' ಮೋಹನ ಸಂತುಷ್ಟನಾಗಿ ಮನೆಗೆ ಬಂದನು. ಅವನು ತಾಯಿಗೆ ಹೇಳಿದನು - 'ಅಮ್ಮಾ! ನಾಳೆ ಗುರುಗಳ ತಂದೆಯವರ ಶ್ರಾದ್ಧ ನಡೆಯಲಿದೆ, ಎಲ್ಲಾ ಹುಡುಗರೂ ಏನಾದರೊಂದು ಪದಾರ್ಥವನ್ನು ತೆಗೆದುಕೊಂಡು ಬರುವರು. ನನಗೆ ಗುರುಗಳು ಕೇವಲ ಒಂದು ಲೋಟ ಹಾಲನ್ನು ತರುವಂತೆ ಹೇಳಿದ್ದಾರೆ. ಆದ್ದರಿಂದ ನೀನು ಸ್ವಲ್ಪ ಹಾಲನ್ನು ತಂದುಕೊಡು' ಬ್ರಾಹ್ಮಣಿಯ ಮನೆ ದರಿದ್ರತೆಯ ನಿವಾಸ ಸ್ಥಾನವೋ ಎಂಬಂತಿತ್ತು. ಅಶ್ವತ್ಥಾಮನ ತಾಯಿಯು ಒಂದು ದಿನ ಮಗುವನ್ನು ಮರೆಸುವುದಕ್ಕಾಗಿ

ಹಾಲಿಗೆ ಬದಲಾಗಿ ಹಿಟ್ಟು ಬೆರೆಸಿದ ನೀರಿನಿಂದ ಉಪಯೋಗ ಪಡೆಯಬೇಕಾಯ್ತು. ಬ್ರಾಹ್ಮಣಿಯು ಹೇಳಿದಳು - 'ಮಗೂ! ಮನೆಯಲ್ಲಾದರೋ ಒಂದು ಕಾಸೂ ಇಲ್ಲ, ಹಾಲನ್ನು ಎಲ್ಲಿಂದ ತರಲಿ? ಬೇಡಿ-ಕಾಡಿ ತರುವುದಕ್ಕೆ ಒಂದು ಚಿಕ್ಕ ಲೋಟವೂ ಸಹ ಮನೆಯಲ್ಲಿಲ್ಲ!' ಮೋಹನ ಅಳುತ್ತಾ ಹೇಳಿದ, - 'ಅಮ್ಮಾ! ನಾನು ಗುರುಗಳಿಗೆ ಹೇಗೆ ಮುಖ ತೋರಿಸುವುದು?' ತಾಯಿಯು ದೃಢವಾದ ನಂಬಿಕೆಯಿಂದ ಹೇಳಿದಳು - 'ಮಗು! ಗೋಪಾಲಣ್ಣನೊಡನೆ ಹೇಳು, ಅವನು ಬೇಕಾದರೆ ಹಾಲಿನ ವ್ಯವಸ್ಥೆಯನ್ನು ಖಂಡಿತ ಮಾಡಿಕೊಡುವನು!' ಬಾಲಕನಿಗೆ ಸಂತೋಷವಾಯ್ತು. ಬೆಳಗ್ಗೆ ಗುರುಗಳ ಮನೆಗೆ ಹೋಗುವಾಗ ಕಾಡಿನಲ್ಲಿ ಎಂದಿನಂತೆ ಗೋಪಾಲಣ್ಣನು ಸಿಕ್ಕಿದಾಗ ಮೋಹನ ಹೇಳಿದನು - 'ಅಣ್ಣಾ! ಈ ದಿವಸ ನನ್ನ ಗುರುಗಳ ತಂದೆಯವರ ಶ್ರಾದ್ಧವಿದೆ. ಅವರು ಒಂದು ಲೋಟ ಹಾಲನ್ನು ಕೇಳಿದ್ದಾರೆ, ಅಮ್ಮನು ಗೋಪಾಲಣ್ಣನ ಸಂಗಡ ಹೇಳು, ಅವನು ನಿನಗೆ ತಂದು ಕೊಡುವನು ಎಂದು ಹೇಳಿದ್ದಾಳೆ. ಅಣ್ಣಾ! ನನಗೆ ಈಗಲೇ ಹಾಲು ತಂದು ಕೊಡು.' ಗೋಪಾಲನು ಬಹಳ ಪ್ರೀತಿಯಿಂದ ಹೇಳಿದನು, 'ತಮ್ಮಾ! ನನಗೆ ಈ ವಿಚಾರ ಮೊದಲೇ ಗೊತ್ತಾಗಿತ್ತು. ನೋಡು, ನಾನು ಹಾಲು ತುಂಬಿದ ಲೋಟವನ್ನು ಜೊತೆಯಲ್ಲಿಯೇ ತಂದಿದ್ದೇನೆ. ನೀನು ಇದನ್ನು ತೆಗೆದುಕೊಂಡು ಹೋಗು.' ಮೋಹನನು ಗೋಪಾಲನಿಂದ ಹಾಲಿನ ಲೋಟವನ್ನು ತೆಗೆದುಕೊಂಡನು. ಇಂದು ಅವನ ಆನಂದಕ್ಕೆ ಮಿತಿಯೇ ಇರಲಿಲ್ಲ. ಸಫಲತೆಯಿಂದ ಯಾರಿಗೆ ತಾನೇ ಆನಂದವಾಗುವುದಿಲ್ಲ. ರಾಜ್ಯದ ಆಸೆಯುಳ್ಳವರಿಗೆ ರಾಜ್ಯ ದೊರೆತಾಗ ಆನಂದವುಂಟಾಗುತ್ತದೆ, ಅದೇ ಆನಂದ ಬೇಕಾದಷ್ಟು ಸಾಮಾನ್ಯ ಆಟಿಕೆಗಳು ದೊರೆಯುವುದರಿಂದ ಒಂದು ಮಗುವಿಗೂ ಆಗುತ್ತದೆ. ವಾಸ್ತವಿಕವಾಗಿ ಎರಡೂ ಆಟಿಕೆಗಳೇ ಆಗಿವೆ. ನಿಜವಾದ ಆನಂದ ರಾಜ್ಯದಿಂದಲೂ ಇಲ್ಲ ಹಾಗೂ ಸಾಮಾನ್ಯ ಆಟಿಕೆಗಳಿಂದಲೂ ಇಲ್ಲ; ಅದಾದರೋ ತನ್ನ ಅಂತರಂಗದಲ್ಲಿದೆ. ಅದು ಮನೋರಥವು ಪೂರ್ಣಗೊಂಡಾಗ ಮನಸ್ಸಿನಲ್ಲಿ ಒಂದು ಸಲ ವಿದ್ಯುತ್ತಿನಂತೆ ಮಿಂಚಿ ಬಿಡುತ್ತದೆ ಮತ್ತು ಬೇರೊಂದು ಮನೋರಥವು ಉಂಟಾಗದಿರುವವರೆಗೂ ಮಿನುಗುತ್ತಿರುತ್ತದೆ. ಆದರೆ ಇಲ್ಲಿ ಗೋಪಾಲನು

ಕೊಟ್ಟ ಹಾಲಿನಲ್ಲಿ ಅದ್ಭುತವಾದ ಆನಂದವೇ ಇತ್ತು. ಭಗತ್ಕೃಪೆಯಿಂದ ಇದು ದೊರೆಯುವ ಭಾಗ್ಯವಂತನಿಗೇ ಈ ಆನಂದದ ಸ್ವರೂಪ ತಿಳಿಯುತ್ತದೆ. ಸಾಮಾನ್ಯರಿಗೆ ಇದು ಕಲ್ಪನೆಗೂ ಮೀರಿದ ಮಾತಾಗಿದೆ.

ಮೋಹನ ನಗುತ್ತಾ ಹಾಲಿನ ಚಿಕ್ಕ ಲೋಟವನ್ನು ತೆಗೆದುಕೊಂಡು ಗುರುಗಳ ಸಮೀಪಕ್ಕೆ ಹೋದನು. ಹುಡುಗರು ತೆಗೆದುಕೊಂಡು ಬಂದಿದ್ದ ಸಾಮಗ್ರಿಗಳನ್ನು ಗುರುಗಳ ಸೇವಕರು ಅವರ ಬಳಿಗೆ ಹೋಗಿ ಅವರಿಗೆ ತೋರಿಸಿ-ತೋರಿಸಿ ಬೇರೆ ಇಡುತ್ತಿದ್ದರು. ಬಾಲಕನು ತನ್ನ ಹಾಲಿಗೂ ಸಹ ಸರತಿ ಬರುವುದೆಂದು ತಿಳಿದುಕೊಂಡನು. ಆದರೆ ಆ ತೀರಾ ಚಿಕ್ಕ ಲೋಟದ ಕಡೆಗೆ ಯಾರೂ ಗಮನಕೊಡಲಿಲ್ಲ. ಬಾಲಕನು ಸಪ್ಪೆಮೋರೆಯಿಂದ ಗುರುಗಳಿಗೆ ಹೇಳಿದನು - 'ಸ್ವಾಮಿ! ನಾನೂ ಸಹ ಹಾಲು ತಂದಿದ್ದೇನೆ.' ಗುರುಗಳು ದೊಡ್ಡ-ದೊಡ್ಡ ಸಾಮಾಗ್ರಿಗಳ ಮೇಲ್ವಿಚಾರಣೆ ಮಾಡುತ್ತಿದ್ದರು. ಅವರು ಬಾಲಕನ ಮಾತಿಗೆ ಯಾವ ಉತ್ತರವನ್ನೂ ಕೊಡಲಿಲ್ಲ. ಬಡವರ ಶ್ರದ್ಧಾ-ಪ್ರೇಮಪೂರಿತ ಉಪಹಾರದ ರುಚಿಯನ್ನಾದರೋ ಪ್ರೇಮ-ಪಿಪಾಸು ಭಗವಂತನೇ ಬಲ್ಲನು. ಅದರಿಂದ ಆತನೇ ಅವನನ್ನು ಗೌರವಿಸುತ್ತಾನೆ. ಸುದಾಮನ ಅವಲಕ್ಕಿಯ ಗಂಟು, ಶಬರಿಯ ಬೋರೇಹಣ್ಣು, ಮತ್ತು ವಿದುರನ ನುಚ್ಚಿನ ರುಚಿಯ ಅನುಭವ ಭಗವಂತನಿಗೆ ಮಾತ್ರ ಗೊತ್ತು. ಆದುದರಿಂದ ಆತನು ಸಂತೋಷದಿಂದ ಇವರ ಉಪಹಾರವನ್ನು ಸ್ವೀಕರಿಸಿದ್ದನು ಮತ್ತು ಘೋಷಣೆಯನ್ನೂ ಮಾಡಿದ್ದಾನೆ -

**ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।**
**ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥**

**(ಗೀತಾ ೯/೨೬)**

'ಪ್ರೇಮೀ ಭಕ್ತನು ಶುದ್ಧವಾದ ಪ್ರೇಮದಿಂದ ನನಗೆ ಪತ್ರ, ಪುಷ್ಪ, ಹಣ್ಣು, ಜಲ ಇತ್ಯಾದಿ ಏನೊಂದಿಷ್ಟನ್ನು ಅರ್ಪಿಸಿದರೂ, ನಾನು ಆ ಪ್ರೇಮಾರ್ಪಿತ ಉಪಹಾರವನ್ನು ಪ್ರೇಮದಿಂದ ಸಾಕ್ಷಾತ್ತಾಗಿ ಭೋಜನ ಮಾಡುತ್ತೇನೆ.' ಸಾಮಗ್ರಿಗಳ ಹೆಚ್ಚಳಕ್ಕೆ ಯಾವ ಮಹತ್ತ್ವವೂ ಇಲ್ಲ. ಮಹತ್ತ್ವವಿರುವುದು ಪ್ರೇಮಕ್ಕೇ.

ಭಗವಾನ್ ಶ್ರೀಕೃಷ್ಣನ ಆತಿಥ್ಯಕ್ಕಾಗಿ ಕೌರವನೇನೂ ಕಡಮೆ ಸಿದ್ಧತೆ ಮಾಡಿರಲಿಲ್ಲ. ಆದರೆ ಭಗವಂತನು ಕೌರವನಲ್ಲಿ ಹೇಳಿದ್ದಾನೆ -

**ಸಂಪ್ರೀತಿಭೋಜ್ಯಾನ್ಯನ್ನಾನಿ ಆಪದ್ಭೋಜ್ಯಾನಿ ವಾ ಪುನಃ ।**
**ನ ಚ ಸಂಪ್ರೀಯಸೇ ರಾಜನ್ ನ ಚೈವಾಪದ್ಗತಾ ವಯಮ್ ॥**

**(ಮಹಾಭಾರತ)**

'ಪ್ರೇಮದಿಂದ ಕಾಣುವ ಕಡೆಯಲ್ಲಿ ಭೋಜನ ಮಾಡಲಾಗುವುದು ಅಥವಾ ಆಪತ್ಕಾಲದಲ್ಲಿ ಎಲ್ಲಿಯಾದರೂ ಭೋಜನ ಮಾಡಬೇಕಾಗುತ್ತದೆ. ಇಲ್ಲಿ ಪ್ರೇಮವಾದರೋ ನಿನ್ನಲ್ಲಿಲ್ಲ ಮತ್ತು ಆಪತ್ಕಾಲವೂ ನನಗೆ ಸಂಭವಿಸಿಲ್ಲ. ಆದ್ದರಿಂದ ನಾನು ನಿಮ್ಮ ಮನೆಯಲ್ಲಿ ಊಟ ಮಾಡಲಾರೆ.'

ಮೋಹನನು ಅನೇಕ ಸಾರಿ ಗುರುಗಳಿಗೆ ಹೇಳಿಕೊಂಡಾಗ ಗುರುಗಳು ತಿರಸ್ಕಾರದಿಂದ ಸಿಟ್ಟಿಗೆದ್ದು ಒಬ್ಬ ಸೇವಕನಲ್ಲಿ ಹೇಳಿದರು - 'ಒಂದಿಷ್ಟಕ್ಕೇ ಈ ಹುಡುಗ ಎಷ್ಟೊಂದು ಅರಚಿಕೊಳ್ಳುತ್ತಿದ್ದಾನೆ, ಇವನು ನಮ್ಮನ್ನು ತೃಪ್ತಿಪಡಿಸಿದಂತೆ. ಹಾಲನ್ನು ಯಾವುದಾದರೂ ಪಾತ್ರೆಗೆಹಾಕಿಕೊಂಡು ಇವನನ್ನು ಸಾಗಹಾಕು.' ಅಪಮಾನದಿಂದ ಬಾಲಕನ ಮುಖದಲ್ಲಿ ವಿಷಾದದ ಚಿಹ್ನೆಗಳು ಮೂಡಿದವು. ಬಡವ ಏನು ಮಾಡಿಯಾನು? ಅಳಲಾರಂಭಿಸಿದನು.

ಭಗವಂತನ ಲೀಲೆ ಬಹಳ ವಿಚಿತ್ರವಾದುದು. ಅವನು ಯಾವಾಗ ಯಾವ ಸೂತ್ರದಿಂದ ಏನು ಮಾಡಲಿಚ್ಛಿಸುತ್ತಾನೆಯೋ, ಯಾರಿಗೂ ಗೊತ್ತಾಗುವುದಿಲ್ಲ. ಆಳು ಹಾಲನ್ನು ಪಾತ್ರೆಗೆ ಸುರಿದನು, ಪಾತ್ರೆ ತುಂಬಿತು, ಆದರೆ ಹಾಲೂ ಮುಗಿಯಲಿಲ್ಲ; ಅವನು ಇನ್ನೊಂದು ಪಾತ್ರೆಗೆ ಹಾಕಿದನು. ಅದೂ ತುಂಬಿಹೋಯ್ತು. ಆದರೆ ಹಾಲು ಇದ್ದಷ್ಟೇ ಇತ್ತು. ಕೊನೆಗೆ ಒಂದು ಬಕೆಟ್ಟಿಗೆ ಹಾಕಲು ಪ್ರಾರಂಭಿಸಿದನು. ಅದೂ ತುಂಬಿಹೋಯಿತು. ಆಗ ಸೇವಕನು ಗಾಬರಿಗೊಂಡು ಗುರುಗಳ ಬಳಿಗೆ ಹೋಗಿ ಎಲ್ಲಾ ವೃತ್ತಾಂತವನ್ನೂ ತಿಳಿಸಿದನು. ಶ್ರಾದ್ಧಕ್ಕೋಸ್ಕರ ಅನೇಕ ಮಂದಿ ವಿದ್ವಾನ್ ಬ್ರಾಹ್ಮಣರು ಬಂದು ಸೇರುತ್ತಿದ್ದರು. ಈ ಆಶ್ಚರ್ಯದ ಘಟನೆಯನ್ನು ಕೇಳಿ ಎಲ್ಲರೂ ಅಲ್ಲಿಗೆ ಓಡಿಬಂದರು. ನೋಡುತ್ತಾರೆ, ಒಂದು ಚಿಕ್ಕ ಲೋಟದಲ್ಲಿ ಹಾಲು

ತುಂಬಿದೆ. ಪಕ್ಕದಲ್ಲಿಯೇ ಒಂದು ಬಕೆಟ್ಟು ಮತ್ತು ಹಲವು ಪಾತ್ರೆಗಳಲ್ಲಿ ಹಾಲು ತುಂಬಿತುಳುಕುತ್ತಿದೆ. ಗುರುಗಳು ಸೇವಕನಲ್ಲಿ ಹೇಳಿದರು - 'ಎಲ್ಲಿ ನನ್ನ ಮುಂದೆಯೇ ಹಾಕು ನೋಡೋಣ.' ಅವನು ಮತ್ತೊಂದು ದೊಡ್ಡ ಪಾತ್ರೆಯಲ್ಲಿ ಲೋಟದ ಹಾಲನ್ನು ಸುರಿಯಲು ಪ್ರಾರಂಭಿಸಿದ, ಪಾತ್ರೆ ತುಂಬಿತು, ಆದರೆ ಲೋಟ ಬರಿದಾಗಲೇ ಇಲ್ಲ. ಪುನಃ ಬೇರೊಂದು ಅದಕ್ಕಿಂತ ದೊಡ್ಡ ಪಾತ್ರೆಯನ್ನು ಇಡಲಾಯ್ತು. ಅದೂ ತುಂಬಿಹೋಯ್ತು. ಹಾಲು ದ್ರೌಪದಿಯ ವಸ್ತ್ರದಂತೆಯೇ ಅಕ್ಷಯವಾಗಿ ಹೋಯಿತು.

**ಡಾರತ - ಡಾರತ ಕರ ಥಕ್ಯೋ, ಚುಕ್ಯೋ ನ ಲುಟಿಯಾ-ದೂಧ್ ॥**

(ಹಾಕುತ್ತಾಕುತ್ತಾ ಕರಗಳು ಬಳಲಿದವು, ಮುಗಿಯಲಿಲ್ಲ ಲೋಟದ ಹಾಲು)

ಆಗ ಗುರುಗಳ ಮತ್ತು ಬ್ರಾಹ್ಮಣ ವೃಂದದ ಆಶ್ಚರ್ಯಕ್ಕೆ ಮಿತಿಯೇ ಇಲ್ಲವಾಯಿತು. ಗುರುಗಳು ಕೇಳಿದರು - 'ಮಗು! ನೀನು ಹಾಲನ್ನು ಎಲ್ಲಿಂದ ತೆಗೆದುಕೊಂಡು ಬಂದೆ?' ಬಾಲಕನು ಸರಳತೆಯಿಂದ ಹೇಳಿದನು - 'ನನ್ನ ಗೋಪಾಲಣ್ಣ ಕಾಡಿನಲ್ಲಿರುತ್ತಾನೆ. ಅವನು ನನಗೆ ಕೊಟ್ಟಿದ್ದನು.' ಗುರುಗಳು ಹೇಳಿದರು - 'ಮಗು! ಗೋಪಾಲಣ್ಣ ಯಾರು?'

ಮೋಹನ ಹೇಳಿದನು - ನನ್ನ ಅಣ್ಣ 'ನನ್ನ ತಾಯಿ ಹೇಳಿದ್ದಳು - ನೀನು ಅವನಿಂದ ಬೇಕಾದುದನ್ನು ಕೇಳಿ ಪಡೆದುಕೋ, ಅವನು ದೀನರ ನಾಥನು, ಪತಿತರನ್ನು ಪವಿತ್ರಗೊಳಿಸುತ್ತಾನೆ. ದುಃಖಪಡುವವರನ್ನು ತನ್ನವರಂತೆ ಮಾಡಿಕೊಳ್ಳುತ್ತಾನೆ, ನಿರಾಧಾರಿಗಳಿಗೆ ಆಧಾರನಾಗಿದ್ದಾನೆ, ವ್ಯಾಕುಲರಾಗಿ ಕೂಗಿಕೊಂಡ ಕೂಡಲೇ ಬರುತ್ತಾನೆ, ಬಯಸಿದುದನ್ನು ಕೊಡುತ್ತಾನೆ.'

ಬಾಲಕನ ಮಾತನ್ನು ಕೇಳಿ ಗುರುಗಳ ಹೃದಯ ತುಂಬಿ ಬಂತು. ಗುರುಗಳು ಎದ್ದು ಅವನನ್ನು ಎದೆಗಪ್ಪಿಕೊಂಡರು. ಒಂದು ಘಂಟೆ ಮೊದಲು ತಿರಸ್ಕೃತನಾಗಿದ್ದವನೇ ಈಗ ಅತ್ಯಂತ ಗೌರವಕ್ಕೆ ಪಾತ್ರನಾಗಿ ಹೋದನು! ಯಾರು ಗೋಪಾಲನನ್ನು ತನ್ನವನಾಗಿ ಮಾಡಿಕೊಳ್ಳುತ್ತಾನೋ, ಅವನನ್ನು

ಯಾರು ತಾನೇ ತನ್ನವನನ್ನಾಗಿ ಮಾಡಿಕೊಳ್ಳುವುದಿಲ್ಲ. ವಿರುದ್ಧವಾದುದೂ ಸರಿಯಾಗಿಬಿಡುತ್ತವೆ, ವಿಷವೂ ಸಹ ಅಮೃತವಾಗಿ ಬಿಡುತ್ತದೆ -

ಅರಿಗಳೇ ಸಖರಕ್ಕು ಅತಿವಿಷ ಅಮೃತವಕ್ಕು ।
ಶರಧಿ ಗೋಷ್ಪದವಕ್ಕು ಶರಘಾತಬೆಂಡಕ್ಕು ॥

'ಭಗವಂತನ ಕೃಪೆಯ ಪ್ರಭಾದಿಂದ ವಿಷವೂ ಅಮೃತವಾಗುತ್ತದೆ, ಶತ್ರುವು ಮಿತ್ರನಾಗುತ್ತಾನೆ, ಸಮುದ್ರವೂ ಗೋಪಾದದಷ್ಟಾಗಿ ಬಿಡುತ್ತದೆ, ಅಸ್ತ್ರ ಶಸ್ತ್ರಗಳು ಮೊಂಡಾಗಿಬಿಡುತ್ತವೆ ಮತ್ತು ಅಗ್ನಿಯ ದಹನ ಶಕ್ತಿಯೂ ಸಹ ತಂಪನ್ನು ಕೊಡುತ್ತದೆ.'

ಬ್ರಾಹ್ಮಣ ವೃಂದವು ಭೋಜನಕ್ಕೆ ಕುಳಿತುಕೊಂಡಿತು. ಇಂದಿನ ಶ್ರಾದ್ಧ ಭೋಜನಕ್ಕೆ ಮೋಹನ ತೆಗೆದುಕೊಂಡು ಬಂದಿದ್ದ ಹಾಲಿನಿಂದ ಖೀರು ಮಾಡಲಾಗಿತ್ತು. ಊಟ ಮಾಡುತ್ತಾ ಮಾಡುತ್ತಾ ಬ್ರಾಹ್ಮಣರು ತೃಪ್ತಿ ಪಡುತ್ತಲೇ ಇರಲಿಲ್ಲ. ಇಂದಿನ ಖೀರಿನ ರುಚಿಯು ಅದ್ಭುತವಾಗಿತ್ತು. ಏಕೆ ಆಗಬಾರದು, ಯಾವ ಪ್ರಸಾದದ ಒಂದು ಕಣಕ್ಕಾಗಿ ಬ್ರಹ್ಮಾದಿ ದೇವತೆಗಳೂ ಯಾವಾಗಲೂ ಹಾತೊರೆಯುತ್ತಾರೆಯೋ, ಅದೇ ಇಂದು ಶ್ರಾದ್ಧ-ಭೋಜ್ಯಾನ್ನದ ರೂಪದಲ್ಲಿ ಎಲ್ಲರಿಗೂ ದೊರೆತಿತ್ತು. ಬ್ರಾಹ್ಮಣರ ಮನಸ್ಸೇನೂ ತುಂಬಲಿಲ್ಲ, ಆದರೆ ಆ ಮಹಾಪ್ರಸಾದದ ಪ್ರಾಪ್ತಿಯಿಂದ ಅವರು ಸುರರಿಗೂ, ಮುನಿಗಳಿಗೂ ದುರ್ಲಭವಾದ ಪದವಿಯನ್ನು ಪಡೆದು ಶಾಶ್ವತವಾಗಿ ತೃಪ್ತರಾಗಿ ಹೋದರು. ಬ್ರಾಹ್ಮಣರ ಪಿತೃಗಳು ಉದ್ಧಾರವಾಗಿ ಹೋಗುವುದರಲ್ಲಿ ಆಶ್ಚರ್ಯವೇನಿತ್ತು?

ಬ್ರಾಹ್ಮಣ-ವೃಂದವು ಬಾಲಕನಿಗೆ ಸ್ನೇಹಭಾವ ತುಂಬಿದ ಹೃದಯದಿಂದ ಆಶೀರ್ವಾದ ಮಾಡಿ ಹೊರಟುಹೋದರು. ಕಡೆಯಲ್ಲಿ ಗುರುಗಳು ತಮ್ಮ ಎಲ್ಲಾ ಶಿಷ್ಯರ ಸಂಗಡ ಊಟ ಮಾಡಿದರು. ಮೋಹನನೂ ಇಂದು ಅಲ್ಲಿಯೇ ಊಟಮಾಡಬೇಕಾಯಿತು. ಸಾಯಂಕಾಲವಾಯಿತು. ಮತ್ತು ಹುಡುಗರೆಲ್ಲಾ ತಮ್ಮ-ತಮ್ಮ ಮನೆಗೆ ಹೊರಟು ಹೋದರು. ಗುರುಗಳು ಗೋಪಾಲಣ್ಣನ ಪ್ರೀತಿಯ ಮೋಹನನನ್ನು ಅಲ್ಲೇ ಉಳಿಸಿಕೊಂಡರು. ಎಲ್ಲರೂ ಹೋದ

ಮೇಲೆ ಅವನೊಡನೆ ಹೇಳಿದರು - 'ಮಗು! ನಾನೂ ನಿನ್ನ ಸಂಗಡ ಬರುತ್ತೇನೆ, ನಿನ್ನ ಗೋಪಾಲಣ್ಣನನ್ನು ನನಗೂ ಖಂಡಿತವಾಗಿ ತೋರಿಸಬೇಕು.' ಮೋಹನ ಹೇಳಿದನು - 'ನಡೆಯಿರಿ, ಈಗಲೇ ನನ್ನ ಜೊತೆಯಲ್ಲಿ ಕಾಡಿಗೆ. ನನ್ನ ಗೋಪಾಲಣ್ಣನು ಕರೆದ ಕೂಡಲೇ ಬರುತ್ತಾನೆ.' ಗುರುಗಳು ಬಾಲಕನನ್ನು ಕಂಕುಳಲ್ಲಿ ಎತ್ತಿಕೊಂಡು ಇಬ್ಬರೂ ಕಾಡನ್ನು ತಲುಪಿದರು. ಬಾಲಕನು ಅಲ್ಲಿಗೆ ಹೋದ ಕೂಡಲೇ ಕೂಗಿದನು - 'ಗೋಪಾಲಣ್ಣ! ಬಾ, ಈ ದಿನ ಇಷ್ಟು ಹೊತ್ತು ಏಕೆ?' ಪ್ರತಿಯಾಗಿ ಅವನಿಗೆ ಕೇಳಿ ಬಂತು - 'ಈ ದಿವಸ ನೀನೊಬ್ಬನೇ ಇಲ್ಲ, ಮತ್ತೆ ನನ್ನನ್ನು ಏಕೆ ಕರೆಯುತ್ತಿರುವೆ?' ಮೋಹನ ಹೇಳಿದನು - 'ಅಣ್ಣ! ನನ್ನ ಗುರುಗಳು ನಿನ್ನನ್ನು ನೋಡಬೇಕಂತೆ, ಬೇಗ ಬಾ.' ಭಕ್ತನ ಪ್ರೇಮಪೂರಿತ ಕರೆಯನ್ನು ಕೇಳಿ ಭಗವಂತನಿಗೆ ಇರುವುದಕ್ಕಾಗಲಿಲ್ಲ. ತಕ್ಷಣ ನವ-ನೀಲ-ನೀರದ ಶ್ಯಾಮಸುಂದರ ಪ್ರತ್ಯಕ್ಷನಾದನು. ಬಾಲಕನು ಹೇಳಿದನು - 'ಅಣ್ಣ ಬಂದೇ ಬಿಟ್ಟನು! ಗುರುಗಳೇ! ನೋಡಿ ಗೋಪಾಲಣ್ಣ ಎಷ್ಟು ಸುಂದರವಾಗಿದ್ದಾನೆ!' ಗುರುಗಳಿಗೆ ಒಂದು ವಿಸ್ಮಯಕಾರಿ ಪ್ರಕಾಶದ ಹೊರತು ಮತ್ತೇನೂ ಸಹ ಕಾಣಿಸಲಿಲ್ಲ. ಅವರು ಹೇಳಿದರು - 'ಎಲ್ಲಿ? ನನಗೆ ಈ ಪ್ರಕಾಶದ ಹೊರತು ಇನ್ನೇನೂ ಕಾಣಿಸುತ್ತಾ ಇಲ್ಲ.' ಬಾಲಕನು ಹೇಳಿದನು - 'ಇದೇನು ಮಾತು? ಗೋಪಾಲಣ್ಣ! ನೀನು ಇದೇನು ಆಟವಾಡುತ್ತಾ ಇರುವೆ?' ಉತ್ತರ ದೊರೆಯಿತು - 'ತಮ್ಮ! ನಾನು ನಿನ್ನ ಹತ್ತಿರಕ್ಕೆ ಬರುತ್ತೇನೆ, ನಿನ್ನ ಅಂತಃಕರಣ ಶುದ್ಧವಾಗಿದೆ, ಅದರಲ್ಲಿ ಪ್ರೀತಿ ತುಂಬಿದೆ, ನಿನ್ನ ಸಾಧನೆಯ ಸಮಯ ಪೂರ್ಣಗೊಂಡಿದೆ, ಆದರೆ ನಿನ್ನ ಗುರುದೇವ ಇನ್ನೂ ದರ್ಶನಕ್ಕೆ ಅಧಿಕಾರಿಯಾಗಿಲ್ಲ. ಈತನು ಯಾವ ಪ್ರಕಾಶವನ್ನು ನೋಡಿದನೋ, ಅದೇ ಇವನಿಗೆ ಬಹಳವಾಯಿತು. ಇದರಿಂದಲೇ ಈ ಮಂಗಳಕರ - ಮಾರ್ಗದಲ್ಲಿ ಮುಂದುವರಿಯಬಹುದು.' ಈ ವೀಣಾ-ಸ್ಪಂದಿತ ವಾಣಿಯನ್ನು ಗುರುಗಳು ಕೇಳಿದರು. ಅವರ ಹೃದಯ ಪಟಲದ ದ್ವಾರ ತೆರೆಯಿತು, ಹೃದಯದ ಮಾಯಾ ಬಂಧನ ಕಿತ್ತುಹೋಯಿತು. ಪ್ರೇಮ-ಸಾಗರ ಉಕ್ಕಿ ಹರಿಯಿತು. ಗುರುಗಳು ಗದ್ಗದ ಸ್ವರದಿಂದ ಹೇಳಿದರು - 'ನಾಥ! ನಿನ್ನ ದಿವ್ಯ ಪ್ರಕಾಶವು

ನನ್ನ ಹೃದಯದ ಘೋರ ಅಂಧಕಾರವನ್ನು ಹೋಗಲಾಡಿಸಿತು, ನಿನ್ನ ವಾಣಿಯು ನನಗೆ ನಿನ್ನ ದಿವ್ಯ ಧಾಮದ ದರ್ಶನ ಮಾಡಿಸಿತು. ಈಗ ನಾನು ಹೃದಯದಲ್ಲಿ ನಿನ್ನನ್ನು ನೋಡುತ್ತಾ ಇದ್ದೇನೆ. ಪ್ರಭು! ಯಾವಾಗಲೂ ನನಗೆ ಇದೇ ಸ್ಥಿತಿಯು ಇರಲೆಂದು ನಾನು ಇಚ್ಛಿಸುತ್ತೇನೆ.' ಮೋಹನನು ಮಹದಾನಂದದಿಂದ ನಸುನಗುತ್ತಿದ್ದನು.

ಸ್ವಲ್ಪ ಹೊತ್ತಿನ ಮೇಲೆ ಗುರುದೇವನ ಮೇಲೆಯೂ ಸಹ ಕೃಪೆ ಯುಂಟಾಯಿತು. ಕರುಣಾವಲಯ, ಸೌಂದರ್ಯದರಾಶಿ, ಪ್ರೇಮದ ಭಂಡಾರ, ಉದಾರ ಚೂಡಾಮಣಿ, ಅನುಪಮ ರೂಪಶಿರೋಮಣಿಯ ಪ್ರತ್ಯಕ್ಷ ದರ್ಶನ ಮಾಡಿ ಗುರುಗಳು ಶಾಶ್ವತವಾಗಿ ಕೃತಕೃತ್ಯರಾದರು.

ಮೋಹನನನ್ನು ಜೊತೆಯಲ್ಲಿ ಕರೆದುಕೊಂಡು ಗುರುಗಳು ಬ್ರಾಹ್ಮಣಿಯ ಬಳಿಗೆ ಬಂದರು. ನೋಡುತ್ತಾರೆ, ಅಲ್ಲಿ 'ಗೋಪಾಲಣ್ಣ' ತಾಯಿಯ ಮಡಿಲಿನಲ್ಲಿ ಕುಳಿತು ಜನನಿಯ ಸ್ನೇಹಸುಧಾಪಾನ ಮಾಡುತ್ತಿರುವಂತೆ ಇರುತ್ತಿದ್ದನು. ತಾಯಿಗೆ ಬಾಹ್ಯ ಜ್ಞಾನವಿಲ್ಲ. ಆಕೆಯ ಆನಂದಾಶ್ರುಗಳ ನಿರಂತರ ಧಾರೆಯಿಂದ ಗೋಪಾಲಣ್ಣನ ಸಮಸ್ತ ಶರೀರವು ಅಭಿಷೇಕವಾಗಿ ಹೋಗಿತ್ತು. ಗುರು ಮತ್ತು ಶಿಷ್ಯ ಈ ದೃಶ್ಯವನ್ನು ನೋಡಿ ಆನಂದಸಾಗರದಲ್ಲಿ ಮುಳುಗಿದರು.*

ಭಕ್ತಿಮತಿ ಬ್ರಾಹ್ಮಣಿ, ಪವಿತ್ರ ಭಕ್ತ ಮೋಹನ ಮತ್ತು ಅವನ ಪ್ರೀತಿಯ 'ಗೋಪಾಲಣ್ಣ'ನಿಗೆ ಜಯವಾಗಲಿ.

❑❑❑

---

* ಸ್ವಾಮಿ ಶ್ರೀ ವಿವೇಕಾನಂದರು ಬಾಲ್ಯದಲ್ಲಿ ತಮ್ಮ ದಾದಿಯಿಂದ ಈ ಕತೆ ಕೇಳಿದ್ದರು. ಸ್ವಾಮಿಯವರ ಶಿಷ್ಯ ಎಂ.ಸಿ.ಪೈಂಕೀಯವರು ಈ ಕಥೆಯ ಅತ್ಯಧಿಕ ಪ್ರಭಾವ ಅವರ ಮೇಲೆ ಉಂಟಾಗಿತ್ತು ಎಂದು ಬರೆಯುತ್ತಾರೆ. ಅದೇ ಕಥೆಯ ಆಧಾರದಿಂದ ಈ ಕಥೆಯು ಬರೆಯಲ್ಪಟ್ಟಿದೆ.

# ೩. ಧನ್ನಾ ಜಾಟ

**ಭ**ಗವಂತನ ಭಕ್ತಿ ಎಲ್ಲಾ ಜಾತಿಗಳ, ಎಲ್ಲಾ ಮನುಷ್ಯರಿಗೂ ಸಾಧ್ಯವುಂಟು. ಯಾರ ಚಿತ್ತ-ಪ್ರವೃತ್ತಿ ರೂಪಿ ನದಿಯ ಪ್ರವಾಹವು ಭಗತ್ಸ್ವರೂಪೀ ಪರಮಾನಂದದ ಮಹಾಸಾಗರದ ಕಡೆಗೆ ಹರಿಯತೊಡಗಿದೆಯೋ, ಅವನೇ ಭಕ್ತಿಗೆ ಅಧಿಕಾರಿ ಮತ್ತು ಅವನಿಗೇ ಭಕ್ತಭಾವನ ಭಗವಂತನು ಪ್ರಸನ್ನನಾಗುತ್ತಾನೆ.

ಭಕ್ತ ಧನ್ನಾ ಎಂಬುವರು ಜಾಟ* ಪಂಗಡದವರು. ಅವರು ವಿದ್ಯಾಭ್ಯಾಸ ಮಾಡಿರಲಿಲ್ಲ. ಶಾಸ್ತ್ರಗಳನ್ನು ಅವರು ಕೇಳಿರಲಿಲ್ಲ. ಆದರೆ ಅವರ ಸರಳ ಹೃದಯ ಅನುರಾಗದಿಂದ ತುಂಬಿತ್ತು. ಹೃದಯದಲ್ಲಿ ಪ್ರೇಮದ ಬೀಜ ಇಲ್ಲದಿರುವಂತಹ ಯಾವ ಮನುಷ್ಯನೂ ಜಗತ್ತಿನಲ್ಲಿ ಇಲ್ಲ, ಆದರೆ ಸಂತ-ಸಮಾಗಮರೂಪೀ ಸುಧಾಧಾರೆಯ ಸಿಂಚನದ ಅಭಾವವಿರುವುದು. ಈ ಕಾರಣದಿಂದ ಆ ಬೀಜ ಮೊಳೆಯುದಿಲ್ಲ ಮತ್ತು ಎಂದಾದರೂ ಮೊಳೆತರೂ ಅದು ಪ್ರತಿಕೂಲ ವಾತಾವರಣದಿಂದ ವೃದ್ಧಿಯಾಗಿ ಚಿಗುರಿ ಹೂ-ಹಣ್ಣು ಬಿಟ್ಟು, ಜಗತ್ತಿಗೆ ಸುಖವನ್ನು ಉಂಟುಮಾಡುವದಕ್ಕೆ ಮೊದಲೇ ಹಾಳಾಗಿ ಹೋಗುತ್ತದೆ. ಸತ್ಸಂಗ-ಸುಧೆಯಿಂದ ಸದಾ ನೆನೆಯುತ್ತಿದ್ದರೆ, ಭಗವನ್ನಾಮರೂಪೀ ಅನುಕೂಲವಾದ ಗಾಳಿಯಿದ್ದರೆ ಮತ್ತು ದೃಢವಾದ ಶ್ರದ್ಧೆ-ನಂಬಿಕೆಗಳ ನೆರಳಿನಿಂದ ಸುರಕ್ಷಿತವಾಗಿದ್ದರೆ ಒಂದು ದಿವಸ ಅದು ವಿಶಾಲವಾದ ಅಮರವೃಕ್ಷವಾಗಿ ಬೆಳೆದು ಇಡೀ ವಿಶ್ವಕ್ಕೇ ತನ್ನ ಸುಗಂಧದಿಂದ ಮತ್ತು 'ಅಮೃತಮಯ' ಫಲಗಳಿಂದ ಸುಖ ಮತ್ತು ಸಂತೃಪ್ತಿಯನ್ನು ತಂದುಕೊಡಬಲ್ಲದು.

ಭಕ್ತವರ ಧನ್ನಾನ ಪ್ರೇಮಬೀಜವು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಸಂತ ಸಮಾಗಮದ, ಸುಧಾರಸದಿಂದ ಮೊಳೆತು ಸಶಕ್ತ ವೃಕ್ಷವಾಯಿತು. ಧನ್ನಾನ ತಂದೆ ಬೇಸಾಯದ ಕೆಲಸ ಮಾಡುತ್ತಿದ್ದನು. ಅವಿದ್ಯಾವಂತನಾಗಿದ್ದರೂ ಆತನ ಹೃದಯ ಸರಳ ಮತ್ತು ಶ್ರದ್ಧೆಯಿಂದ ಸಂಪನ್ನವಾಗಿತ್ತು. ಆತ

---

* ಜಾಟ ಎಂಬುದು ಪೂರ್ವಪಂಜಾಬ್ ಮತ್ತು ಸಿಂಧು ಪ್ರದೇಶದಲ್ಲಿರುವ ಒಂದು ಪಂಗಡದ ಜಾತಿ ವಿಶೇಷ.

ಯಾವಾಗಲೂ ತನ್ನ ಶಕ್ತಿಗನುಗುಣವಾಗಿ ಸಂತರು, ಭಕ್ತರು, ಮಹಾತ್ಮರುಗಳ ಸೇವೆಯನ್ನು ಮಾಡುತ್ತಿದ್ದನು. ಆ ಕಾಲದಲ್ಲಿ ಇಂದಿನ ಹಾಗೆ ವಿಪರೀತ ಬುದ್ಧಿಯ ರೋಗದ ಪ್ರಚಾರ ಇರಲಿಲ್ಲ ಮತ್ತು ಭಂಡ-ತಪಸ್ವಿಗಳ ವಿಶೇಷ ಭಾರ ಭಾರತ ಭೂಮಿಗೆ ಇರಲಿಲ್ಲ. ಆದ್ದರಿಂದ ಸರಳತೆಯಿಂದ ಸಾಧು-ಸೇವೆ ನಡೆಸಲು ಯಾವ ವಿಶೇಷ ಅಡ್ಡಿಯೂ ಇರಲಿಲ್ಲ. ಧನ್ನಾನ ತಂದೆಯ ಮನೆಗೆ ಆಗಾಗ ಉತ್ತಮ ಸಂತಮಹಾತ್ಮರು ಬರುತ್ತಿದ್ದರು.

ಧನ್ನಾನ ವಯಸ್ಸು ಆಗ ಐದು ವರ್ಷವಿತ್ತು. ಒಂದು ದಿವಸ ಒಬ್ಬ ಭಗವದ್ಭಕ್ತ ಸಾಧು ಬ್ರಾಹ್ಮಣರು ಅವರ ಮನೆಗೆ ಆಗಮಿಸಿದರು. ಬ್ರಾಹ್ಮಣರು ತಮ್ಮ ಕೈಯಿಂದ ಬಾವಿಯ ನೀರನ್ನು ಸೇದಿಕೊಂಡು ಸ್ನಾನಮಾಡಿದರು. ನಂತರ ಸಂಧ್ಯಾ-ವಂದನಾದಿ ನಿತ್ಯಕರ್ಮಗಳನ್ನು ಮಾಡಿದ ಮೇಲೆ ಜೋಳಿಗೆಯಿಂದ ಭಗವಂತನ ಸಾಲಿಗ್ರಾಮದ ಮೂರ್ತಿಯನ್ನು ತೆಗೆದುಕೊಂಡು ಅದಕ್ಕೆ ಅಭಿಷೇಕ ಮಾಡಿ ತುಲಸಿ, ಚಂದನ, ಧೂಪ, ದೀಪ ಇತ್ಯಾದಿಗಳಿಂದ ಪೂಜೆ ಮಾಡಿ ನೈವೇದ್ಯವನ್ನು ಅರ್ಪಿಸಿ ತಾವು ಭೋಜನ ಮಾಡಿದರು. ಧನ್ನಾನು ಆ ಭಕ್ತಿನಿಷ್ಠ ಬ್ರಾಹ್ಮಣನ ಎಲ್ಲಾ ಕಾರ್ಯಕಲಾಪಗಳನ್ನೂ ಕೌತಕದಿಂದ ನೋಡುತ್ತಿದ್ದನು. ಸರಳ ಸ್ವಭಾವದ ಬಾಲಕನಿಗೆ ಸ್ವಲ್ಪ ಹೊತ್ತು ಸಾಧು ಸತ್ಪುರುಷರ ಸಂಗವಾಯಿತು. ನನ್ನ ಹತ್ತಿರವೂ ಭಗವಂತನ ವಿಗ್ರಹವಿದ್ದರೆ ನಾನೂ ಸಹ ಇದೇ ರೀತಿ ಅದರ ಪೂಜೆ ಮಾಡುವೆನು ಎಂಬ ಇಚ್ಛೆ ಧನ್ನಾನ ಮನಸ್ಸಿನಲ್ಲಿ ಮೂಡಿತು. ಬಾಲಕರು ಯಾವುದನ್ನು ನೋಡುತ್ತಾರೋ ಅದೇ ರೀತಿ ಮಾಡಲು ಬಯಸುತ್ತಾರೆ. ಧನ್ನಾನೂ ಕೂಡ ಸರಳ ಹೃದಯದ ಸ್ವಾಭಾವಿಕವಾಗಿ ಮನಸ್ಸನ್ನು ಪ್ರಸನ್ನಗೊಳಿಸುವ ಮೃದು-ಮಧುರ ವಾಣಿಯಿಂದ ಬ್ರಾಹ್ಮಣರ ಬಳಿಗೆ ಹೋಗಿ ಹೇಳಿದನು. 'ಪಂಡಿತರೇ! ನಿಮ್ಮ ಹತ್ತಿರ ಇರುವ ಭಗವಂತನ ಶ್ರೀ ವಿಗ್ರಹವನ್ನು ನನಗೆ ಕೊಟ್ಟರೆ ನಾನೂ ನಿಮ್ಮ ಹಾಗೆಯೇ ಪೂಜೆ ಮಾಡುವೆನು.' ಬ್ರಾಹ್ಮಣ ಮೊದಲು ಏನೂ ಗಮನ ಕೊಡಲಿಲ್ಲ. ಆದರೆ ಬಾಲಕ ಧನ್ನಾ ಪದೇ ಪದೇ ಅಳುತ್ತಾ ಗೋಗರೆಯುತ್ತಾ ಅವರನ್ನು ಕಾಡಿದಾಗ ಅವನನ್ನು ದೂರ ತೊಲಗಿಸುವುದಕ್ಕಾಗಿ ಒಂದು ಕಪ್ಪು ಬಣ್ಣದ ಕಲ್ಲನ್ನು ಅವನಿಗೆ ಕೊಟ್ಟುಬಿಟ್ಟರು ಮತ್ತು ಹೇಳಿದರು - 'ಮಗು!

ಇದು ನಿನ್ನ ಭಗವಂತ, ನೀನು ಇದಕ್ಕೇ ಪೂಜೆ ಮಾಡುತ್ತಿರು.' ಧನ್ನಾನಿಗೆ ಇದೇ ಗುರುದೀಕ್ಷೆ ದೊರೆತಂತೆ ಈ ಅಲ್ಪಕಾಲದ ಸತ್ಸಂಗ ಮತ್ತು ಸರಳ ಭಕ್ತಿಯ ಪ್ರತಾಪದಿಂದ ಬಾಲಕ ಧನ್ನಾ ಆ ಪ್ರಭುವನ್ನು ಬಹು ಬೇಗ ಪ್ರಸನ್ನಗೊಳಿಸಲು ಸಮರ್ಥನಾದನು. ಸತ್ಸಂಗದ ಮಾಹಾತ್ಮ್ಯೆಯನ್ನು ಭಗವಂತ ಶ್ರೀಕೃಷ್ಣನು ಸ್ವತಃ ಉದ್ಧವನಿಗೆ ಹೇಳುತ್ತಾನೆ -

ನ ರೋಧಯತಿ ಮಾಂ ಯೋಗೋ ನ ಸಾಂಖ್ಯಂ ಧರ್ಮ ಏವ ಚ ।
ನ ಸ್ವಾಧ್ಯಾಯಸ್ತಪಸ್ತ್ಯಾಗೋ ನೇಷ್ಟಾಪೂರ್ತಂ ನ ದಕ್ಷಿಣಾ ॥
ವ್ರತಾನಿ ಯಜ್ಞಶ್ಛಂದಾಂಸಿ ತೀರ್ಥಾನಿ ನಿಯಮಾ ಯಮಾ ।
ಯಥಾವರುಂಧೇ ಸತ್ಸಂಗಃ ಸರ್ವಸಂಗಾಪಹೋ ಹಿ ಮಾಮ್ ।
ಸತ್ಸಂಗೇನ ಹಿ ದೈತೇಯ ಯಾತುಧಾನಾ ಮೃಗಾಃ ಖಗಾಃ ।
ಗಂಧರ್ವಾಪ್ಸರಸೋ ನಾಗಾಃ ಸಿದ್ಧಾಶ್ಚಾರಣಗುಹ್ಯಕಾಃ ॥
ವಿದ್ಯಾಧರಾ ಮನುಷ್ಯೇಷು ವೈಶ್ಯಾಃ ಶೂದ್ರಾಃ ಸ್ತ್ರಿಯೋಽಂತ್ಯಜಾಃ ।
ರಜಸ್ತಮಃಪ್ರಕೃತಯಸ್ತಸ್ಮಿಂಸ್ತಸ್ಮಿನ್ ಯುಗೇಽನಘ ।
ಬಹವೋ ಮತ್ಪದಂ ಪ್ರಾಪ್ತಾಸ್ತ್ವಾಷ್ಟ್ರಕಾಯಾಧವಾದಯಃ ।
ವೃಷಪರ್ವಾ ಬಲಿರ್ಬಾಣೋ ಮಯಶ್ಚಾದ ವಿಭೀಷಣಃ ॥
ಸುಗ್ರೀವೋ ಹನುಮಾನೃಕ್ಷೋ ಗಜೋ ಗೃಧ್ರೋ ವಣಿಕ್ಪಥಃ ॥
ವ್ಯಾಧಃ ಕುಬ್ಜಾ ವ್ರಜೇ ಗೋಪ್ಯೋ ಯಜ್ಞಪತ್ನ್ಯಸ್ತಥಾಪರೇ ।
ತೇ ನಾಧಿತಶ್ರುತಿಗಣಾ ನೋಪಾಸಿತಮಹತ್ತಮಾಃ ॥
ಅವ್ರತಾತಪ್ತತಪಸಃ ಸತ್ಸಂಗಾನ್ಮಾಮುಪಾಗತಾಃ ।
ಕೇವಲೇನ ಹಿ ಭಾವೇನ ಗೋಪ್ಯೋ ಗಾವೋ ನಗಾ ಮೃಗಾಃ ।
ಯೇಽನ್ಯೇ ಮೂಢಧಿಯೋ ನಾಗಾಃ ಸಿದ್ಧಾ ಮಾಮೀಯುರಂಜಸಾ ॥
ಯಂ ನ ಯೋಗೇನ ಸಾಂಖ್ಯೇನ ದಾನವ್ರತತಪೋಽಧ್ವರೈಃ ।
ವ್ಯಾಖ್ಯಾಸ್ವಾಧ್ಯಾಯಸಂನ್ಯಾಸೈಃ ಪ್ರಾಪ್ನುಯಾದ್ ಯತ್ನವಾನಪಿ ॥
ತಸ್ಮಾತ್ತ್ವಮುದ್ಧವೋತ್ಸೃಜ್ಯ ಚೋದನಾಂ ಪ್ರತಿಚೋದನಾಮ್ ।
ಪ್ರವೃತ್ತಂ ಚ ನಿವೃತ್ತಂ ಚ ಶ್ರೋತವ್ಯಂ ಶ್ರುತಮೇವ ಚ ॥

**ಮಾಮೇಕಮೇವ ಶರಣಮಾತ್ಮಾನಂ ಸರ್ವದೇಹಿನಾಮ್ ।**
**ಯಾಹಿ ಸರ್ವಾತ್ಮಭಾವೇನ ಮಯಾ ಸ್ಯಾ ಹ್ಯಕುತೋಭಯಃ ॥**
**(ಶ್ರೀಮದ್ಭಾ. ೧೧/೧೨/೧-೯, ೧೪-೧೫)**

'ಎಲೈ ಉದ್ಧವ! ಸಮಸ್ತ ಸಂಗಗಳಿಂದ ಬಿಡುಗಡೆ ಮಾಡಿಸುವ ಸತ್ಸಂಗದಿಂದ ಹೇಗೆ ನಾನು ಪೂರ್ಣರೂಪದಿಂದ ವಶವಾಗುವೆನೋ, ಹಾಗೆ ಯೋಗ, ಸಾಂಖ್ಯ, ಧರ್ಮ, ವೇದಾಧ್ಯಯನ, ತಪಸ್ಸು, ತ್ಯಾಗ, ಅಗ್ನಿಹೋತ್ರ, ಬಾವಿ, ಕೊಳಗಳನ್ನು ತೋಡಿಸುವುದು ಮತ್ತು ತೋಟ ಮಾಡಿಸುವುದು, ದಾನ-ದಕ್ಷಿಣೆ, ವ್ರತ-ಯಜ್ಞ, ಮಂತ್ರ, ತೀರ್ಥಯಾತ್ರೆ, ನಿಯಮ ಮತ್ತು ಯಮ ಇತ್ಯಾದಿ ಬೇರೆ ಬೇರೆ ಯಾವುದೇ ಸಾಧನೆಗಳಿಂದಲೂ ಆಗುವುದಿಲ್ಲ. ಬೇರೆ-ಬೇರೆ ಯುಗಗಳಲ್ಲಿ ದೈತ್ಯರು, ರಾಕ್ಷಸರು, ಪಕ್ಷಿ, ಮೃಗ, ಗಂಧರ್ವ, ಅಪ್ಸರೆ, ನಾಗ, ಸಿದ್ಧ, ಚಾರಣ, ಯಕ್ಷ, ವಿದ್ಯಾಧರ ಮತ್ತು ಮನುಷ್ಯರಲ್ಲಿ ರಾಜಸ-ತಾಮಸ ಪ್ರಕೃತಿಯ ವೈಶ್ಯ-ಶೂದ್ರ-ಸ್ತ್ರೀ ಮತ್ತು ಅಂತ್ಯಜ ಮುಂತಾದ ಜಾತಿಗಳ ಅನೇಕ ಮನುಷ್ಯರು ಕೇವಲ ಸತ್ಸಂಗದ ಪ್ರಭಾವದಿಂದ ನನ್ನ ಪರಮಪದವನ್ನು ಪಡೆದುಕೊಂಡಿದ್ದಾರೆ. ವೃತ್ರಾಸುರ, ಪ್ರಹ್ಲಾದ, ವೃಷಪರ್ವಾ, ಬಲಿ, ಬಾಣಾಸುರ, ಮಯಾಸುರ, ವಿಭೀಷಣ, ಸುಗ್ರೀವ, ಹನುಮಂತ, ಜಾಂಬವಂತ, ಗಜ, ಜಟಾಯು, ತುಲಾಧಾರ ವೈಶ್ಯ, ವ್ಯಾಧ, ಕುಬ್ಜೆ, ವ್ರಜದ ಗೋಪಿಯರು ಮತ್ತು ಯಜ್ಞಪತ್ನಿಯರು ಮತ್ತು ಇಂತಹವರೇ ಬೇರೆ ಬೇರೆ ಅನೇಕ ಜನ ಕೇವಲ ಸತ್ಸಂಗದ ಪ್ರಭಾವದಿಂದ ಅನಾಯಾಸವಾಗಿ ನನ್ನ ದುರ್ಲಭ ಪದವಿಯನ್ನು ಪಡೆದುಕೊಂಡಿದ್ದಾರೆ. ನೋಡು, ಗೋಪಿಯರು, ಯಮಳಾರ್ಜುನ, ಹಸು, ಕಾಳಿಂಗ ಸರ್ಪ ಮತ್ತು ವ್ರಜದ ಬೇರೆ-ಬೇರೆ ಮೃಗ, ಪಕ್ಷಿ ಮತ್ತು ಜಡ (ಅಚೇತನಗಳು) ತೃಣ, ಮರ, ಗಿಡಬಳ್ಳಿಗಳು - ಮುಂತಾದು ವೆಲ್ಲಾ, ಕೇವಲ ಸತ್ಸಂಗದ ಪ್ರಭಾವದಿಂದ ಅನಾಯಾಸವಾಗಿ ನನ್ನನ್ನು ಸೇರಿ ಕೃತಾರ್ಥವಾಗಿವೆ. ಮೇಲೆ ತಿಳಿಸಿದವರಲ್ಲಿ ಯಾರೂ ವೇದವನ್ನು ಓದಲಿಲ್ಲ ಋಷಿ-ಮುನಿಗಳ ಉಪಾಸನೆ ಮಾಡಲಿಲ್ಲ, ಯಾವ ವ್ರತವನ್ನೂ ಆಚರಿಸಲಿಲ್ಲ ಮತ್ತು ಯಾವ ತಪಸ್ಸನ್ನೂ ಮಾಡಲಿಲ್ಲ. ಎಲೈ ಉದ್ಧವ! ಆದ್ದರಿಂದ ಯೋಗ, ಜ್ಞಾನ, ದಾನ, ವ್ರತ, ತಪಸ್ಸು, ಯಜ್ಞ, ವ್ಯಾಖ್ಯಾನ, ಸ್ವಾಧ್ಯಾಯ ಇತ್ಯಾದಿಗಳ

ಮೂಲಕ ಯತ್ನಿಸಿದರೂ ಸಹ ನಾನು ದುರ್ಲಭನು, ಕೇವಲ ಭಕ್ತಿ ಮತ್ತು ಸತ್ಸಂಗವೇ ಸುಲಭವಾಗಿ ನಾನು ಪ್ರಾಪ್ತಿಯಾಗುವ ಸಾಧನವಾಗಿದೆ - ಎಂದು ಹೇಳುತ್ತವೆ. ಆದುದರಿಂದ ಎಲೈ ಮಿತ್ರ ಉದ್ಧವ! ನೀನು ಶ್ರುತಿ, ಸ್ಮೃತಿ, ಪ್ರವೃತ್ತಿ, ನಿವೃತ್ತಿ, ಶ್ರೋತವ್ಯ ಮತ್ತು ಶ್ರುತ (ಹೇಳಿದ್ದೂ-ಕೇಳಿದ್ದೂ) - ಎಲ್ಲವನ್ನೂ ಬಿಟ್ಟು ಎಲ್ಲಾ ಶರೀರಧಾರಿಗಳ ಆತ್ಮರೂಪಿಯಾದ ಏಕಮಾತ್ರ ನನ್ನಲ್ಲಿ ಭಕ್ತಿಪೂರ್ವಕ ಶರಣಾಗು. ನನಗೆ ಶರಣಾಗತನಾಗುವುದರಿಂದ ನೀನು ಭಯದಿಂದ ಬಿಡುಗಡೆಯಾಗುವೆ.'

ಬಾಲಕ ಧನ್ನಾನ ಆನಂದಕ್ಕೆ ಮಿತಿಯೇ ಇಲ್ಲವಾಯಿತು. ಅವನು ತನ್ನ ಭಗವಂತನನ್ನು ಒಮ್ಮೆ ತಲೆಯ ಮೇಲೆ ಇಟ್ಟುಕೊಳ್ಳುತ್ತಾನೆ, ಮತ್ತೊಮ್ಮೆ ಎದೆಗಪ್ಪಿಕೊಂಡು ತಿರುಗಾಡುತ್ತಾನೆ. ಧನ್ನಾನ ಪೂಜೆಯ ಭಾವ ಹೆಚ್ಚಿತು. ಅವನು ಎಲ್ಲಾ ಆಟೋಟಗಳನ್ನೂ ಬಿಟ್ಟುಬಿಟ್ಟನು. ಬೆಳಗಾದ ಕೂಡಲೇ ಎದ್ದು ಸ್ನಾನ ಮಾಡುತ್ತಿದ್ದನು. ನಂತರ ಭಗವಂತನಿಗೆ ಸ್ನಾನ ಮಾಡಿಸಿ ಚಂದನಕ್ಕೆ ಬದಲಗಿ ಹೊಸ ಶುಭ್ರ ಮಣ್ಣನ್ನು ತಂದು, ಅದರಿಂದ ಭಗವಂತನಿಗೆ ತಿಲಕವಿಡುತ್ತಿದ್ದನು. ತುಲಸೀದಳಕ್ಕೆ ಬದಲಾಗಿ ಯಾವುದಾದರೂ ಮರದ ಹಸಿರೆಲೆಗಳನ್ನು ಭಗವಂತನಿಗೆ ಅರ್ಪಿಸುತ್ತಿದ್ದನು. ಬಹಳ ಪ್ರೀತಿಯಿಂದ ಪೂಜೆಮಾಡಿ ಭಕ್ತಿಪೂರಿತ ಹೃದಯದಿಂದ ಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದನು. ತಾಯಿಯು ತಿನ್ನುವುದಕ್ಕೆ ರೊಟ್ಟಿಯನ್ನು ಕೊಟ್ಟಾಗ ಧನ್ನಾ ಅದನ್ನು ಭಗವಂತನ ಮುಂದೆ ಇಟ್ಟು ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಿದ್ದನು. ಮಧ್ಯೆ-ಮಧ್ಯೆ ಕಣ್ಣು ತೆರೆದು ನೋಡಿ ಇನ್ನೂ ಭಗವಂತ ನೈವೇದ್ಯ ಸ್ವೀಕರಿಸಲು ಪ್ರಾರಂಭಿಸಿದ್ದಾನೆಯೋ ಅಥವಾ ಇಲ್ಲವೋ ಎಂದು ನೋಡುತ್ತಿದ್ದನು. ಪುನಃ ಸ್ವಲ್ಪ ಹೊತ್ತಿನವರೆಗೆ ಕಣ್ಣುಮುಚ್ಚಿಕೊಳ್ಳುತ್ತಿದ್ದನು. ಈ ರೀತಿ ಕುಳಿತು-ಕುಳಿತು ಬಹಳ ಹೊತ್ತಾದಾಗ, ಭಗವಂತನು ಈ ತನಕ ರೊಟ್ಟಿ ತಿನ್ನಲಿಲ್ಲ ಎಂದು ಗೊತ್ತಾದಾಗ ಬಹಳ ದುಃಖವಾಗುತ್ತಿತ್ತು ಮತ್ತು ಅವನು ಪದೇ ಪದೇ ಕೈಮುಗಿದುಕೊಂಡು ಬಾಲಸಹಜ ಸರಳ ಸ್ವಭಾವ ಮತ್ತು ಸರಳವಾಣಿಯಿಂದ ಅನೇಕ ಪ್ರಕಾರ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತಿದ್ದನು. ಆಗಲೂ ಸಹ ಭಗವಂತನು ಯಾವ ರೀತಿಯಿಂದಲೂ ನೈವೇದ್ಯವನ್ನು ತೆಗೆದುಕೊಳ್ಳದಿರುವುದನ್ನು ಕಂಡು ಅವನು ನಿರಾಶನಾಗಿ, ಭಗವಂತನು ನನ್ನ

ಮೇಲೆ ಕೋಪಿಸಿಕೊಂಡಿದ್ದಾನೆ. ಆದ್ದರಿಂದ ನನ್ನ ಪೂಜೆ ಮತ್ತು ನೈವೇದ್ಯವನ್ನು ಸ್ವೀಕಾರ ಮಾಡುತ್ತಾ ಇಲ್ಲ ಎಂದು ತಿಳಿದುಕೊಳ್ಳುತ್ತಾನೆ. ಆದರೆ ಭಗವಂತ ಹಸಿದುಕೊಂಡಿರುವಾಗ ನಾನು ತಿನ್ನಲೇ, ಅದು ಹೇಗೆ ಸಾಧ್ಯ - ಎಂದು ಯೋಚಿಸಿ ಅವನು ರೊಟ್ಟಿಯನ್ನು ಕಾಡಿಗೆ ಎಸೆದು ಬರುತ್ತಿದ್ದನು ಮತ್ತು ಹಸಿದುಕೊಂಡೇ ಇರುತ್ತಿದ್ದನು. ಮೂರು ದಿವಸವೂ ಹೀಗೇ ಮಾಡುತ್ತಿದ್ದನು. ಈ ಪ್ರಕಾರ ಅನೇಕ ದಿವಸಗಳು ಅನ್ನ-ನೀರಿಲ್ಲದೆ ಕಳೆದು ಹೋದವು. ಧನ್ನಾನ ಶಕ್ತಿ ಒಂದೇ ಸಮನೇ ಕಡಿಮೆಯಾಗುತ್ತಾ ಬಂತು, ಶರೀರ ಕೃಶವಾಯಿತು, ಓಡಾಡಲು ಶಕ್ತಿಯಿಲ್ಲ ದಂತಾಯಿತು. ಪರಮಾತ್ಮನು ನನ್ನ ರೊಟಿಯನ್ನು ತಿನ್ನುವುದಿಲ್ಲ ಎಂಬ ಚಿಂತೆಯಷ್ಟು ತನ್ನ ಶರೀರದ ತೊಂದರೆಯ ಬಗ್ಗೆ ಯೋಚನೆಯಿರಲಿಲ್ಲ. ಈ ಮಾರ್ಮಿಕ ದುಃ ಖದಿಂದ ಅವನ ಕಣ್ಣುಗಳಿಂದ ಯಾವಾಗಲೂ ಕಣ್ಣೀರು ಧಾರಾಕಾರವಾಗಿ ಹರಿಯುತ್ತಿತ್ತು.

ಈಗ ಭಗವಂತನ ಆಸನ ಅಲುಗಾಡಿತು, ಸರಳ ಬಾಲಕನ ಬಹಳ ಕಠಿಣ ಪರೀಕ್ಷೆ ನಡೆದುಹೋಯಿತು. ಭಕ್ತನ ದುಃಖದಿಂದ ಕರಗಿಹೋದ ಭಗವಂತನು ಪ್ರತ್ಯಕ್ಷನಾದನು. **'ಅಶಬ್ದಮಸ್ಪರ್ಶಮರೂಪಮವ್ಯಯಮ್'** ಸಚ್ಚಿದಾನಂದಘನ ಪರಮಾತ್ಮನು ಯೋಗ-ಸಮಾಧಿ ಮತ್ತು ಜ್ಞಾನನಿಷ್ಠೆಗಳಿಗೂ ದುರ್ಲಭನು. ಅಂತಹ ಆ ಪರಬ್ರಹ್ಮ ನಾರಾಯಣನು ಧ್ಯಾನ ಪ್ರೇಮಾಕರ್ಷಣೆಯಿಂದ ಅಪೂರ್ವ ಮನಮೋಹಕ ಮೂರ್ತಿಯಾಗಿ ಭಕ್ತನ ಎದುರಿಗೆ ಪ್ರತ್ಯಕ್ಷನಾದನು ಮತ್ತು ಆ **'ಪ್ರಯತಾತ್ಮನಃ'** ಪ್ರೇಮೀ ಭಕ್ತನ **'ಭಕ್ತ್ಯುಪಹೃತಮ್'** ರೊಟ್ಟಿಯನ್ನು ಬಹಳ ಪ್ರೀತಿಯಿಂದ ಸೇವಿಸಲು ಪ್ರಾರಂಭಿಸಿದನು. ಅರ್ಧ ರೊಟ್ಟಿಯನ್ನು ತಿಂದು ಮುಗಿಸಿದ. ಕೂಡಲೇ ಮಹಾಭಾಗ್ಯಶಾಲಿ ಧನ್ನಾ ಆತನ ಕೈಹಿಡಿದು ಕೊಂಡು ಹೇಳಿದನು - 'ಪ್ರಭು! ಇಷ್ಟು ದಿವಸಗಳವರೆಗೆ ಬರಲಿಲ್ಲ, ನಾನು ಹಸಿವಿನಿಂದ ಸತ್ತೆ. ಈ ದಿನ ಬಂದಿರುವೆ, ಒಬ್ಬನೇ ರೊಟ್ಟಿಯನ್ನೆಲ್ಲಾ ತಿಂದು ಹಾಕುತ್ತಿರುವೆ, ಎಲ್ಲವನ್ನೂ ನೀನೇ ತಿಂದುಬಿಡುವೆಯಾ, ಈ ದಿನವೂ ಸಹ ನಾನು ಹಸಿವಿನಿಂದ ಸಾಯಬೇಕೇ, ನನಗೂ ಸ್ವಲ್ಪ ಕೊಡಲಾರೆಯಾ?''

ಬಾಲಕ-ಭಕ್ತನ ಸರಳ ಮಂದಹಾಸದ ಮಾತುಗಳನ್ನು ಕೇಳಿ ಭಗವಂತನು ನಸುನಕ್ಕನು ಮತ್ತು ಉಳಿದಿದ್ದ ರೊಟ್ಟಿಯನ್ನು ಆತನು ಧನ್ನಾನಿಗೆ ಕೊಟ್ಟನು.

ಇಂದಿನ ಈ ಧನ್ನಾನ ರೊಟ್ಟಿಯ ಅಮೃತಕ್ಕಿಂತ ಮಿಗಿಲಾದ ರುಚಿಯ ವರ್ಣನೆಯನ್ನು ಆದಿಶೇಷ, ಶಾರದೆ ಕೂಡಾ ಮಾಡಲಾರರು. ಭಕ್ತವತ್ಸಲ, ಕರುಣಾನಿಧಿ ಕುತೂಹಲಕಾರಿ ಭಗವಂತನು ಪ್ರತಿನಿತ್ಯವೂ ಇದೇ ಪ್ರಕಾರ ಪ್ರತ್ಯಕ್ಷನಾಗಿ ತನ್ನ ಜನ-ಮನ-ಹರಣ ರೂಪ-ಮಾಧುರ್ಯದಿಂದ ಧನ್ನಾನ ಮನಸ್ಸನ್ನು ಸೂರೆಗೊಳ್ಳಲಾರಂಭಿಸಿದನು. ಮನುಷ್ಯ ಈ ಅದ್ಭುತ ರೂಪನ್ನು ನೋಡದೆ ಇರುವವರೆಗೂ ಅವನ ಮನಸ್ಸು ವಶದಲ್ಲಿರಬಲ್ಲದು. ಒಂದು ಸಾರಿ ಆ ರೂಪ-ರಾಶಿಯ ದಿಗ್ದರ್ಶನದ ಸೌಭಾಗ್ಯ ದೊರೆತುಬಿಟ್ಟರೆ, ಅವನ ಮನಸ್ಸು ಶಾಶ್ವತವಾಗಿ ಕೈಬಿಟ್ಟು ಹೋಗುತ್ತದೆ, ಪುನಃ ಅವನಿಗೆ ಒಂದು ಕ್ಷಣಕ್ಕಾದರೂ ಆ ಸುಂದರ ತೇಜಸ್ಸನ್ನು ಬಿಟ್ಟು ಪ್ರಪಂಚದ ಯಾವ ವಸ್ತುವೂ ಹಿಡಿಸದು, ಯಾವ ಮಾತೂ ಸೊಗಸದು. ಧನ್ನಾನಿಗೂ ಸಹ ಇದೇ ಸ್ಥಿತಿಯುಂಟಾಯಿತು, ಅವನಿಗೆ ಒಂದು ಕ್ಷಣವಾದರೂ ಆ ಮನಮೋಹನನು ಕಣ್ಮುಂದೆ ಅಥವಾ ಹೃದಯ - ಮಂದಿರದಲ್ಲಿ ಕಾಣಿಸಿಕೊಳ್ಳದಿದ್ದರೆ ಆ ಕ್ಷಣವೇ ಮೂರ್ಛಿತನಾಗಿ ನೆಲದ ಮೇಲೆ ಬಿದ್ದುಬಿಡುತ್ತಿದ್ದನು. ಕ್ಷಣಾರ್ಧದ ಭಗವಂತನ ವಿಯೋಗವನ್ನೂ ಸಹ ಅವನಿಂದ ಸಹಿಸಲಾಗುತ್ತಿರಲಿಲ್ಲ. ಭಗವಂತನು ಯಾವಾಗಲೂ ಧನ್ನಾನ ಜೊತೆಯಲ್ಲಿ ಅಥವಾ ಅವನ ಹೃದಯಧಾಮದಲ್ಲಿ ಇರಬೇಕಾಗುತ್ತಿತ್ತು. ಧನ್ನಾನು ಪ್ರೇಮಪಾಶದಿಂದ ಭಗವಂತನನ್ನು ಬಂಧಿಸಿಕೊಂಡಿದ್ದನು. ಆದುದರಿಂದ ಆ ಭಕ್ತರ ಪರಮ ಧನ ಭಗವಂತನೂ ಸಹ ಧನ್ನಾನನ್ನು ಒಂದು ಕ್ಷಣಕ್ಕಾದರೂ ಅಗಲಿರಲಾರನು. ಭಗವಂತನ ಪ್ರತಿಜ್ಞೆಯೇ ಇದೆಯಲ್ಲ!

**ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ I**
**ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ II**

**(ಗೀತಾ ೬/೩೦)**

'ಯಾರು ಎಲ್ಲರಲ್ಲಿಯೂ ನನ್ನನ್ನು ನೋಡುತ್ತಾನೆಯೋ ಮತ್ತು ಎಲ್ಲರನ್ನೂ ನನ್ನಲ್ಲಿ ನೋಡುತ್ತಾನೆಯೋ, ಅವನಿಗೆ ನಾನು ಎಂದಿಗೂ ಅದೃಶ್ಯನಾಗುವುದಿಲ್ಲ ಮತ್ತು ನನ್ನಿಂದ ಅವನೂ ಎಂದಿಗೂ ಅದೃಶ್ಯನಾಗುವುದಿಲ್ಲ.'

ಧನ್ನಾನು ಸ್ವಲ್ಪ ದೊಡ್ಡವನಾದನು, ಆದ್ದರಿಂದ ತಾಯಿಯು ಅವನಿಗೆ

ಹಸುವಿನ ಹಾಲುಕರೆಯುವ ಕೆಲಸವನ್ನು ವಹಿಸಿದ್ದಳು. ಅನೇಕ ಹಸುಗಳಿದ್ದವು. ಧನ್ನಾನು ಎರಡು ಹೊತ್ತು ಹಾಲು ಕರೆಯುತ್ತಿದ್ದನು. ಒಂದು ದಿವಸ ಭಗವಂತನು ಪ್ರತ್ಯಕ್ಷನಾಗಿ ಅವನಿಗೆ ಹೇಳಿದನು - 'ತಮ್ಮಾ! ನಿನಗೊಬ್ಬನಿಗೆ ಇಷ್ಟೊಂದು ಹಸುಗಳಿಂದ ಹಾಲು ಕರೆಯಲು ಬಹಳ ಕಷ್ಟವಾಗಬಹುದು. ನಿನ್ನ ಹಸುಗಳ ಹಾಲನ್ನು ನಾನೂ ಕರೆದು ಕೊಡುವೆನು.'

ಸುರಮುನಿವಂದಿತನಾದ ಸಕಲ ಚರಾಚರ-ಸೇವ್ಯ, ಅಖಿಲ ವಿಶ್ವದ ಸ್ವಾಮಿ, ಕರುಣಾಮೂರ್ತಿ ಭಗವಂತನು ತನ್ನ ಬಾಲಕ ಭಕ್ತನ ಸಂಗಡ ಇದ್ದು ಅವನ ಸೇವೆ ಮಾಡಲಾರಂಭಿಸಿದನು. ಧನ್ಯ! ಧನ್ಯ!! ಧನ್ನಾನ ಸುಖವು ಅಮಿತವಾಯಿತು. ಅವನು ನಿರಂತರ ಆ ಪರಮ ಸುಖರೂಪೀ ಪರಮಾತ್ಮನ ಜೊತೆಯಲ್ಲಿದ್ದು ಅಪ್ರತಿಮ, ಅಚಿಂತ್ಯ ಆನಂದವನ್ನು ಅನುಭವಿಸುತ್ತಿದ್ದನು.

ಕೆಲವು ದಿವಸಗಳ ನಂತರ ಧನ್ನಾನ ಗುರು ಅದೇ ಬ್ರಾಹ್ಮಣರು ಧನ್ನಾನ ಮನೆಗೆ ಪುನಃ ಬಂದರು ಮತ್ತು ಅವನನ್ನು ಕೇಳಿದರು - 'ಭಗವಂತನ ಪೂಜೆ ಮಾಡುತ್ತಿರುವಿಯೋ ಅಥವಾ ಇಲ್ಲವೋ?' ಧನ್ನಾ ನಗುತ್ತಾ ಹೇಳಿದನು - 'ಸ್ವಾಮಿ! ಒಳ್ಳೆಯ ಭಗವಂತನನ್ನು ಕೊಟ್ಟು ಹೋದಿರಿ, ಅನೇಕ ದಿನಗಳವರೆಗೆ ಆತನು ನನಗೆ ದರ್ಶನ ಕೊಡಲೇ ಇಲ್ಲ, ರೊಟ್ಟಿ ತಿನ್ನಲಿಲ್ಲ; ನಾನೂ ಸಹ ಉಪವಾಸವಿದ್ದೆ ಮತ್ತು ನಾನು ಹಸಿವಿನಿಂದ ಸಾಯಬೇಕಾಯ್ತು. ಕಡೆಗೆ ಒಂದು ದಿವಸ ಪ್ರತ್ಯಕ್ಷನಾಗಿ ರೊಟ್ಟಿಯನ್ನೆಲ್ಲಾ ತಿನ್ನಲಾರಂಭಿಸಿದ, ಬಹು ಕಷ್ಟದಿಂದ ನಾನು ಕೈ ಹಿಡಿದುಕೊಂಡು ಅರ್ಧ ರೊಟ್ಟಿಯನ್ನು ನನಗಾಗಿ ಇಡಿಸಿದೆ. ಆದರೆ ಮಹಾಸ್ವಾಮಿ! ಅವನು ಬಹಳ ಪ್ರೇಮಿ, ಯಾವಾಗಲೂ ನನ್ನ ಜೊತೆಯಲ್ಲಿಯೇ ಇರುತ್ತಾನೆ. ಎರಡು ಹೊತ್ತೂ ನಮ್ಮ ಹಸುಗಳ ಹಾಲು ಕರೆದುಕೊಡುತ್ತಾನೆ. ನಾನು ಕೂಡ ಅವನನ್ನು ಬಿಟ್ಟಿರಲಾರೆ. ಅವನು ಬಹಳ ಪ್ರಿಯನು ಮತ್ತು ಸುಂದರವಾಗಿದ್ದಾನೆ. ನನ್ನ ಪ್ರಾಣವಾದರೋ ಅವನಲ್ಲಿಯೇ ಇದೆ.

ಧನ್ನಾನ ಮಾತುಗಳನ್ನು ಕೇಳಿ ಬ್ರಾಹ್ಮಣ ಆಶ್ಚರ್ಯದಿಂದ ಕೇಳಿದರು - 'ಎಲ್ಲಿದ್ದಾನೆ ಆ ನಿನ್ನ ಭಗವಂತ?' ಧನ್ನಾ ಹೇಳಿದನು - 'ನಿಮಗೆ ಕಾಣಿಸುತ್ತಿಲ್ಲವೇನು, ಇದೋ ನೋಡಿ, ನನ್ನ ಪಕ್ಕದಲ್ಲಿಯೇ ನಿಂತಿದ್ದಾನೆ.' ಬ್ರಾಹ್ಮಣರಿಗೆ ದರ್ಶನವಾಗಲಿಲ್ಲ. ಅವರು ಹೇಳಿದರು - 'ಎಲ್ಲಿ ಧನ್ನಾ! ನನಗೇನೂ ಕಾಣಿಸುತ್ತಿಲ್ಲ.'

ಧನ್ನಾ ಭಗವಂತನೊಡನೆ ಹೇಳಿದನು - 'ನಾಥ! ಈ ಬ್ರಾಹ್ಮಣರೇ ನನಗೆ ನಿನ್ನ ವಿಗ್ರಹವನ್ನು ಕೊಟ್ಟು ಹೋಗಿದ್ದರು. ಈಗ ಇವರಿಗೆ ದರ್ಶನವನ್ನು ಏಕೆ ಕೊಡುವುದಿಲ್ಲ!' ಭಗವಂತ ಹೇಳಿದನು - 'ಧನ್ನಾ! ನಿನ್ನ ಜನ್ಮ-ಜನ್ಮಾಂತರಗಳ ಮಹಾನ್ ಪುಣ್ಯ ಮತ್ತು ಶುದ್ಧ ಭಕ್ತಿಯಿಂದ ನನ್ನ ದರ್ಶನ ದೊರಕಿರುತ್ತದೆ. ಈ ಬ್ರಾಹ್ಮಣನಲ್ಲಿ ಅಷ್ಟು ತಪೋಬಲವಿಲ್ಲ. ಆದರೂ ಈತನು ನಿನ್ನ ಗುರುವಾಗಿ ಬಹಳ ಪುಣ್ಯವನ್ನು ಕೂಡಿಸಿಕೊಂಡಿದ್ದಾನೆ. ಈ ಪುಣ್ಯದಿಂದ ಇವನಿಗೆ ನನ್ನ ದರ್ಶನ ಉಂಟಾಗಬಹುದು. ನೀನು ಇವನ ತೊಡೆಯಮೇಲೆ ಹೋಗಿ ಕುಳಿತುಕೋ. ನಿನ್ನ ಪವಿತ್ರವಾದ ಶರೀರದ ಸ್ಪರ್ಶದಿಂದ ಇವನಿಗೆ ದಿವ್ಯ-ನೇತ್ರಗಳು ಪ್ರಾಪ್ತಿ ಯಾಗುವುವು; ಅವುಗಳಿಂದ ಈತ ನನ್ನನ್ನು ನೋಡಬಹುದು.' ಧನ್ನಾನು ಹಾಗೆಯೇ ಮಾಡಿದನು. ಭಕ್ತ ಬ್ರಾಹ್ಮಣನು ಭಕ್ತವತ್ಸಲ ಭಗವಂತನ ಅಪೂರ್ವ ದೃಶ್ಯವನ್ನು ನೋಡಿ ಕೃತಕೃತ್ಯನಾದನು. ಅನಂತರ ಭಗವಂತ ಅಂತರ್ಧಾನನಾಗಿ ಹೋದನು.

ಧನ್ನಾನ ಬಾಲಲೀಲೆ ಸಮಾಪ್ತಿಯಾಯಿತು. ಇದರಿಂದ ಭಗವಂತನೂ ಅವನೊಡನೆ ಈಗ ಬಾಲಕೋಚಿತ ಸಂಬಂಧವನ್ನಿಟ್ಟುಕೊಳ್ಳಲಿಲ್ಲ. ಭಗವಂತನು ಧನ್ನಾನಿಗೆ ಪರಂಪರಾ ರಕ್ಷಣೆಗೋಸ್ಕರ ನಿಯಮಾನುಸಾರ ಗುರುಮಂತ್ರ ಗ್ರಹಿಸುವಂತೆ ಅರ್ಥಾತ್ ಗುರುಗಳಿಂದ ದೀಕ್ಷೆ ಪಡೆದುಕೊಳ್ಳುವಂತೆ ಆಜ್ಞೆ ಮಾಡಿದನು. ಧನ್ನಾನು ಕಾಶಿಗೆ ಹೋಗಿ ಭಕ್ತಶ್ರೇಷ್ಠ ಆಚಾರ್ಯ ಶ್ರೀರಾಮಾ ನಂದರಿಂದ ದೀಕ್ಷೆ ಪಡೆದನು. ಅನಂತರ ಅವನು ಮನೆಗೆ ಹಿಂದಿರುಗಿ ಬಂದನು. ಅವನಿಗೆ ಭಗವಂತನ ತತ್ತ್ವಜ್ಞಾನ ಪ್ರಾಪ್ತಿಯಾಯಿತು. ಅಂದಿನಿಂದ ಧನ್ನಾ ತನ್ನ ಪರಮ ಗುಪ್ತ ಧನವನ್ನು ಹೃದಯದ ಗುಪ್ತ ಗಂಭೀರ ಗುಹೆಯಲ್ಲಿಯೇ ನೋಡಲುಪಕ್ರಮಿಸಿದನು.

ಒಂದು ಸಲ ಧನ್ನಾನ ತಂದೆಯು ಅವನಿಗೆ ಹೊಲದಲ್ಲಿ ಗೋಧಿ ಬಿತ್ತುವುದಕ್ಕಾಗಿ ಬೀಜವನ್ನು ಕೊಟ್ಟು ಕಳುಹಿಸಿದನು. ದಾರಿಯಲ್ಲಿ ಕೆಲವು ಸಾಧುಗಳು ಸಿಕ್ಕಿದರು. ಅವರು ಹಸಿದಿದ್ದರು. ಅವರು ಧನ್ನಾನಿಂದ ಭಿಕ್ಷೆ ಯಾಚಿಸಿದರು. ಧನ್ನಾನಿಗೋ ಎಲ್ಲೆಲ್ಲಿಯೂ ತನ್ನ ಶ್ಯಾಮಸುಂದರನೇ ಕಾಣುತ್ತಿದ್ದನು. ಆದುದರಿಂದ ಸಾಧುಗಳ ರೂಪದಲ್ಲಿಯೂ ಸಹ ಅವನಿಗೆ

ಆತನೇ ಕಾಣಿಸಿಕೊಂಡನು. ಅವನು ಬಹಳ ಸಂತೋಷದಿಂದ ಎಲ್ಲಾ ಗೋಧಿಯನ್ನೂ ಸಾಧುಗಳಿಗೆ ಕೊಟ್ಟುಬಿಟ್ಟನು.

ಅಭಾವಗ್ರಸ್ತ ಬಡವರು ತಿನ್ನಲು ಅನ್ನವನ್ನು ಬಯಸುತ್ತಿರುವಾಗ, ಅಲ್ಲಿ ಸಾಕ್ಷಾತ್ ಭಗವಂತನೇ ಅವರ ರೂಪದಲ್ಲಿ ನಮ್ಮಿಂದ ಸೇವೆ ಬಯಸುತ್ತಾನೆ ಎಂಬುದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ಇಂತಹ ಸಂದರ್ಭವನ್ನು ಕಳೆದುಕೊಳ್ಳುವವರು ನಂತರ ಬಹಳ ಪಶ್ಚಾತ್ತಾಪ ಪಡಬೇಕಾಗುತ್ತದೆ. ಧನ್ನಾನಂತಹ ಭಕ್ತರು ಇದನ್ನು ಏಕೆ ಕಳೆದುಕೊಳ್ಳುತ್ತಾರೆ?

ಧನ್ನಾ ಗೋಧಿಯನ್ನೇನೋ ಕೊಟ್ಟುಬಿಟ್ಟ. ಆದರೆ ತಾಯಿ-ತಂದೆಗಳ ಭಯದಿಂದ ಹಾಗೆಯೇ ಮನೆಗೆ ಹಿಂದಿರುಗುವುದು ಸರಿಯಲ್ಲವೆಂದು ತಿಳಿದುಕೊಂಡು ಅವನು ಹೊಲಕ್ಕೆ ಹೋಗಿ ಹಾಗೆಯೇ ಭೂಮಿಯನ್ನು ಉತ್ತು ಮನೆಗೆ ಬಂದನು. ಭಕ್ತಕಲ್ಪತರು ಭಗವಂತನು ಧನ್ನಾ  ಬೇಡಿಕೊಳ್ಳದಿದ್ದರೂ ಅವನ ಗೌರವವನ್ನು ಹೆಚ್ಚಿಸಲು ತನ್ನ ಅದ್ಭುತ ಮಾಯೆಯಿಂದ ಹೊಲವನ್ನು ಎಲ್ಲರ ಹೊಲಕ್ಕಿಂತಲೂ ಉತ್ತಮವಾಗಿ ಹುಲುಸಾಗಿ ಬೆಳೆಸಿದನು. ಧನ್ನಾನ ಹೊಲದ ಪ್ರಶಂಸೆ ಬಹಳವಾಯ್ತು. ಇದೆಲ್ಲವನ್ನೂ ಕೇಳಿ ಧನ್ನಾ ಯೋಚಿಸಿದನು - 'ನಾನಾದರೋ ಹೊಲದಲ್ಲಿ ಒಂದು ಬೀಜವನ್ನೂ ಸಹ ಹಾಕಿರಲಿಲ್ಲ. ಮತ್ತೆ ಈ ಸುಂದರವಾದ ಪೈರು ಹೇಗಾಯ್ತು? ಹೊಲ ಪಾಳು ಬಿದ್ದಿರಬೇಕು, ಆದ್ದರಿಂದಲೇ ಜನರು ಬಹುಶಃ ಹಾಸ್ಯಕ್ಕಾಗಿ ಹಾಗೆ ಹೇಳುತ್ತಿರಬಹುದು.' ಆದರೆ ಅವನು ತಾನೇ ಹೋಗಿ ಹೊಲವನ್ನು ನೋಡಿದಾಗ ಅದು ಹಚ್ಚ-ಹಸುರಾಗಿ ಓಲಾಡುತ್ತಿರುವುದನ್ನು ಕಂಡು ಅವನ ಆಶ್ಚರ್ಯಕ್ಕೆ ಇತಿಮಿತಿಯೇ ಇಲ್ಲವಾಯ್ತು. ಪ್ರಭುವಿನ ಮಾಯೆ ಎಂದು ತಿಳಿದುಕೊಂಡು ಮನಸ್ಸಿನಲ್ಲಿಯೇ ಆತನಿಗೆ ಪ್ರಣಾಮವನ್ನು ಸಲ್ಲಿಸಿದನು. ಧನ್ನಾನ ಹೃದಯದಲ್ಲಿ ಪ್ರೇಮದ ಸಮುದ್ರವು ಉಕ್ಕಿಹೋಯಿತು.

❑❑❑

# ೪. ಚಂದ್ರಹಾಸ

ದ್ವಾಪರಯುಗದ ಇತಿಹಾಸ ಇದು. ಕೇರಳ-ಪ್ರದೇಶದಲ್ಲಿ ಮೇಧಾವಿ ಎಂಬ ಒಬ್ಬ ಧರ್ಮಾತ್ಮನಾದ ರಾಜನು ರಾಜ್ಯಭಾರ ಮಾಡುತ್ತಿದ್ದನು. ಅವನ ಏಕಮಾತ್ರ ಪುತ್ರನೇ ಚಂದ್ರಹಾಸ. ಚಂದ್ರಹಾಸನು ಬಹಳ ಚಿಕ್ಕವನಾಗಿರುವಾಗಲೇ ಶತ್ರುಗಳು ಯುದ್ಧದಲ್ಲಿ ಕೇರಳಾಧಿಪತಿಯನ್ನು ಕೊಂದು ಹಾಕಿದರು. ಚಂದ್ರಹಾಸನ ತಾಯಿ ಪತಿವ್ರತೆಯಾದ ರಾಣಿಯು ಸಹಗಮನ ಮಾಡಿಕೊಂಡಳು. ರಾಜ್ಯದ ಅಧಿಕಾರ ಬೇರೆಯವರ ಕೈಸೇರಿತು. ಇಂತಹ ಆಪತ್ತಿನ ಕಾಲದಲ್ಲಿ ಚಂದ್ರಹಾಸನ ದಾದಿಯೋರ್ವಳು ಅವನನ್ನು ಕರೆದುಕೊಂಡು ನಗರದಿಂದ ಹೊರಟು ಹೋಗಿ ಕುಂತಳಪುರಕ್ಕೆ ಹೋಗಿ ನೆಲಸಿದಳು. ಸ್ವಾಮಿ ಭಕ್ತೆಯಾದ ದಾದಿಯು ಮೂರು ವರ್ಷ ವಯಸ್ಸಿನವರೆಗೆ ಕೂಲಿ-ನಾಲಿ ಮಾಡಿ ಚಂದ್ರಹಾಸನನ್ನು ಮಗನಂತೆ ಸಾಕಿ-ಸಲಹಿದಳು; ಆದರೆ ಆಕೆಯೂ ಮರಣಕ್ಕೆ ತುತ್ತಾದಳು.

ಚಂದ್ರಹಾಸ ಅನಾಥ ಮತ್ತು ಆಶ್ರಯಹೀನನಾದನು. ಆದರೆ ಅನಾಥನಾಥ ಭಗವಂತನು ನಿರಾಧಾರರಿಗೆ ಆಧಾರನು. ಆ ವಿಶ್ವಂಭರನು ಎಲ್ಲರ ಉದರ ಪೋಷಣೆ ಮಾಡುತ್ತಾನೆ. ಭಗವತ್ ಕೃಪೆಯಿಂದ ಪಟ್ಟಣದ ಹೆಂಗಸರಿಂದ ಚಂದ್ರಹಾಸನ ಪಾಲನೆ-ಪೋಷಣೆ ನಡೆಯಲಾರಂಭಿಸಿತು. ಅವನ ಮನೋಹರ ವಾದ ಮುದ್ದು-ಮುಖವು ಎಲ್ಲರ ಮನಸ್ಸನ್ನೂ ಸೂರೆಗೊಳ್ಳುತ್ತಿತ್ತು. ಯಾವ ಹೆಂಗಸರೇ ಆಗಲಿ ಅವನನ್ನು ನೋಡಿದಾಗ ತನ್ನ ಮಗನಂತೆಯೇ ಪ್ರೀತಿಸುತ್ತಿದ್ದರು. ಊಟೋಪಚಾರ ಮತ್ತು ತೊಡಲು ಬಟ್ಟೆ ಕೊಡುತ್ತಿದ್ದರು. ಒಂದು ದಿವಸ ದೇವರ್ಷಿ ನಾರದರು ಸಂಚರಿಸುತ್ತಾ ಅಲ್ಲಿಗೆ ಬಂದರು. ಬಾಲಕನನ್ನು ಯೋಗ್ಯ ಅಧಿಕಾರಿಯೆಂದು ತಿಳಿದುಕೊಂಡು ಅವನಿಗೆ ಶ್ರೀಸಾಲಿಗ್ರಾಮದ ವಿಗ್ರಹವೊಂದನ್ನು ಕೊಟ್ಟು 'ರಾಮ ನಾಮ' ಮಂತ್ರವನ್ನು ಉಪದೇಶ ಮಾಡಿದರು. ಶುದ್ಧ ಹೃದಯದ ಮಗು ಬಹು ಪ್ರೀತಿಯಿಂದ ವಿಗ್ರಹದ ಪೂಜೆ ಮತ್ತು ಹರಿ ನಾಮ ಕೀರ್ತನೆ ಮಾಡಲಾರಂಭಿಸಿದನು. ಶಿಶು ಅವಸ್ಥೆ ಸುಂದರವಾದ ಮುಖ, ಮಂದಹಾಸದ ಸರಳ ವಾಣಿ ಮತ್ತು ಶ್ರೀಹರಿ ನಾಮ ಗಾಯನ ಇವೆಲ್ಲಾ

ಮನೋಹರವಾಗಿದ್ದವು. ಆದ್ದರಿಂದ ಚಂದ್ರಹಾಸನನ್ನು ನೋಡಿದವರೆಲ್ಲಾ ಮುಗ್ಧರಾಗಿ ಬಿಡುತ್ತಿದ್ದರು. ಅವನು ಈ ವಯಸ್ಸಿನಲ್ಲಿಯೇ ಪರಮ ಧಾರ್ಮಿಕ ಮತ್ತು ಅನನ್ಯ ಹರಿಭಕ್ತನಾಗಿಬಿಟ್ಟನು. ಅವನು ತನ್ನ ಶರೀರದ ಪರಿವೆಯೇ ಇಲ್ಲದೆ ಮಧುರ ಸ್ವರದಿಂದ ಹರಿ ನಾಮ ಗಾಯನ ಮಾಡುವಾಗ ಅವನ ಸುತ್ತಲೂ ಒಂದು ದಿವ್ಯವಾದ ಬೆಳದಿಂಗಳ ಕಾಂತಿ ಹರಡುತ್ತಿತ್ತು. ಆ ಸಮಯದಲ್ಲಿ ಚಂದ್ರಹಾಸನನ್ನು ನೋಡಿದರೆ, ಒಬ್ಬ ಜನ ಮನಮೋಹನ ಶ್ಯಾಮವದನ ಬಾಲಕನು ಕೊಳಲನ್ನು ಕೈಯ್ಯಲ್ಲಿ ಹಿಡಿದು ಅವನೊಡನೆ ಹಾಡುತ್ತಾ, ಕುಣಿಯುತ್ತಾ ಇದ್ದಾನೆಯೆಂಬಂತಿತ್ತು. ಅವನ ಮನಮೋಹಕ ಸ್ವರವನ್ನು ಕೇಳಿ ಚಂದ್ರಹಾಸನ ತನ್ಮಯತೆ ಮತ್ತಷ್ಟು ಹೆಚ್ಚುತ್ತಿತ್ತು.

ಕುಂತಳಪುರದ ರಾಜನು ಬಹಳ ದೊಡ್ಡ ಪುಣ್ಯಾತ್ಮನಾಗಿದ್ದನು. ಆದರೆ ಅವನಿಗೆ ಗಂಡು ಮಕ್ಕಳಿರಲಿಲ್ಲ. ಕೇವಲ ಒಬ್ಬ ರೂಪವತಿ-ಗುಣವತಿಯಾದ ಮಗಳಿದ್ದಳು, ಅವಳ ಹೆಸರು ಚಂಪಕಮಾಲಿನಿ. ರಾಜಗುರು ಮಹರ್ಷಿ ಗಾಲವರ ಉಪದೇಶದಂತೆ ರಾಜನು ತನ್ನ ಸಮಯವನ್ನೆಲ್ಲಾ ಕೇವಲ ಭಜನೆ-ಧ್ಯಾನ-ಸತ್ಸಂಗಗಳಲ್ಲಿಯೇ ತೊಡಗಿಸುತ್ತಿದ್ದನು. ರಾಜ್ಯದ ಸರ್ವ ಕಾರ್ಯಭಾರ ದುಷ್ಟಬುದ್ಧಿ (ಕೆಲವು ಗ್ರಂಥಗಳಲ್ಲಿ ಈ ಹೆಸರು 'ಧೃಷ್ಟಬುದ್ಧಿ' ಎಂದಿದೆ.) ಎಂಬ ಮಂತ್ರಿಯದಾಗಿತ್ತು. ಕುಂತಲಪುರದ ರಾಜ್ಯಭಾರವನ್ನು ಒಂದು ರೀತಿಯಲ್ಲಿ ಆ ಮಂತ್ರಿಯೇ ಮಾಡುತ್ತಿದ್ದನು. ಧನ-ಸಂಪತ್ತಿಗೆ ಮಿತಿಯೇ ಇರಲಿಲ್ಲ. ದುಷ್ಟಬುದ್ಧಿಗೆ ಮದನ ಮತ್ತು ಅಮಲ ಎಂಬ ಇಬ್ಬರು ಸುಯೋಗ್ಯ ಪುತ್ರರು ಮತ್ತು ವಿಷಯೆ ಎಂಬ ಒಬ್ಬ ಸುಂದರವಾದ ಮಗಳು ಇದ್ದಳು. ಮದನ ಮತ್ತು ಅಮಲ ರಾಜ್ಯ-ಕಾರ್ಯಗಳಲ್ಲಿ ತಂದೆಗೆ ಯಥೇಷ್ಟವಾಗಿ ಸಹಾಯ ಮಾಡುತ್ತಿದ್ದರು. ಇವರಲ್ಲಿ ಮದನ ಶ್ರೀಕೃಷ್ಣನ ಭಕ್ತ ಮತ್ತು ಉದಾರಗುಣ ಚರಿತ ನಾಗಿದ್ದನು; ಮಂತ್ರಿಯ ಮನೆಯಲ್ಲಿ ಎಲ್ಲಿ ವಿಲಾಸದ ರಾಗ-ಅನುರಾಗಗಳ ಪ್ರವಾಹ ಹರಿಯುತ್ತಿತ್ತೋ, ಅಲ್ಲಿ ಅವನಿಂದ ಆಗಾಗ್ಯೆ ಸಂತರ-ಸಮಾಗಮ, ಅತಿಥಿ-ಸತ್ಕಾರ ಮತ್ತು ಭಗವನ್ನಾಮ-ಕೀರ್ತನೆ ಕೂಡಾ ನಡೆಯುತ್ತಿತ್ತು. ದುಷ್ಟಬುದ್ಧಿಗೆ ಈ ಕಾರ್ಯಗಳಲ್ಲಿ ಯಾವ ಪ್ರೀತಿಯೂ ಇರಲಿಲ್ಲ. ಅವನು ಹಗಲು-ರಾತ್ರಿ ರಾಜಕಾರ್ಯ ಮತ್ತು ಹಣ-ಸಂಗ್ರಹದಲ್ಲಿಯೇ ತೊಡಗಿರುತ್ತಿದ್ದನು. ಆದರೆ

ಸುಯೋಗ್ಯ ಮಗ ಮದನನನ್ನು ಸ್ನೇಹವಶಾತ್ ಈ ಕೆಲಸಗಳಿಂದ ತಡೆಯಲೂ ಆಗುತ್ತಿರಲಿಲ್ಲ.

* * *

ಸಾಯಂಕಾಲದ ಸಮಯ. ಚಂದ್ರಹಾಸನು ಸ್ವಾಭಾವಿಕವಾಗಿಯೇ ದೇವರನಾಮ ಹಾಡುತ್ತಾ ಪಟ್ಟಣದ ರಸ್ತೆಗಳಲ್ಲಿ ತಿರುಗುತ್ತಾನೆ, ಮಧುರ ಧ್ವನಿಯನ್ನು ಕೇಳಿಕೊಂಡು ಮತ್ತಷ್ಟು ಹುಡುಗರು ಅವನ ಜೊತೆಗೆ ಸೇರಿಕೊಂಡರು. ಎಲ್ಲರೂ ಆನಂದದಿಂದ ಕುಣಿಯುತ್ತಾ-ಕುಣಿಯುತ್ತಾ ಮಧುರ ಕೀರ್ತನೆಯನ್ನು ಹಾಡುತ್ತಾ ನಗರವಾಸೀ ನರ-ನಾರಿಯರ ಮನಸ್ಸನ್ನು ತಮ್ಮ ಕಡೆಗೆ ಆಕರ್ಷಿಸಿಕೊಳ್ಳುತ್ತಿದ್ದಾರೆ. ನಡೆಯುತ್ತಾ-ನಡೆಯುತ್ತಾ ಈ ಪ್ರೇಮಮತ್ತ ಬಾಲಕೀರ್ತನಾ ಗುಂಪು ದುಷ್ಟಬುದ್ಧಿಯ ಮಹಲಿನ ಹತ್ತಿರಕ್ಕೆ ಹೋಯಿತು. ಮಂತ್ರಿಯ ಮಗ ಮದನನ ಸಹಯೋಗದಲ್ಲಿ ಋಷಿ ಮಂಡಳಿ ಸೇರುತ್ತಿತ್ತು. ಹರಿ ಚರ್ಚೆ ನಡೆಯುತ್ತಿತ್ತು. ಮಧುರ ಧ್ವನಿಯನ್ನು ಕೇಳಿ ಋಷಿಗಳ ಆಜ್ಞೆಯಂತೆ ಮದನನು ಚಂದ್ರಹಾಸನನ್ನು ಒಳಗಡೆ ಕರೆದುಕೊಂಡು ಬಂದನು. ಚಂದ್ರಹಾಸನ ಸಂಗಡ ಸೇರಿ ಬಾಲಕರು ಹಾಡುತ್ತಾ ಕುಣಿಯಲಾರಂಭಿಸಿದರು. ಮುನಿಗಳ ಸಮೂಹ ಮುಗ್ಧವಾಗಿ ಹೋಯಿತು. ಅಷ್ಟರಲ್ಲಿ ಅಲ್ಲಿಗೆ ದುಷ್ಟಬುದ್ಧಿಯೂ ಬಂದನು. ಮುನಿಗಳ ಮನಸ್ಸು ಚಂದ್ರಹಾಸನ ತೇಜಃಪೂರ್ಣ ಮುಖ ಮಂಡಲದ ವಿಮಲ ಶೀತಲ ಕಾಂತಿಯನ್ನು ನೋಡಿ ಅವನ ಕಡೆಗೆ ಆಕರ್ಷಿತವಾಯಿತು. ಅವರು ಅವನನ್ನು ತಮ್ಮ ಹತ್ತಿರಕ್ಕೆ ಕರೆದು ಕುಳ್ಳಿರಿಸಿಕೊಂಡರು. ಅವನ ಶರೀರದ ಸಾಮುದ್ರಿಕ ಲಕ್ಷಣಗಳನ್ನು ನೋಡಿ ಅವನ ಪ್ರತಿಭೆಯನ್ನು ಕಂಡುಹಿಡಿದು ಋಷಿಗಳು ಏಕ ಕಂಠದಿಂದ ಹೇಳತೊಡಗಿದರು -

'ಎಲೈ ಮಂತ್ರಿವರ್ಯ! ಈ ಬಾಲಕನು ಸುಂದರ ಲಕ್ಷಣಗಳಿಂದ ಕೂಡಿದ್ದಾನೆ. ಇವನನ್ನು ನಿಮ್ಮ ಮನೆಯಲ್ಲಿಟ್ಟುಕೊಂಡು ಅತಿ ಸ್ನೇಹ-ವಾತ್ಸಲ್ಯಗಳಿಂದ ಪಾಲನೆ-ಪೋಷಣೆ ಮಾಡು. ಇವನು ಈ ದೇಶದ ರಾಜನಾಗಿ ವೈಷ್ಣವಾಗ್ರಣಿಯಾಗಿ, ಕೊನೆಗೆ ಮೋಕ್ಷಗಾಮಿ ಆಗುವನು.'

ಋಷಿಗಳ ಈ ವಚನ ಅಭಿಮಾನಿಯಾದ ದುಷ್ಟಬುದ್ಧಿಯ ಹೃದಯಕ್ಕೆ ಬಾಣದಂತೆ ಚುಚ್ಚಿತು. ಕುಲ-ಗೋತ್ರಗಳು ಗೊತ್ತಿಲ್ಲದ ಈ ಅನಾಥ ಬಾಲಕ

ನಮ್ಮ ಸಂಪತ್ತಿಗೆ ಅಧಿಕಾರಿಯಾಗುವನಂತೆ! ನನ್ನ ಪದವಿ-ಗೌರವ, ಹಣ-ಐಶ್ವರ್ಯ, ಪ್ರಬಲ-ಪ್ರತಾಪ ಎಲ್ಲಿ ಮತ್ತು ಈ ದಾರಿಹೋಕ ಭಿಕಾರಿ ಹುಡಗನೆಲ್ಲಿ? ಕೂಡಲೇ ಅಭಿಮಾನ ದ್ವೇಷದ ರೂಪಕ್ಕೆ ಪರಿವರ್ತನೆಗೊಂಡಿತು. ದುಷ್ಟಬುದ್ಧಿಯ ಮನಸ್ಸಿನಲ್ಲಿ ಭಯಂಕರ ಹಿಂಸಾವೃತ್ತಿ ಜಾಗೃತವಾಯಿತು. ಅವನು ಮುಂದಿನ ಯೋಜನೆಯನ್ನು ನಿಶ್ಚಯಿಸಿಕೊಂಡನು. ಋಷಿಗಳು ಮತ್ತು ಪುತ್ರರೊಡನೆ ಏನೂ ಹೇಳದೆ ದುಷ್ಟಬುದ್ಧಿಯು ಬಾಲಕನಿಗೆ ಮಿಠಾಯಿ ಕೊಡುವ ನೆಪದಿಂದ ಅಂತಃಪುರಕ್ಕೆ ಕರೆದೊಯ್ದನು. ಅಲ್ಲಿ ಎಲ್ಲಾ ಬಾಲಕರನ್ನೂ ಮಿಠಾಯಿ ಕೊಟ್ಟು ಹೊರಕ್ಕೆ ಕಳುಹಿಸಲಾಯಿತು. ಚಂದ್ರಹಾಸನೊಬ್ಬ ಉಳಿದುಕೊಂಡ. ಸ್ವಲ್ಪ ಹೊತ್ತಿನ ನಂತರ ಮಂತ್ರಿಯ ಸಂಕೇತದಿಂದ ಒಬ್ಬ ನಂಬಿಕೆಯ ಕೊಲೆಗಡುಕ ಅಲ್ಲಿಗೆ ಬಂದನು. ದುಷ್ಟಬುದ್ಧಿಯು ಮೆಲ್ಲನೆ ಅವನ ಕಿವಿಯಲ್ಲಿ ಏನೋ ಹೇಳಿ ಚಂದ್ರಹಾಸನನ್ನು ಅವನಿಗೆ ಒಪ್ಪಿಸಿ ಕೊಟ್ಟನು. ಚಂದ್ರಹಾಸನನ್ನು ಕರೆದುಕೊಂಡು ಹೊರಟನು, ಆಗ ಅವನು ಪುನಃ ಹೇಳಿದನು - 'ನೋಡು, ಇಂದೇ ಕೆಲಸ ನಡೆದು ಹೋಗಲಿ. ಏನನ್ನಾದರೂ ಗುರುತು ಖಂಡಿತ ತರುವುದು, ಪೂರ್ತಿ ಬಹುಮಾನ ಸಿಕ್ಕುವುದು.' ಕೊಲೆಗಡುಕ ಬಾಲಕನನ್ನು ಕರೆದುಕೊಂಡು ಶೀಘ್ರವಾಗಿ ಹೊರಟು ಹೋದನು.

*　　　*　　　*

ಭಯಂಕರ ನಿರ್ಜನ ಅರಣ್ಯ. ಎಲ್ಲೆಲ್ಲೂ ಕತ್ತಲು ಕವಿದಿದೆ. ಕೊಲೆಗಡುಕನು ಒರೆಯಿಂದ ಕತ್ತಿಯನ್ನು ತೆಗೆದನು. ಇವನು ತನ್ನನ್ನು ಕೊಲ್ಲುತ್ತಾನೆಂದು ಚಂದ್ರಹಾಸ ತಿಳಿದುಕೊಂಡನು. ಅವನು ನಿರ್ಭಯವಾಗಿ ಹೇಳಿದನು - 'ಅಣ್ಣಾ! ಸ್ವಲ್ಪ ತಾಳು, ನಾನು ನನ್ನ ಭಗವಂತನ ಪೂಜೆ ಮಾಡಲು ಅವಕಾಶ ಕೊಡು, ಆಮೇಲೆ ಸಂತೋಷದಿಂದ ಕೊಲ್ಲು.' ಕೊಲೆಗಡುಕನ ಹೃದಯ ಸ್ವಲ್ಪ ಕರಗಿದಂತಾಗಿ, 'ಅವನು ಅನುಮತಿ ಕೊಟ್ಟನು!' ಚಂದ್ರಹಾಸನು ಬಾಯಿಂದ ಸಾಲಿಗ್ರಾಮದ ಮೂರ್ತಿಯನ್ನು ತೆಗೆದುಕೊಂಡು ಪ್ರೀತಿಯಿಂದ ಕಣ್ಣೀರು ಹರಿಸುತ್ತಾ ಕಾಡಿನ ಹೂ-ಎಲೆಗಳಿಂದ ಭಗವಂತನ ಪೂಜೆ ಮಾಡಿದನು. ನಂತರ ಗದ್ಗದ ಕಂಠದಿಂದ ಭಕ್ತಿಯಿಂದ ಹರಿನಾಮವನ್ನು ಹಾಡಿದನು.

ಅನಾಥನಾಥನಾದ ಆ ಭಗವಂತನಲ್ಲಿ ಶರಣಾಗತನಾಗಿ ಹಾಡಿ ಪ್ರಾರ್ಥಿಸಿದ

ಪರಿಣಾಮವೋ ಎಂಬಂತೆ - ಅರಣ್ಯ ಪ್ರದೇಶದಲ್ಲಿ ಕರುಣಾರಸ ಹರಡಿತು. ಕೊಲೆಗಡುಕನ ಕಣ್ಣುಗಳಿಂದ ಕಣ್ಣೀರಿನ ಎರಡು ಹನಿಗಳು ತೊಟ್ಟಿಕ್ಕಿದವು. ಅವನ ಹೃದಯ ಬದಲಾಯಿಸಿತು. ಅವನು ಮನಸ್ಸಿನಲ್ಲಿಯೇ ಯೋಚಿಸಿದ - 'ಇಂತಹ ಹರಿಭಕ್ತ ನಿರ್ದೋಷಿ ಬಾಲಕನ ಹತ್ಯೆಯಿಂದ ನನ್ನ ಗತಿ ಏನಾಗುವುದೋ ತಿಳಿಯದು?' ಕೊಲ್ಲುವ ವಿಚಾರವನ್ನೂ ತ್ಯಜಿಸಿದನು. ಅಶುಭವು ತಾನಾಗಿಯೇ ಕಳೆದುಹೋಯಿತು. ಆದರೆ ದುಷ್ಟಬುದ್ಧಿಗೆ ಯಾವುದಾದರೂ ಗುರುತು ಬೇಕು - ಎಂಬ ಚಿಂತೆಗೊಳಗಾದನು. ಚಂದ್ರಹಾಸನ ಒಂದು ಕಾಲಿನಲ್ಲಿ ಆರು ಬೆರಳುಗಳಿದ್ದವು. ಅನಿರೀಕ್ಷಿತವಾಗಿ ಕಟುಕನ ದೃಷ್ಟಿ ಆ ಕಡೆ ಹೋಯಿತು. ಅವನ ಮುಖ ಅರಳಿತು, ಅವನು ಕೂಡಲೇ ಕತ್ತಿಯಿಂದ ಆರನೆಯ ಕಾಲ್ಬೆರಳನ್ನು ಕತ್ತರಿಸಿಕೊಂಡನು. ಚಂದ್ರಹಾಸನನ್ನು ಅಲ್ಲಿಯೇ ಬಿಟ್ಟು ಆ ಕೊಲೆಗಡುಕನು ಹಿಂದಿರುಗಿದನು. ದುಷ್ಟಬುದ್ಧಿಗೆ ಬೆರಳನ್ನು ತೋರಿಸಿದನು. ಅದರಿಂದ ಅವನ ಆನಂದಕ್ಕೆ ಎಲ್ಲೆಯೇ ಇಲ್ಲದಂತಾಯಿತು. ಇಂದು ನನ್ನ ಬುದ್ಧಿ ಕುಶಲತೆಯಿಂದ ಮುನಿಗಳ ಅಮೋಘವಾಣಿಯು ವ್ಯರ್ಥವಾಗಿಹೋಯಿತು - ಎಂದು ಅವನು ಸಂತೋಷಪಟ್ಟನು.

* * *

ಘೋರವಾದ ಅರಣ್ಯದಲ್ಲಿ ಸುಕುಮಾರ ಬಾಲಕ ಒಬ್ಬಂಟಿಗನಾಗಿ ಬಿದ್ದಿದ್ದಾನೆ; ಕಾಲಿನಲ್ಲಿ ನೋವಾಗುತ್ತಾ ಇದೆ; ಆದರೆ ಬಾಯಿಯಲ್ಲಿ ಅದೇ ಕೃಷ್ಣನಾಮದ ಧಾಟಿ ನಡೆಯುತ್ತಲೇ ಇದೆ. ಅಷ್ಟರಲ್ಲಿ ಒಂದು ಮಂದ ನೀಲವರ್ಣದ ಜ್ಯೋತಿ ಅವನ ಕಡೆಗೆ ಬರುತ್ತಾ ಇರುವುದನ್ನು ಅವನು ನೋಡಿದನು. ಅದೇ ಸಮಯಕ್ಕೆ ಅನಿರೀಕ್ಷಿತವಾಗಿ ಯಕ್ಷಿಣಿಯಂತೆ ಅವನ ನೋವೆಲ್ಲಾ ಮಾಯವಾಗಿ ಹೋಯಿತು. ಹಸಿವು-ಬಾಯಾರಿಕೆಯೆಲ್ಲಾ ಶಮನವಾಯಿತು. ಮುಖಾರವಿಂದವು ಪರಮಾನಂದದಿಂದ ತುಂಬಿ ಹೋಯಿತು. ಕಾಡಿನ ಜಿಂಕೆಗಳೆಲ್ಲಾ ಅವನ ಕಾಲನ್ನು ನೆಕ್ಕಲಾರಂಭಿಸಿದವು. ಪಕ್ಷಿಗಳು ನೆರಳನ್ನುಂಟುಮಾಡಿದವು. ಮರಗಳು ಹಣ್ಣು ಕೊಡಲಾರಂಭಿಸಿದವು. ಪೃಥ್ವಿ ಕೋಮಲವಾಯಿತು. ಬಾಲಕನು ಮುಗ್ಧ ಮನಸ್ಸಿನಿಂದ ಮತ್ತು ಮಧುರ

ಕಂಠದಿಂದ ದೇವರನಾಮ ಹಾಡಲಾರಂಭಿಸಿದನು. ಭೀಷಣವಾದ ಅರಣ್ಯವು ಹರಿನಾಮ-ನಾದದಿಂದ ಪ್ರತಿಧ್ವನಿಸಿತು. ಪಶು-ಪಕ್ಷಿ ಪರಮ ಆತ್ಮೀಯರಂತೆ ಅವನೊಡನೆ ಆಡಲುಪಕ್ರಮಿಸಿದವು.

*     *     *

ಕುಂತಳಪುರಕ್ಕೆ ಅಧೀನವಾಗಿ ಚಂದನಪುರ ಎಂಬ ಒಂದು ಚಿಕ್ಕ ಪ್ರಾಂತ್ಯವಿತ್ತು. ಅಲ್ಲಿನ ರಾಜನ ಹೆಸರು ಕುಲಿಂದಕ. ರಾಜ್ಯ ಚಿಕ್ಕದಾಗಿದ್ದರೂ ಧರ್ಮ ಮತ್ತು ಧನ-ಧಾನ್ಯಗಳಿಂದ ಪರಿಪೂರ್ಣವಾಗಿತ್ತು. ಅಭಾವವಾಗಿದ್ದುದು ಒಂದೇ ಒಂದು - ಅದು ರಾಜನು ಪುತ್ರಹೀನನಾಗಿದ್ದುದು. ಪರಮಾತ್ಮನ ಮಾಯೆಯಿಂದ ರಾಜಾ ಕುಲಿಂದಕನು ಏನೋ ಕಾರ್ಯನಿಮಿತ್ತ ಚಂದ್ರಹಾಸನನ್ನು ಕಟುಕನು ಬಿಟ್ಟುಹೋಗಿದ್ದ, ಅದೇ ಕಾಡಿನ ಮಾರ್ಗವಾಗಿ ಹೋಗುತ್ತಿದ್ದನು. ಕೀರ್ತನೆಯ ಮಧುರ ಧ್ವನಿಯನ್ನು ಕೇಳಿ ರಾಜನು ಅವನ ಹತ್ತಿರಕ್ಕೆ ಬಂದನು ಮತ್ತು ಬಾಲಕನ ಮೋಹಕ ರೂಪವನ್ನು ನೋಡಿದಾಕ್ಷಣವೇ ಮುಗ್ಧನಾಗಿ ಹೋದ. ರಾಜನು ಥಟ್ಟನೆ ಬಾಲಕನನ್ನು ಎತ್ತಿಕೊಂಡನು ಮತ್ತು ಶರೀರದ ಮೇಲಿನ ಧೂಳನ್ನು ಒರೆಸಿ ಅವನ ತಾಯಿ-ತಂದೆ ಹೆಸರು-ಊರುಗಳನ್ನು ಕೇಳಿದನು. ಚಂದ್ರಹಾಸನು ಹೇಳಿದನು -

**'ಮಮ ಮಾತಾ ಪಿತಾ ಕೃಷ್ಣಸ್ತೇನಾಹಂ ಪರಿಪಾಲಿತಃ ।**

ನನ್ನ ತಾಯಿ-ತಂದೆ ಎಲ್ಲಾ ಶ್ರೀಕೃಷ್ಣನೇ, ಆತನಿಂದಲೇ ನಾನು ಸಾಕಿ-ಸಲಹಲ್ಪಟ್ಟಿದ್ದೇನೆ.

ರಾಜನು ಯೋಚಿಸಿದ, ಹರಿಯೇ ಕೃಪೆ ತೋರಿ ನನಗೋಸ್ಕರ ಈ ವೈಷ್ಣವ ದೇವ ಶಿಶುವನ್ನು ಇಲ್ಲಿಗೆ ಕಳುಹಿಸಿದ್ದಾನೆ. ಅವನು ಚಂದ್ರಹಾಸನನ್ನು ಎದೆಗಪ್ಪಿಕೊಂಡು ಕುದುರೆಯ ಮೇಲೆ ಹತ್ತಿಸಿಕೊಂಡು ಮನೆಗೆ ಹಿಂದಿರುಗಿ ಬಂದನು. ರಾಣಿಗೆ ಮಡಿಲು ತುಂಬಿಹೋಯ್ತು! ರಾಜನು ದತ್ತು-ಸ್ವೀಕಾರ ಘೋಷಣೆ ಮಾಡಿದನು, ನಗರದಲ್ಲೆಲ್ಲಾ ಆನಂದ ಹರಡಿತು.

ಚಂದ್ರಹಾಸನು ಮೊದಲು ವಿದ್ಯಾಭ್ಯಾಸಕ್ಕೆ ಒಪ್ಪಲಿಲ್ಲ; ಗುರುಗಳು

ಪಾಠ ಹೇಳಿಕೊಡುವಾಗ, ನನ್ನ ಪಾಲಿಗೆ ಹರಿನಾಮದ ಹೊರತು ಮತ್ತೆ ಬೇರೆ ಏನನ್ನೂ ಉಚ್ಚಾರಣೆ ಮಾಡುವ ಅವಶ್ಯಕತೆಯಿಲ್ಲ ಎಂದು ಹೇಳುತ್ತಿದ್ದನು. ಆದರೆ ಬ್ರಹ್ಮೋಪದೇಶ ಆದ ಬಳಿಕ ಸ್ವಲ್ಪ ಸಮಯದಲ್ಲಿಯೇ ಅವನು ನಾಲ್ಕು ವೇದಗಳು ಮತ್ತು ಎಲ್ಲಾ ವಿದ್ಯೆಗಳಲ್ಲಿಯೂ ನಿಪುಣನಾಗಿ ಹೋದನು. ತನ್ನ ಸದ್ಗುಣಗಳಿಂದ ಅವನು ಬಹು ಬೇಗ ಎಲ್ಲಾ ರಾಜ ಪರಿವಾರಕ್ಕೂ ಮತ್ತು ಪ್ರಜೆಗಳಿಗೂ ಜೀವನಾಧಾರನಾಗಿಬಿಟ್ಟನು. ರಾಜ್ಯದಲ್ಲಿ ಧಾರ್ಮಿಕತೆ ಹರಡಿತು. ಹರಿಯ ಗುಣ-ಗಾನದಿಂದ ಚಿಕ್ಕ ರಾಜ್ಯ ಪರಿಪೂರ್ಣಗೊಂಡಿತು. ಮನೆ-ಮನೆಗಳಲ್ಲೂ ಹರಿಯ ಚರ್ಚೆ ಜರುಗಿತು. ಎಲ್ಲರೂ ಏಕಾದಶೀ ವ್ರತ ಮತ್ತು ಭಗವಂತನ ಉಪಾಸನೆ ಮಾಡಲಾರಂಭಿಸಿದರು. ಚಂದ್ರಹಾಸನು ಪ್ರತಿಯೊಂದು ಪಾಠಶಾಲೆಯಲ್ಲಿಯೂ ಹರಿ-ಗುಣ-ಗಾನವನ್ನು ಕಡ್ಡಾಯಗೊಳಿಸಿದನು. ಅವನ ಸಿದ್ಧಾಂತ ಹೀಗಿತ್ತು -

**ಯಸ್ಮಿನ್ ಶಾಸ್ತ್ರೇ ಪುರಾಣೇ ಚ ಹರಿನಾಮ ನ ದೃಶ್ಯತೇ ।**
**ಶ್ರೋತವ್ಯಂ ನೈವ ತಚ್ಛಾಸ್ತ್ರಂ ಯದಿ ಬ್ರಹ್ಮಾಸ್ವಯಂ ವದೇತ್ ॥**

'ಯಾವ ಶಾಸ್ತ್ರ-ಪುರಾಣಗಳಲ್ಲಿ ಹರಿನಾಮವಿಲ್ಲವೋ ಅದನ್ನು ಬ್ರಹ್ಮನೇ ಹೇಳಿದರೂ ಕೂಡ ಶ್ರವಣ ಮಾಡಲು ಯೋಗ್ಯವಲ್ಲ.'

* * *

ಕುಂತಳಪುರಕ್ಕೆ ಚಂದನಪುರ ರಾಜ್ಯದಿಂದ ವಾರ್ಷಿಕ ಹತ್ತು ಸಾವಿರ ಸ್ವರ್ಣದ ನಾಣ್ಯಗಳನ್ನು ಕರ-ಸ್ವರೂಪವಾಗಿ ಕೊಡಲಾಗುತ್ತಿತ್ತು. ಚಂದ್ರಹಾಸನು ಆ ಸ್ವರ್ಣ-ಮುದ್ರಿಕೆಗಳ ಜೊತೆಗೆ ಶತ್ರು ರಾಜ್ಯಗಳ ಮೇಲೆ ವಿಜಯ ಪಡೆದು ಸಂಗ್ರಹಿಸಲಾಗಿದ್ದ ಮತ್ತಷ್ಟು ಹೆಚ್ಚಿನ ಹಣವನ್ನು ಕುಂತಳಪುರಕ್ಕೆ ಕಳುಹಿಸಿದನು.

ಚಂದನಪುರ - ರಾಜ್ಯವು ಹಣ-ಐಶ್ವರ್ಯಗಳಿಂದ ತುಂಬಿ ತುಳುಕುತ್ತಿದೆ ಯೆಂದೂ, ವೀರ ಯುವರಾಜನು ದೊಡ್ಡ-ದೊಡ್ಡ ರಾಜ್ಯಗಳ ಮೇಲೆ ವಿಜಯ ಪಡೆದಿದ್ದಾನೆಂದೂ, ಅಲ್ಲಿ ಪ್ರಜೆಗಳೆಲ್ಲ ಎಲ್ಲಾ ರೀತಿಯಿಂದಲೂ ಸುಖಿಯಾಗಿದ್ದಾರೆಂದೂ ಹಾಗೂ ರಾಜ್ಯವೆಲ್ಲಾ ಹಚ್ಚ-ಹಸುರಾಗಿ ಸಮೃದ್ಧವಾಗಿ

ಬೆಳೆಗುತ್ತಿದೆಯೆಂದೂ ದುಷ್ಟಬುದ್ಧಿಯು ಕೇಳಿದನು. ಆಗ, ಒಂದು ಸಲ ಹೋಗಿ ಅಲ್ಲಿನ ವ್ಯವಸ್ಥೆಯನ್ನು ನೋಡಬೇಕೆಂದು ಅವನಿಗೆ ಇಚ್ಛೆಯುಂಟಾಯಿತು. ದುಷ್ಟಬುದ್ಧಿಯು ಕುಂತಳಪುರದಿಂದ ಹೊರಟು ಆದಷ್ಟು ಬೇಗ ಚಂದನಪುರವನ್ನು ಬಂದು ತಲುಪಿದನು.

ಧರ್ಮಾತ್ಮನಾದ ರಾಜ ಮತ್ತು ಧೀರ-ಶೂರನಾದ ರಾಜಕುಮಾರನು ಅವನನ್ನು ಹೃದಯ ತುಂಬಿ ಸ್ವಾಗತಿಸಿದರು. ದುಷ್ಟಬುದ್ಧಿಯು ಯುವರಾಜನ ಮುಖವನ್ನು ನೋಡಿ ಬೆಚ್ಚಿದನು ಮತ್ತು ನೆಟ್ಟನೋಟದಿಂದ ಒಂದೇ ಸಮನೆ ಅವನತ್ತ ನೋಡತೊಡಗಿದ. ಆದರೆ ಚಂದ್ರಹಾಸನ ಗುರುತು ಹತ್ತಿದ ಕೂಡಲೇ ಅವನ ಹೃದಯದಲ್ಲಿ ಬೆಂಕಿ ಹೊತ್ತಿಕೊಂಡಿತು, ಮನಸ್ಸಿನಲ್ಲಿಯೇ ಅವನು ಮೋಸದ ಬಲೆ ಹೆಣೆಯಲಾರಂಭಿಸಿದನು. ಮೋಸದಿಂದ ಚಂದ್ರಹಾಸನನ್ನು ಕೊಲ್ಲಿಸಬೇಕೆಂದು ನಿಶ್ಚಯಿಸಿ ಅವನು ತನ್ನ ಹಿರಿಯ ಮಗ ಮದನನಿಗೆ ಒಂದು ಗುಟ್ಟಾದ ಪತ್ರವನ್ನು ಬರೆದನು ಮತ್ತು 'ಗೋಮುಖ ವ್ಯಾಘ್ರ' ಎಂಬ ಉಕ್ತಿಯನ್ನು ಚರಿತ್ರಾರ್ಥ ಮಾಡುತ್ತಾ ಕಪಟ ನಗೆ ಬೀರಿ ಪತ್ರವನ್ನು ಚಂದ್ರಹಾಸ ಕೈಗಿತ್ತು ಹೇಳಿದನು - 'ರಾಜಕುಮಾರ! ಬಹಳ ಅತ್ಯಗತ್ಯವಾದ ರಾಜ ಕಾರ್ಯವುಂಟು, ಅದರಿಂದ ನಿಮಗೂ ಮತ್ತು ನಮಗೂ ಬಹು ಹಿತವಾಗುವುದು. ಆದುದರಿಂದ ಇಂದೇ ಈಗಲೇ ಕುಂತಳಪುರಕ್ಕೆ ಹೋಗಿ ಈ ಪತ್ರವನ್ನು ಕುಮಾರ ಮದನನಿಗೆ ಕೊಡು. ನೋಡು, ದಾರಿಯಲ್ಲಿ ಪತ್ರವನ್ನು ತೆರೆಯಬಾರದು ಮತ್ತು ಇದರ ರಹಸ್ಯ ಮದನನಿಗಲ್ಲದೆ ಬೇರೆ ಯಾರಿಗೂ ತಿಳಿಯಬಾರದು.'

ಚಂದ್ರಹಾಸನು ಕುದುರೆ ಹತ್ತಿ ಆ ಕ್ಷಣವೇ ಹೊರಟುಬಿಟ್ಟನು. ಕುಂತಳಪುರ ಅಲ್ಲಿಂದ ಇಪ್ಪತ್ನಾಲ್ಕು ಯೋಜನ ದೂರವಿತ್ತು. ಹೋಗುತ್ತಾ-ಹೋಗುತ್ತಾ ಸಾಯಂಕಾಲವಾಯಿತು. ನಗರದ ಹೊರಭಾಗದಲ್ಲಿ ಕುಂತಳಪುರ ರಾಜನ ಸುಂದರವಾದ ಉದ್ಯಾನವನವಿತ್ತು. ಚಂದ್ರಹಾಸನು ಆಯಾಸವನ್ನು ಪರಿಹರಿಸಿಕೊಳ್ಳಲು ಮತ್ತು ನೀರು ಕುಡಿಯುವುದಕ್ಕಾಗಿ ಉದ್ಯಾನದಲ್ಲಿ ತಂಗಿದನು. ಮನೋಹರವಾದ ಸರೋವರದಲ್ಲಿ ಅವನು ನೀರು ಕುಡಿದು ಕುದುರೆಗೂ

ಕುಡಿಸಿದನು. ಮಾರ್ಗಾಯಾಸವಾಗಿತ್ತು, ಕುದುರೆಯನ್ನು ಒಂದು ಕಡೆ ಕಟ್ಟಿಹಾಕಿ ಅವನು ಮರದ ನೆರಳಿನಲ್ಲಿ ಮಲಗಿಕೊಂಡನು. ಮಂದ-ಸುಗಂಧವಾದ ತಂಗಾಳಿಯ ಸ್ಪರ್ಶದಿಂದ ಅವನಿಗೆ ನಿದ್ರೆ ಆವರಿಸಿತು.

ಆ ಸಮಯದಲ್ಲಿಯೇ ರಾಜಕುಮಾರಿ ಚಂಪಕಮಾಲಿನಿ ಮತ್ತು ಮಂತ್ರಿ-ಮಗಳು ವಿಷಯೆ ಸಖಿಯರೊಂದಿಗೆ ಅದೇ ಹೂ ತೋಟದಲ್ಲಿ ಅಡ್ಡಾಡಲು ಬಂದಿದ್ದರು. ನಾನಾ ರೀತಿಯ ಉಲ್ಲಾಸಕರ ಸಲ್ಲಾಪಗಳ ನಂತರ ರಾಜಕುಮಾರಿ ಮತ್ತು ಬೇರೆ ಬೇರೆ ಸಖಿಯರೆಲ್ಲಾ ಹೊರಟು ಹೋದರು. ಭಗವತ್ಪ್ರೇರಣೆಯಿಂದ ವಿಷಯೆ ಹಿಂದೆ ಉಳಿದುಕೊಂಡಳು. ಅನಂಗ-ಮದನ-ಮೋಹನ ರಾಜಕುಮಾರ ಚಂದ್ರಹಾಸನನ್ನು ನೋಡಿದ ಕೂಡಲೇ ಅವಳ ಮನಸ್ಸು ಮೋಹವಶವಾಯಿತು. ಮನಸ್ಸಿನಲ್ಲೇ ಅವಳು ರಾಜಕುಮಾರನನ್ನು ಪತಿರೂಪದಲ್ಲಿ ವರಿಸಿಬಿಟ್ಟಳು. ಕುಮಾರನ ಕೈಯಲ್ಲಿದ್ದ ಪತ್ರವನ್ನು ನೋಡಿದಳು! ವಿಷಯೆ ನಿಧಾನವಾಗಿ ಪತ್ರವನ್ನು ಸೆಳೆದು ಕೊಂಡಳು. ಅಣ್ಣ ಮದನನ ಹೆಸರಿಗೆ ತಂದೆಯ ಸಹಿಯುಳ್ಳ ಪತ್ರವನ್ನು ನೋಡಿ ಅವಳು ಕುತೂಹಲದಿಂದ ತೆರೆದಳು. ಆದರೆ ಪತ್ರವನ್ನು ಓದಿದ ಕೂಡಲೇ ಅವಳ ಹೃದಯ ವ್ಯಾಕುಲಗೊಂಡಿತು, ಶರೀರ ನಡುಗಿತು, ಮುಖದಲ್ಲಿ ವಿಷಾದ ಹರಡಿತು. ಪತ್ರದಲ್ಲಿ ಬರೆದಿತ್ತು -

ಸ್ವಸ್ತಿಶ್ರೀ ಪ್ರಿಯ ಪುತ್ರ ಮದನ! ಈ ಪತ್ರ ದೊರೆತ ಕೂಡಲೇ ವಿಷವ ಕೊಟ್ಟು ಬಿಡುವುದು. ಇದರಿಂದ ನನ್ನ ಹೃದಯ ಶಾಂತವಾಗುತ್ತದೆ. ಕುಲ, ವಿದ್ಯೆ, ಸೌಂದರ್ಯ, ಶೌರ್ಯ ಏನನ್ನೂ ನೋಡಬೇಡ. ಮದನ ಶತ್ರು ಈ ರಾಜಕುಮಾರನು, ಮನದಲ್ಲಿ ವಿಚಾರಮಾಡು.

ವಿಷಯೆ ಯೋಚಿಸಿದಳು. ಇಂತಹ ಸುಂದರ ಸಿಂಹದ ಮರಿಯಾದ ರಾಜಕುಮಾರನಿಗೆ ತಂದೆ ವಿಷವನ್ನು ಕೊಡಿಸಲಿರುವುದೇಕೆ? ಏನೇ ಆಗಲಿ ನನಗೆ ಯೋಗ್ಯನಾದ ಇಚ್ಛಿತ ವರನನ್ನು ನೋಡಿ ಆನಂದಭರಿತರಾಗಿ ಬರೆಯುವುದರಲ್ಲಿ ಅವರಿಂದ ತಪ್ಪಾಗಿಹೋಗಿದೆ. ನಿಜವಾಗಿಯೂ 'ವಿಷವ ಕೊಡುವುದು' ಎಂಬ ಕಡೆ 'ವಿಷಯೆ ಕೊಡುವುದು' ಎಂದು ಬರೆಯಬೇಕಾಗಿತ್ತು.

ತಂದೆಯು ಹೃದಯ ಶಾಂತವಾಗುವ ಮಾತನ್ನು ಬರೆಯುತ್ತಾರೆ. ಇಂತಹ ಮಾನವ ಶ್ರೇಷ್ಠನಿಗೆ ವಿಷ ಕೊಟ್ಟು ಯಾರ ಹೃದಯ ತಾನೆ ಶಾಂತವಾಗಬಲ್ಲದು? ಬಹಳ ಭಾಗ್ಯದಿಂದ ಇಂತಹ ಅಳಿಯ ದೊರೆಯುತ್ತಾನೆ. ಆದ್ದರಿಂದ ತಂದೆಯುವರು ಕುಲ, ವಿದ್ಯೆ ಮುಂತಾದ ಏನನ್ನೂ ನೋಡದೆ 'ಮದನ-ಶತ್ರು' ಅಂದರೆ ಸೌಂದರ್ಯದಲ್ಲಿ ಕಾಮದೇವನನ್ನೂ ಸಹ ಸೋಲಿಸಬಲ್ಲ ಈ ನಯನಾಭಿರಾಮ ರಾಜಕುಮಾರನ ಕೈಗೆ ತಕ್ಷಣ ನನ್ನನ್ನು ಕೊಟ್ಟು ಬಿಡಲು ಇಚ್ಛೆಪಟ್ಟಿದ್ದಾರೆ. ಪರಮೇಶ್ವರನು ಬಹಳ ಒಳ್ಳೆಯದನ್ನೇ ಮಾಡಿದನು - ಈ ಪತ್ರ ಮೊದಲು ನನ್ನ ಕೈಗೇ ಸಿಕ್ಕಿತು, ಎಲ್ಲಾದರೂ ಅಣ್ಣ ಭ್ರಮೆಯಿಂದ ವಿಷ ಕೊಟ್ಟುಬಿಟ್ಟಿದ್ದರೆ ಮಹಾ ಅನರ್ಥವಾಗಿಬಿಡುತ್ತಿತ್ತು. ವಿಷಯೆ ಚೆನ್ನಾಗಿ ಯೋಚಿಸಿ ನಿಶ್ಚಯಿಸಿಕೊಂಡು ತಕ್ಷಣ 'ವಿಷ ಕೊಡುವುದು' ಎಂಬಲ್ಲಿ ಮಧ್ಯೆ 'ಯೆ' ಎಂಬ ಅಕ್ಷರವನ್ನು 'ವಿಷ' ಎಂಬ ಶಬ್ದದೊಡನೆ ಸೇರಿಸಿ ಬರೆದಳು. ಅದರಿಂದ 'ವಿಷಯೆ ಕೊಡುವುದು' ಎಂದು ಸ್ಪಷ್ಟವಾಯಿತು. 'ಮದನ ಶತ್ರು' ಬೇರೆ ಬೇರೆ ಇತ್ತು. ಅವುಗಳನ್ನು ಸ್ವಲ್ಪ ಸೇರಿಸಿಬಿಟ್ಟಳು. ಅದರಿಂದ 'ಮದನ ಶತ್ರು' ಎಂಬಲ್ಲಿ 'ಮದನ-ಶತ್ರು' ಎಂದು ಸ್ಪಷ್ಟವಾಯಿತು. ನಂತರ ಮಾವಿನ ಮರದ ಗೋಂದಿನಿಂದ ಪತ್ರವನ್ನು ಹೇಗಿತ್ತೋ ಹಾಗೆಯೇ ಮುಚ್ಚಿ ರಾಜಕುಮಾರನ ಕೈಯ್ಯಲ್ಲಿಟ್ಟು ಅವಳು ಓಡುತ್ತಾ ಹೋಗಿ ಸ್ವಲ್ಪ ದೂರ ಮುಂದೆ ಹೋಗುತ್ತಿದ್ದ ಸಖಿಯರ ಗುಂಪಿನಲ್ಲಿ ಸೇರಿಕೊಂಡಳು. ರಾಜಕುಮಾರಿ ಮತ್ತು ಸಖಿಯರು ಅವಳೊಡನೆ ಮಧುರ ಹಾಸ್ಯಮಾಡಲಾರಂಭಿಸಿದರು.

* * *

ಸ್ವಲ್ಪ ಹೊತ್ತಿನಲ್ಲಿ ಚಂದ್ರಹಾಸನಿಗೆ ಎಚ್ಚರವಾಯಿತು. ಸಂಜೆಯಾಗುತ್ತಾ ಬಂದಿತ್ತು. ಅವನು ತಕ್ಷಣ ಹೋಗಿ ಮದನನಿಗೆ ಪತ್ರವನ್ನು ಕೊಟ್ಟುಬಿಟ್ಟನು. ಪತ್ರವನ್ನು ಓದಿ ಮದನನಿಗೆ ಬಹಳ ಸಂತೋಷವಾಯಿತು. ಬ್ರಾಹ್ಮಣರ ಆಜ್ಞೆಯಂತೆ ಆ ದಿನವೇ ಗೋಧೂಳಿ ಲಗ್ನದಲ್ಲಿ ವಿಷಯೆಯೊಂದಿಗೆ ಚಂದ್ರಹಾಸನ ವಿವಾಹ ಬಹಳ ವೈಭವದಿಂದ ನಡೆದುಹೋಯಿತು. ಮದನನು ದೀನರಿಗೆಲ್ಲಾ

ಕೈತುಂಬಾ ದಾನ ಕೊಟ್ಟು ಸಂತುಷ್ಟಗೊಳಿಸಿದನು. ಕನ್ಯಾದಾನದ ಸಮಯದಲ್ಲಿ ಕುಂತಳಪುರದ ರಾಜ ಸ್ವತಃ ದಯಮಾಡಿಸಿದ್ದನು. ಚಂದ್ರಹಾಸನ ಮನಮೋಹಕ ರೂಪ-ಗುಣ ರಾಶಿಯನ್ನು ನೋಡಿ ರಾಜನು ಯೋಚಿಸಿದನು. 'ಚಂಪಕಮಾಲಿನಿಗೆ ಇವನಿಗಿಂತ ಯೋಗ್ಯ ವರ ಬೇರೆ ಯಾರೂ ದೊರೆಯಲಾರ ಮತ್ತು ರಾಜ್ಯಭಾರಕ್ಕೂ ಇಂತಹ ಬಲ-ವೀರ್ಯ-ಬುದ್ಧಿ ಮತ್ತು ಶೀಲ-ಸದಾಚಾರಸಂಪನ್ನನಾದ ಯಾವ ಉತ್ತರಾಧಿಕಾರಿಯೂ ಸಹ ಸಿಕ್ಕಲಾರ!' ರಾಜನು ಆ ಕೂಡಲೇ ತನ್ನ ಮನಸ್ಸಿನಲ್ಲಿ ಧೀರ-ವೀರನಾದ ರಾಜಕುಮಾರ ಚಂದ್ರಹಾಸನ ಕೈಗೆ ರಾಜಪುತ್ರಿ ಸಹಿತ ರಾಜ್ಯವನ್ನು ಸಮರ್ಪಿಸಬೇಕೆಂಬ ನಿಶ್ಚಯ ಮಾಡಿಕೊಂಡನು.

ಮೂರು ದಿವಸಗಳ ನಂತರ ದುಷ್ಟಬುದ್ಧಿ ಹಿಂದಿರುಗಿದನು. ಸಂಪೂರ್ಣ ವಿರುದ್ಧ ಸ್ಥಿತಿಯನ್ನು ನೋಡಿ ಅವನ ಮನಸ್ಸಿಗೆ ತುಂಬಾ ಘಾಸಿಯಾಯಿತು. ಆದರೆ ಅವನು ತನ್ನ ಮನಸ್ಸಿನ ದುರ್ಭಾವನೆಯನ್ನು ತೋರಗೊಡಲಿಲ್ಲ. ಅವನ ದ್ವೇಷ-ಹಿಂಸಾಪೂರ್ಣ ಮಲಿನ ಅಂತಃಕರಣವು ಹೀಗೆ ನಿಶ್ಚಯ ಮಾಡಿಕೊಂಡಿತು - 'ಮಗಳು ವಿಧವೆಯಾದರೂ ಆಗಲಿ ಈ ಶತ್ರುವಿನ ಕೊಲೆ ಖಂಡಿತ ಆಗಲೇಬೇಕು.' ಇದೇ ದುಷ್ಟ ಹೃದಯದ ಪರಾಕಾಷ್ಠತೆ.

ನಗರದಿಂದ ದೂರದ ಕಾಡಿನಲ್ಲಿ ಬೆಟ್ಟದ ಮೇಲೆ ಭವಾನಿಯ ದೇವಾಲಯವಿತ್ತು. ದುಷ್ಟಬುದ್ಧಿಯು ಅಲ್ಲಿಗೆ ಒಬ್ಬ ನಿರ್ದಯಿ ಕೊಲೆಗಡುಕನಿಗೆ ಹೀಗೆ ಹೇಳಿ ಕಳುಹಿಸಿಕೊಟ್ಟನು -

ಈ ದಿನ ಸಾಯಂಕಾಲದ ನಂತರ ಯಾರೇ ಆಗಲಿ ಅಲ್ಲಿಗೆ ಬಂದರೆ ಹಿಂದೆ-ಮುಂದೆ ನೋಡದೆ ಅವನ ತಲೆಯನ್ನು ತೆಗೆದು ಬಿಡುವುದು. ಇತ್ತ ಚಂದ್ರಹಾಸನಿಗೆ ಕಪಟ ನಗೆ ಬೀರುತ್ತಾ ಅವನು ಹೇಳಿದನು -

'ಭವಾನಿಯು ನಮ್ಮ ಕುಲದೇವಿ, ಯಾವುದೇ ಶುಭ ಕಾರ್ಯದ ನಂತರ ನಮ್ಮಲ್ಲಿ ಭವಾನಿಯ ಪೂಜೆ ಕುಲಧರ್ಮವಾಗಿದೆ; ಆದ್ದರಿಂದ ನೀನು ಈ ದಿನವೇ ಸಾಯಂಕಾಲ ಅಲ್ಲಿಗೆ ಹೋಗಿ ಭವಾನಿಗೆ ಕಾಣಿಕೆ ಅರ್ಪಿಸಿ ಬರುವುದು.'

ಮಾವನ ಆಜ್ಞೆಯಂತೆ ಸರಳ ಹೃದಯೀ ಚಂದ್ರಹಾಸನು ಪೂಜಾ-ಸಾಮಗ್ರಿಗಳನ್ನೂ ತೆಗೆದುಕೊಂಡು ಭವಾನಿಯ ದೇವಸ್ಥಾನದ ಕಡೆಗೆ ಹೊರಟನು. ಮನುಷ್ಯನು ಮನದಲ್ಲಿಯೇ ಎಷ್ಟು ಕುಟಿಲತೆಯ ದುರಾಸೆ ಮಾಡುತ್ತಾ ನಾನಾ ಪ್ರಕಾರದ ಕಲ್ಪನೆಗಳ ಸೌಧಗಳನ್ನು ನಿರ್ಮಿಸುತ್ತಾನೆ. ಆದರೆ 'ಪರಮಾತ್ಮನ ಇಚ್ಛೆಯಂತೆ ಎಲ್ಲಾ ನಡೆಯುವುದು.'

ಕುಂತಳಪುರದರಸನ ಮನಸ್ಸಿನಲ್ಲಿ ವೈರಾಗ್ಯ ಉದಿಸಿತು. ಆತನು ಈ ದಿನವೇ ರಾಜ್ಯವನ್ನು ತ್ಯಜಿಸಿ ಪರಮಾತ್ಮ-ಪದ-ಪ್ರಾಪ್ತಿಯ ಸಾಧನೆ ಮಾಡುವುದಕ್ಕಾಗಿ ವಾನಪ್ರಸ್ಥಾಶ್ರಮಕ್ಕೆ ಹೋಗಲು ನಿಶ್ಚಯಿಸಿಕೊಂಡನು. ಆದರೆ ಹೋಗುವ ಮುನ್ನ ರಾಜಕುಮಾರಿಯ ವಿವಾಹ ಮಾಡುವುದು ಮತ್ತು ಯಾರನ್ನಾದರೂ ರಾಜ್ಯದ ಉತ್ತರಾಧಿಕಾರಿ ಮಾಡುವುದು - ಈ ಎರಡು ಅವಶ್ಯಕವಾದ ಕೆಲಸ ಮಾಡಬೇಕಾಗಿತ್ತು. ರಾಜನು ಪೂರ್ವನಿಶ್ಚಯದಂತೆ ಮಂತ್ರಿಯ ಮಗ ಮದನನನ್ನು ಕರೆದು ಹೇಳಿದನು - 'ಮಗು! ನನಗೆ ಈ ದಿನವೇ ಕಾಡಿಗೆ ಹೋಗಬೇಕೆಂದು ಇಚ್ಛೆಯಾಗಿದೆ, ಚಂಪಕಮಾಲಿನಿಯನ್ನು ಯೋಗ್ಯ ರಾಜಪುತ್ರ ಬಾಲಕನಿಗೆ ಕೊಡಲು ಇಚ್ಛಿಸುತ್ತೇನೆ, ರಾಜ್ಯದ ಉತ್ತರಾಧಿಕಾರವನ್ನೂ ಸಹ ಕೊಡಬೇಕಾಗಿದೆ. ನಮ್ಮ ಸೌಭಾಗ್ಯದಿಂದ ಭಗವಂತನು ಕೃಪಾಕರಿಸಿ ಚಂದ್ರಹಾಸನನ್ನು ಇಲ್ಲಿಗೆ ಕಳುಹಿಸಿಕೊಟ್ಟಿದ್ದಾನೆ. ಅವನು ಎಲ್ಲಾ ರೀತಿಯಿಂದಲೂ ಯೋಗ್ಯ, ನೀನು ಈಗಲೇ ಹೋಗಿ ಚಂದ್ರಹಾಸನನ್ನು ಇಲ್ಲಿಗೆ ಕಳುಹಿಸಿಕೊಡು.'

ರಾಜನ ಮಾತನ್ನು ಕೇಳಿ ಸರಳ ಹೃದಯೀ ಮದನನ ಸಂತೋಷಕ್ಕೆ ಮಿತಿಯೇ ಇಲ್ಲವಾಯಿತು. ಅವನು ಭಾವವನ್ನು ಕರೆಯಲು ಓಡಿದನು. ತಂದೆಯ ದುರ್ಭಾವನೆ ಅವನಿಗೆ ಕಿಂಚಿತ್ತೂ ಗೊತ್ತಿರಲಿಲ್ಲ. ಚಂದ್ರಹಾಸ ಭವಾನೀ ದೇವಾಲಯದ ಕಡೆಗೆ ಹೋಗುತ್ತಿರುವಾಗ ಅವನಿಗೆ ದಾರಿಯಲ್ಲಿಯೇ ಸಿಕ್ಕಿದನು. ಅವನು ರಾಜಾಜ್ಞೆಯನ್ನು ಹೇಳಿ ಚಂದ್ರಹಾಸನನ್ನು ಅರಮನೆಗೆ ಕಳುಹಿಸಿಕೊಟ್ಟನು ಮತ್ತು ಅವನಿಂದ ಪೂಜಾ ಸಾಮಗ್ರಿಯನ್ನು ತೆಗೆದುಕೊಂಡು ತಾನೇ ನೇರವಾಗಿ ಭವಾನಿಯ ದೇವಾಲಯಕ್ಕೆ ಹೊರಟು ಹೋದನು.

ದೇವಾಲಯವನ್ನು ಸೇರಿದ ಕೂಡಲೇ ಕೊಲೆಗಡುಕನ ಹರಿತವಾದ ಕತ್ತಿಯು ಅವನ ಶರೀರವನ್ನು ಎರಡು ತುಂಡು ಮಾಡಿಬಿಟ್ಟಿತು. ಚಂದ್ರಹಾಸ ಬದುಕಿಕೊಂಡನು -

**ಜಗದೊಡೆಯನೇ ರಕ್ಷಕನಿರುವಾಗ, ಯಾರೂ ಕೊಲ್ಲಲಾರರು ;**
**ಜಗತ್ತೇ ವೈರಿಯಾದರೂ ಅವನ ಒಂದು ಕೂದಲನ್ನೂ ಕೊಂಕಿಸಲಾರರು.**

ಈ ಕಡೆ ಕುಂತಳಪುರದ ದೊರೆಯು ಚಂದ್ರಹಾಸನಿಗೆ ಚಂಪಕಮಾಲಿನಿಯನ್ನು ವಿವಾಹ ಮಾಡಿ ಕೊಟ್ಟು ಆಶೀರ್ವಾದ ಮಾಡಿದನು ಮತ್ತು ಆಗಲೇ ಗಾಲವಮುನಿಯ ಆದೇಶದಂತೆ ಚಂದ್ರಹಾಸನ ರಾಜ್ಯಾಭಿಷೇಕವೂ ನಡೆದುಹೋಯಿತು. ಚಂದ್ರಹಾಸನು ಮುನಿಗಳ ಅನುಮತಿಯಿಂದ ಚಂಪಕಮಾಲಿನಿಯನ್ನು ಪತ್ನಿಯಾಗಿ ಸ್ವೀಕಾರ ಮಾಡಿಕೊಂಡನು. ರಾಜನು ಸರ್ವಸ್ವವನ್ನೂ ತ್ಯಜಿಸಿ ಮಣ್ಣು-ಕಲ್ಲು ಮತ್ತು ಬಂಗಾರಗಳ ಬಗ್ಗೆ ಸಮಾನ ಬುದ್ಧಿ ತಳೆದು ವನವಾಸಕ್ಕೆ ತೆರಳಿದನು -

**'ವನಂ ಜಗಾಮ ಸಂತ್ಯಜ್ಯ ಸಮಲೋಷ್ಟಾಶ್ಮಕಾಂಚನಃ ।**

ದುಷ್ಟಬುದ್ಧಿಯು ಏನೇನೋ ಯೋಚಿಸಿದ್ದ, ಆದರೆ ಆದದ್ದೇ ಬೇರೆ. 'ನಿನ್ನ ಮನದಲ್ಲಿ ಏನೋ ಬೇರೆ, ಸೃಷ್ಟಿಕರ್ತನದೇ ಮತ್ತೆ ಬೇರೆ.' ಮಾರನೇ ದಿವಸ ಪ್ರಾತಃಕಾಲ ದುಷ್ಟಬುದ್ಧಿಯು - ಚಂದ್ರಹಾಸನ ಜೊತೆ ಚಂಪಕಮಾಲಿನಿಯ ವಿವಾಹ ಮತ್ತು ಅವನಿಗೆ ರಾಜ್ಯಾಭಿಷೇಕ ಆದದ್ದು ಹಾಗೂ ಪ್ರಿಯ ಪುತ್ರ ಮದನನು ಕೊಲೆಗಡುಕನಿಂದ ಕೊಲ್ಲಲ್ಪಟ್ಟಿದ್ದು, ಈ ಸಮಾಚಾರವನ್ನು ಕೇಳಿದಾಗ ಅವನ ತಲೆಗೆ ವಜ್ರಾಘಾತವಾದಂತಾಯಿತು. **'ಪರಾರ್ಥೇ ಯೋಽವಟಂ ಕರ್ತಾ ತಸ್ಮಿನ್ ಸ ಪತತಿ ಧ್ರುವಮ್'** ಬೇರೆಯವರಿಗಾಗಿ ಗುಂಡಿ ತೆಗೆಯುವವನು ತಾನೇ ನಿಜವಾಗಿಯೂ ಅದರಲ್ಲಿ ಬೀಳುತ್ತಾನೆ, ಇದು ಸತ್ಯ.

ದುಷ್ಟಬುದ್ಧಿ ಹತಾಶನಾಗಿ ಭವಾನಿ ದೇವಾಲಯದ ಕಡೆಗೆ ಓಡಿದನು. ಅಲ್ಲಿಗೆ ಹೋಗಿ ಅವನು ಕಂಡುದೇನು - ಪ್ರಾಣಕ್ಕೂ ಮಿಗಿಲಾದ ಪ್ರಿಯ

ಪುತ್ರನ ಶರೀರ ಎರಡು ತುಂಡಾಗಿ ಬಿದ್ದಿದೆ. ಅವನು ದುಃಖದಿಂದ ವ್ಯಾಕುಲಗೊಂಡು ನಾನಾ ರೀತಿ ಪ್ರಲಾಪಿಸುತ್ತಾ ಆ ಕೂಡಲೇ ಕತ್ತಿಯಿಂದ ಆತ್ಮಹತ್ಯೆ ಮಾಡಿಕೊಂಡನು.

ಉನ್ಮತ್ತನಾಗಿ ಓಡಿ ಹೋಗುತ್ತಿದ್ದ ಮಾವ ದುಷ್ಟಬುದ್ಧಿಯನ್ನು ನೋಡಿ ಚಂದ್ರಹಾಸನು ಅವನ ಹಿಂದೆ-ಹಿಂದೆ ಓಡಿದನು. ದೇವಾಲಯಕ್ಕೆ ಹೋಗಿ ಚಂದ್ರಹಾಸನು ನೋಡಿದ. ತಂದೆ-ಮಗ ಇಬ್ಬರೂ ಸತ್ತು ಬಿದ್ದಿದ್ದಾರೆ. ಚಂದ್ರಹಾಸನು ಈ ಎರಡು ಜೀವಗಳ ಮೃತ್ಯುವಿಗೆ ತಾನೇ ಕಾರಣನೆಂದು ತಿಳಿದುಕೊಂಡು ತಾನೂ ಸಾಯಲು ಇಚ್ಛಿಸಿದನು. ಅವನು ಒರೆಯಿಂದ ಕತ್ತಿಯನ್ನು ಹೊರಗೆ ಎಳೆದುಕೊಳ್ಳುತ್ತಿದ್ದಂತೆಯೇ ಭವಾನಿಯು ಪ್ರತ್ಯಕ್ಷವಾಗಿ ಬಂದು ಅವನ ಕೈ ಹಿಡಿದುಕೊಂಡಳು ಮತ್ತು ಅವನನ್ನು ಎಳೆದುಕೊಂಡು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡಳು. ಜನಿಸಿದಂದಿನಿಂದಲೇ ಮಾತೃಹೀನನಾಗಿದ್ದ ಚಂದ್ರಹಾಸನಿಗೆ ಇಂದು ಜಗಜ್ಜನನಿಯ ತೊಡೆಯ ಮೇಲೆ ಕುಳಿತುಕೊಂಡಿದ್ದರಿಂದ ಬಹಳ ಸಂತೋಷವಾಯಿತು.

ಮಾತೆ ಹೇಳಿದಳು - 'ನನ್ನ ಮುದ್ದುಕಂದ ಚಂದ್ರಹಾಸ! ದುಷ್ಟಬುದ್ಧಿಯು ಬಹಳ ದುಷ್ಟ. ಅವನು ನಿನ್ನನ್ನು ಕೊಲ್ಲುವುದಕ್ಕೆ ದೊಡ್ಡ-ದೊಡ್ಡ ಕುತಂತ್ರವನ್ನೇ ರಚಿಸಿದ್ದನು. ಒಳ್ಳೆಯದೇ ಆಯಿತು. ಅವನು ಸತ್ತ. ಹೌದು, ಈ ಮದನ ಭಕ್ತ ಮತ್ತು ನಿನ್ನ ಪ್ರೇಮ ಪಾತ್ರನಾಗಿದ್ದನು. ಆದರೆ ಇವನು ನಿನ್ನ ವಿವಾಹದ ಸಮಯದಲ್ಲಿ ಹಣ-ಐಶ್ವರ್ಯಗಳನ್ನು ದಾನಮಾಡಿದ್ದು ಸಾಲದು ಎಂದು ತಿಳಿದುಕೊಂಡು ತನ್ನ ಶರೀರವನ್ನು ನಿನಗೆ ಅರ್ಪಣೆಮಾಡುವ ಪ್ರತಿಜ್ಞೆ ಮಾಡಿದ್ದನು. ಆದ್ದರಿಂದ ಇಂದು ಇವನೂ ಸಹ ಋಣಮುಕ್ತನಾದನು. ನೀನು ಶೋಕ ಪಡದೆ ರಾಜ್ಯಭಾರ ಮಾಡು. ನಾನು ಪ್ರಸನ್ನಳಾಗಿದ್ದೇನೆ, ಬೇಕಾದ ವರವನ್ನು ಕೇಳಿಕೋ.'

ಚಂದ್ರಹಾಸನು ಹೇಳಿದನು - 'ಜನನೀ! ನೀನು ವರ ಕೊಡಬೇಕೆಂದಿರುವೆ ಯಾದರೆ, ನನ್ನಲ್ಲಿ ಪ್ರಸನ್ನಳಾಗಿದ್ದರೆ ಮೊದಲನೇ ವರವನ್ನು - **'ಹರೌ ಭಕ್ತಿಃ**

**ಸದಾ ಭೂಯಾನ್ಮಮ ಜನ್ಮನಿ ಜನ್ಮನಿ!'** ಹರಿಯಲ್ಲಿ ನನ್ನ ಜನ್ಮ-ಜನ್ಮದಲ್ಲಿಯೂ ಭಕ್ತಿಯು ಸದಾಕಾಲ ಶಾಶ್ವತವಾಗಿರಲಿ ಎಂಬ ವರವನ್ನು ಕೊಡು ಮತ್ತು ಎರಡನೇ ವರವಾಗಿ 'ನನಗೋಸ್ಕರ ಸತ್ತಿರುವ ಈ ಇಬ್ಬರು ವ್ಯಕ್ತಿಗಳೂ ಈಕ್ಷಣ ಜೀವಂತರಾಗಿ ಬದುಕಲಿ' ಈ ದುಷ್ಟಬುದ್ಧಿಯು ನನ್ನನ್ನು ಕೊಲ್ಲಿಸಲು ಏನೇನು ಮಾಡಿದ್ದರು, ಅದಕ್ಕೆ ನನಗೆ ಕಿಂಚಿತ್ತೂ ಸಹ ವ್ಯಥೆಯಿಲ್ಲ; ಮನುಷ್ಯನು ಅಜ್ಞಾನದಿಂದ ಹಾಗೆಲ್ಲಾ ಮಾಡುತ್ತಿರುತ್ತಾನೆ. ತಾಯಿ! ಈತನನ್ನು ಕ್ಷಮಿಸಿ ಬಿಡು. ಇವರಿಗೆ ಒಳ್ಳೆಯ ಬುದ್ಧಿ ದಯಪಾಲಿಸು. ಇವರ ಪಾಪವನ್ನೂ ನಾಶಪಡಿಸಿ, ಇವರಿಗೆ ಭಗವಂತನ ನಿರ್ಮಲ ಭಕ್ತಿಯನ್ನು ಅನುಗ್ರಹಿಸು.'

ಭವಾನಿಯು ಪ್ರಿಯ ವಾಣಿಯಿಂದ 'ತಥಾಸ್ತು' ಎಂದು ಹೇಳಿ ಅಂತರ್ಧಾನವಾದಳು. ತಂದೆ-ಮಗ ಇಬ್ಬರೂ ಮಲಗಿದ್ದು ಎದ್ದವರಂತೆ ಎದ್ದು ಕುಳಿತರು ಮತ್ತು ಅವರು ಚಂದ್ರಹಾಸನನ್ನು ಆಲಿಂಗಿಸಿಕೊಂಡರು.

**II ಭಕ್ತ ಮತ್ತು ಭಗವಂತನಿಗೆ ಜಯವಾಗಲಿ II**

❑❑❑

# ೫. ಸುಧನ್ವ

**ಚಂ**ಪಕಪುರಿಯ ಭಕ್ತ ರಾಜಾ ಹಂಸಧ್ವಜನು ಅಂದು - 'ಆಹಾ! ನನ್ನ ದೊಡ್ಡ ಸೌಭಾಗ್ಯ, ಈ ದಿವಸ ಇದೇ ನೆಪದಿಂದ ಸಾಕಾರ ರೂಪದಲ್ಲಿ ಪ್ರಕಟವಾದ ಸಚ್ಚಿದಾನಂದಘನ ಪರಮಾತ್ಮ ಪಾರ್ಥ-ಸಾರಥಿ, ತ್ರಿಭುವನ-ಮೋಹನ ಭಗವಾನ್ ಶ್ರೀಕೃಷ್ಣನ ದರ್ಶನಮಾಡಿ ನೇತ್ರಗಳನ್ನು ಸಫಲಗೊಳಿಸುವೆನು. ಆತನ ಸೌಂದರ್ಯ ಅತುಲನೀಯವಾಗಿದೆಯೆಂದೂ, ಅವನ ಚರಿತ್ರೆ ವಿಚಿತ್ರವೆಂದೂ ಕೇಳಿದ್ದೇನೆ. ಈ ಭಾಗ್ಯಹೀನ ಕಣ್ಣುಗಳು ಪ್ರಭುವಿನ ಸುಂದರ ಚರಣಾರವಿಂದಗಳ ದರ್ಶನವನ್ನು ಇಂದಿನವರೆಗೂ ಮಾಡಿಲ್ಲ, ವೃದ್ಧಾಪ್ಯ ಬಂದುಬಿಟ್ಟಿದೆ. ಇಂದು ರಣಾಂಗಣದಲ್ಲಿ ಆತನ ಚರಣ-ದರ್ಶನಮಾಡಿ ಜನ್ಮ-ಜೀವನಗಳನ್ನೂ ಸಾರ್ಥಕ ಮಾಡಿಕೊಳ್ಳುವೆನು' ಎಂಬ ಮನೋರಥವನ್ನು ಮಾಡಿಕೊಳ್ಳುತ್ತಾ ಸೇನಾಪತಿಗೆ ಆಜ್ಞೆ ಮಾಡಿದನು -

**ನ ಮಯಾ ವೀಕ್ಷಿತಃ ಕೃಷ್ಣೋ ವೃದ್ಧೇನಾಪಿ ಸ್ವಚಕ್ಷುಷಾ ।**
**ತಸ್ಮಾನ್ನಿರ್ಯಾಂತು ಮೇ ವೀರಾ ಯುದ್ಧಾರ್ಥಂ ಯಾಮ್ಯಹಂ ರಣಮ್ ॥**

'ನಾನು ವೃದ್ಧಾವಸ್ಥೆಯನ್ನು ಮುಟ್ಟಿದರೂ ಇದುವರೆಗೂ ನನ್ನ ಕಣ್ಣುಗಳಿಂದ ಶ್ರೀಕೃಷ್ಣನ ದರ್ಶನ ಮಾಡಲಾಗಲಿಲ್ಲ. ಆದುದರಿಂದ ನನ್ನ ಎಲ್ಲಾ ವೀರರೂ ಯುದ್ಧಕ್ಕಾಗಿ ಹೊರಡಲಿ, ನಾನು ಸಹ ರಣಕ್ಷೇತ್ರಕ್ಕೆ ಹೊರಡುತ್ತೇನೆ.'

ಪಾಂಡವರ ಅಶ್ವಮೇಧ - ಯಜ್ಞದ ಕುದುರೆ ಚಂಪಕಪುರಿಯ ಹತ್ತಿರ ಬಂದಿತ್ತು. ಮಹಾ ಪರಾಕ್ರಮಿ ಅರ್ಜುನ ದಿವ್ಯ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತನಾಗಿ ಪ್ರದ್ಯುಮ್ನಾದಿ ವೀರರ ಸಹಿತ ಕುದುರೆಯ ಬೆಂಗಾವಲಾಗಿ ಹಿಂದೆ-ಹಿಂದೆಯೇ ಬರುತ್ತಿದ್ದಾರೆ. ರಾಜಾ ಹಂಸಧ್ವಜನು ಬೇರೆಯವರಿಂದ ಈ ಒಳ್ಳೆಯ ವಿಚಾರವನ್ನು ಕೇಳಿ ಕ್ಷತ್ರಿಯ-ಧರ್ಮಕ್ಕನುಸಾರವಾಗಿ ಯುದ್ಧದ ಸಿದ್ಧತೆ ಮಾಡಿದನು ಮತ್ತು ಜೊತೆಗೆ ಒಬ್ಬ ಭಕ್ತನೋಪಾದಿಯಲ್ಲಿ ಪಾರ್ಥಸಾರಥಿ ಭಗವಂತನ ದರ್ಶನದ ಪ್ರಬಲವಾದ ಭಾವನೆಯಿಂದ ಯುದ್ಧಭೂಮಿಯ ಕಡೆ ಪ್ರಯಾಣ ಬೆಳೆಸಿದನು.

ರಾಜಾ ಹಂಸಧ್ವಜನು ಬಹಳ ದೊಡ್ಡ ಧರ್ಮಾತ್ಮ, ಪ್ರಜಾಪಾಲಕ, ಶೂರವೀರ ಮತ್ತು ಭಗವದ್ಭಕ್ತನಾಗಿದ್ದನು. ಅವನ ರಾಜ್ಯದಲ್ಲಿನ ಒಂದು ವಿಶೇಷತೆಯೆಂದರೆ ರಾಜ ವಂಶದ ಪುರುಷರ ಸಹಿತ ಪ್ರಜೆಯ ಎಲ್ಲಾ ಪುರುಷರೂ ಏಕಪತ್ನೀ - ವತ್ರದ ಪಾಲನೆ ಮಾಡುವವರಾಗಿದ್ದರು. ದೇಶದ ಎಲ್ಲಾ ನರ-ನಾರಿಯರೂ ಭಗವಂತನ ಪರಮ ಭಕ್ತರಾಗಿದ್ದರು. ರಾಜ್ಯದಲ್ಲಿ ಉದ್ಯೋಗಕ್ಕಾಗಿ ಹೊರಗಿನಿಂದ ಯಾರೇ ಬಂದರೂ ರಾಜನು ಎಲ್ಲಕ್ಕಿಂತ ಮೊದಲು ಅವನೊಡನೆ ಹೇಳುತ್ತಿದ್ದನು -

**ಏಕಪತ್ನೀವ್ರತಂ ತಾತ ಯದಿ ತೇ ವಿದ್ಯತೇಽನಘ ।**
**ತತಸ್ತ್ವಾಂ ಧಾರಯಿಷ್ಯಾಮಿ ಸತ್ಯಮೇತದ್ ಬ್ರವೀಮಿ ತೇ ॥**
**ನ ಶೌರ್ಯಂ ನ ಕುಲೀನತ್ವಂ ನ ಚ ಕ್ವಾಪಿ ಪರಾಕ್ರಮಃ ।**
**ಸ್ವದಾರರಸಿಕಂ ವೀರಂ ವಿಷ್ಣುಭಕ್ತಿಸಮನ್ವಿತಮ್ ॥**
**ವಾಸಯಾಮಿ ಗೃಹೇ ರಾಷ್ಟ್ರೇ ತಥಾನ್ಯೇಽಪಿ ಹಿ ಸೈನಿಕಾಃ ।**
**ಅನಂಗವೇಗಂ ಸ್ವಾಂತೇ ಯೇ ಧಾರಯಂತಿ ಮಹಾಬಲಾಃ ॥**

'ಎಲೈ ನಿಷ್ಪಾಪನೇ! ನೀನು ಏಕಪತ್ನೀವ್ರತದ ಪಾಲನೆ ಮಾಡುವವನಾದರೆ ನಾನು ನಿನ್ನನ್ನು ಇಟ್ಟುಕೊಳ್ಳಬಲ್ಲೆ. ಅಯ್ಯಾ! ನಾನು ನಿಜವಾಗಿಯೂ ಹೇಳುತ್ತೇನೆ - ಶೌರ್ಯ, ಕುಲೀನತೆ ಮತ್ತು ಪರಾಕ್ರಮವನ್ನು ನಾನು ಇಷ್ಟಪಡುವುದಿಲ್ಲ. ಯಾವ ವೀರ ಕೇವಲ ತನ್ನ ಒಬ್ಬಳೇ ಪತ್ನಿಯನ್ನು ಪ್ರೇಮಿಸುವವನಿಗೆ ಮತ್ತು ಭಗವಂತನ ಭಕ್ತಿಯಿಂದ ಸಂಪನ್ನನಾದವನಿಗೆ ಮಾತ್ರ ನಾನು ನಮ್ಮ ಅರಮನೆಯಲ್ಲಿ ಹಾಗೂ ರಾಷ್ಟ್ರದಲ್ಲಿ ಸ್ಥಾನ ಕೊಡಬಲ್ಲೆನು. ಕಾಮದೇವನ ಪ್ರಬಲ ವೇಗವನ್ನು ನಿಗ್ರಹಿಸುವವರೇ . ನಿಜವಾಗಿಯೂ ಮಹಾಬಲಿ.' ಈ ರೀತಿ ಅಧಿಕಾರಿ ಮತ್ತು ಪ್ರಜೆಗಳೆಲ್ಲರ ಜೀವನ-ಧರ್ಮ ಮತ್ತು ಸದಾಚಾರಗಳನ್ನು ಅವಲಂಬಿಸಿತ್ತು ರಾಜನ ಸೈನ್ಯದಲ್ಲಿ ಎಲ್ಲಾ ಯೋಧರೂ -

**ಸರ್ವೇ ತೇ ವೈಷ್ಣವಾ ವೀರಾಃ ಸದಾ ದಾನಪರಾಯಣಾಃ ।**
**ಏಕಪತ್ನೀವ್ರತಯುತಾಃ ಸಂಯತಾಸ್ತೇ ಪ್ರಿಯಂವದಾಃ ॥**

‘ಭಗವದ್ಭಕ್ತ, ರಣವೀರ, ದೀನರಲ್ಲಿ ದಯಾಳು, ದಾನ ನೀಡುವವ, ಏಕಪತ್ನೀವ್ರತಸ್ಥ, ಸದ್ಬುದ್ಧಿಯುಕ್ತ ಮತ್ತು ಪ್ರಿಯವಾದ ಮಾತನಾಡುವವನಾಗಿದ್ದನು.’ ಆದುದರಿಂದ ರಾಜನ ಆಜ್ಞೆ ಪಡೆದು ವೀರರೆಲ್ಲಾ ಅರ್ಜುನನೊಡನೆ ಯುದ್ಧ ಮಾಡಲು ಸಿದ್ಧರಾದರು. ಯಜ್ಞಾಶ್ವವನ್ನು ಹಿಡಿದು ಕಟ್ಟಲಾಯಿತು. ನೀತಿ ಹಾಗೂ ಧರ್ಮಶಾಸ್ತ್ರಗಳ ಪ್ರಕಾಂಡ ಪಂಡಿತರಾದ ರಾಜಗುರು ಋಷಿವರ ಶಂಖ ಮತ್ತು ಲಿಖಿತರ ಆಜ್ಞಾನುಸಾರ ಭಯಂಕರವಾದ ಘೋಷಣೆ ಮಾಡಲಾಯಿತು. - ‘ಇಂತಹ ಸಮಯಕ್ಕೆ ಸರಿಯಾಗಿ ಎಲ್ಲಾ ಯೋಧರೂ ಯುದ್ಧ-ಭೂಮಿಯಲ್ಲಿ ಹಾಜರಿರಬೇಕು. ಯಾರು ಸರಿಯಾದ ಸಮಯಕ್ಕೆ ಬಂದಿರುವುದಿಲ್ಲವೋ ಅವನನ್ನು ಕುದಿಯುವ ಎಣ್ಣೆಯ ಕೊಪ್ಪರಿಗೆಯಲ್ಲಿ ಹಾಕಿಸಲಾಗುವುದು. ಈ ಆಜ್ಞೆಯು ರಾಜನ ಮೊಮ್ಮಕ್ಕಳು, ಪುತ್ರರು ಮತ್ತು ಸಹೋದರರರೆಲ್ಲರಿಗೂ ಸಮಾನ ರೂಪದಲ್ಲಿ ಅನ್ವಯಿಸುವುದು.’

**ನ ನಿರ್ಗಚ್ಛತಿ ಯಃ ಕಶ್ಚಿತ್ ಕಟಾಹೇ ತೈಲಪೂರಿತೇ ।**
**ಪಾತ್ಯತೇ ಜ್ವಲಿತೇ ಘೋರೇ ನಪ್ತೃಪುತ್ರಸಹೋದರಾಃ ॥**

ರಾಜನ ಎಲ್ಲಾ ಸೇನಾನಾಯಕರು, ಮಂತ್ರಿ, ಸಹೋದರ ಮತ್ತು ಸುಬಲ, ಸುರಥ, ಸಮ ಹಾಗೂ ಸುದರ್ಶನ ಎಂಬ ನಾಲ್ವರು ಪುತ್ರರು ರಣರಂಗದ ಕಡೆಗೆ ಹೊರಟು ಹೋದರು. ಎಲ್ಲರಿಗಿಂತ ಚಿಕ್ಕವನಾದ ರಾಜಕುಮಾರನ ಹೆಸರು ಸುಧನ್ವಾ. ವೀರ ಸುಧನ್ವನು ತನ್ನ ವೀರ-ಜನ್ಮದಾತೆ ತಾಯಿಯ ಅಪ್ಪಣೆಯನ್ನು ಪಡೆಯುವುದಕ್ಕಾಗಿ ಹೋಗಿ ಮಾತೃಚರಣಗಳಿಗೆ ತಲೆಬಾಗಿ ಪ್ರಣಾಮ ಮಾಡಿ ಹೇಳಿದನು - ‘ಅಮ್ಮ! ನಾನೀಗ ನನ್ನ ಸೌಭಾಗ್ಯದಿಂದ ಪ್ರಸಿದ್ಧವೀರ ಅರ್ಜುನನ ಸಂಗಡ ಯುದ್ಧಮಾಡುವುದಕ್ಕಾಗಿ ಹೋಗುತ್ತಿದ್ದೇನೆ. ತಾವು ನನಗೆ ಅಪ್ಪಣೆ ಕೊಡಿ. ಅದರಿಂದ ನಾನು ಪಾರ್ಥನಿಂದ ಸುರಕ್ಷಿತವಾದ ‘ಹರಿ’ (ಕುದುರೆ)ಯನ್ನು ಗೆದ್ದುಕೊಂಡು ತರುವೆನು.’ ವೀರಮಾತೆ ಭಗವಂತನ ಪರಮಭಕ್ತಳು, ಈ ಸಲ ಮಗನು ಯುದ್ಧದಿಂದ ಹಿಂದಿರುಗಿ ಬರುವುದು ಕಠಿಣವೆಂದು ಆಕೆಗೆ ತಿಳಿದಿತ್ತು. ಆದುದರಿಂದ ತಾಯಿ ಹೇಳಿದಳು -

**ಗಚ್ಛ ಪುತ್ರ ಹರಿಂ ಯುದ್ಧೇ ವಿಜಿತ್ಯ ಮಮ ಸನ್ನಿಧೌ ।**
**ಹರಿಂ ಚತುಷ್ಪದಂ ತ್ಯಕ್ತ್ವಾ ತಂ ಸಮಾನಯ ಮುಕ್ತಿದಮ್ ॥**

'ಮಗು! ರಣಾಂಗಣಕ್ಕೆ ಹೋಗಿ 'ಹರಿ' ಯನ್ನು ಗೆದ್ದು ಖಂಡಿತವಾಗಿಯೂ ನನ್ನ ಹತ್ತಿರಕ್ಕೆ ಕರೆದುಕೊಂಡು ಬರುವುದು; ಆದರೆ ಕರೆತರಬೇಕು ಮುಕ್ತಿದಾತ ಹರಿಯನ್ನು, ನಾಲ್ಕು ಕಾಲುಗಳ ಪ್ರಾಣಿಯನ್ನಲ್ಲ; ಪ್ರತಾಪಶಾಲಿಯಾದ ನಿನ್ನ ತಂದೆಯು ಇದುವರೆಗೆ ಯುದ್ಧದಲ್ಲಿ ದೊಡ್ಡ-ದೊಡ್ಡ ವೀರರನ್ನೂ ಗೆದ್ದಿದ್ದಾರೆ, ಆದರೆ ಕಂಸನನ್ನು ಕೊಂದ ಶ್ರೀಕೃಷ್ಣನ ದರ್ಶನ ಅವರಿಗೆ ಈವರೆವಿಗೂ ಆಗಲಿಲ್ಲ. ಈಗ, ಎಲೈ ಪುತ್ರ! ನೀನು ನಮಗೆಲ್ಲಾ ಈ ಶ್ರೀಕೃಷ್ಣನ ದರ್ಶನ ಮಾಡಿಸು. ನೀನು ಈಗ ಶ್ರೀಕೃಷ್ಣನು ಪ್ರಸನ್ನವಾಗುವಂತಹ ಕಾರ್ಯವನ್ನು ಮಾಡು. ಇಂದು ನೀನು ನಿನ್ನ ಈ ಕಣ್ಣುಗಳಿಂದ ಶ್ರೀಕೃಷ್ಣನನ್ನು ನೋಡುವೆ, ಇದು ನಿನ್ನ ಅಹೋ ಭಾಗ್ಯ. ಆದರೆ ಶ್ರೀಕೃಷ್ಣನು ಸಿಗುವುದು ಬಹಳ ಕಷ್ಟ. ನಾನು ನಿನಗೆ ಒಂದು ಉಪಾಯವನ್ನು ಹೇಳುತ್ತೇನೆ. ಭಗವಂತನು ಭಕ್ತವತ್ಸಲ, ಆತನು ತನ್ನ ಭಕ್ತವತ್ಸಲತೆಯ ಕಾರಣದಿಂದ ಕುರುಕ್ಷೇತ್ರದ ಭೀಷಣವಾದ ಸಮರದಲ್ಲಿ ಅರ್ಜುನನ ರಥದ ಕುದುರೆಗಳನ್ನು ಹೊಡೆಯುವ ಸಾರಥಿಯಾಗಿದ್ದನು. ಈಗಲೂ ಕೂಡ ಆತನು ಅರ್ಜುನನ ರಕ್ಷಣೆಗಾಗಿ ಬರುತ್ತಾನೆ. ಆದುದರಿಂದ ನೀನು ಯುದ್ಧದಲ್ಲಿ ಅರ್ಜುನನನ್ನು ಗಾಬರಿಗೊಳಿಸಿ ವ್ಯಾಕುಲಪಡಿಸಿದರೆ ಶ್ರೀಕೃಷ್ಣನು ನಿನ್ನ ಮುಂದೆ ಕಾಣಿಸಿಕೊಳ್ಳಬಹುದು. ಕಾಡಿಗೆ ಹೋಗಿರುವ ಕರುವನ್ನು ಬಿಟ್ಟು ಹಸು ಮನೆಗೆ ಹಿಂದಿರುಗದಿರುವಂತೆ, ಶ್ರೀಕೃಷ್ಣನು ತನ್ನ ಭಕ್ತರನ್ನೂ ಎಂದೂ ಬಿಟ್ಟು ಬಿಡಲಾರನೆಂದು ಕೇಳಿದ್ದೇನೆ -

**ಸ್ವಭಕ್ತಂ ನ ತ್ಯಜತ್ಯೇಷ ಮನಾಕ್ ಪುತ್ರ ಮಯಾ ಶ್ರುತಮ್ ।**
**ಯಥಾ ವನಗತಂ ವತ್ಸಂ ತ್ಯಕ್ತ್ವಾ ನಾಯಾತಿ ಗೌಸ್ತಥಾ॥**

ಭಗವಂತ ತನ್ನ ಭಕ್ತರನ್ನು ಆಪತ್ಕಾಲದಲ್ಲಿ ಒಂಟಿಯಾಗಿ ಬಿಡುವುದಿಲ್ಲ. ಮಗು! ನೀನು ಆ ಭಕ್ತವತ್ಸಲ ಶ್ರೀಕೃಷ್ಣನಿಗೆ ಹೆದರಬಾರದು. ಆತನಿಗೆ ಹೆದರುವವನು ಬದುಕಲಾರ. ನೀನು ಹೆದರಿಕೊಂಡೆಯಾದರೆ ಎಲ್ಲರೂ ನನ್ನನ್ನು

ನೋಡಿ ನಿನ್ನ ಮಗ ಶ್ರೀಕೃಷ್ಣನನ್ನು ನೋಡಿ ರಣರಂಗದಿಂದ ಹಿಮ್ಮೆಟ್ಟಿದನೆಂದು ಹೇಳಿಕೊಂಡು ನಗುವರು. ನೀನು ಹೋರಾಡುತ್ತಾ - ಹೋರಾಡುತ್ತಾ ಯುದ್ಧದಲ್ಲಿ ಭೂಮಿಗುರುಳಿ ವೀರರ ಶ್ರೇಷ್ಠ ಗತಿಯನ್ನು ಪಡೆದರೂ ನನಗೆ ಅದರಿಂದ ಸಂತೋಷವಾಗುವುದು. ಮಗು! ಶ್ರೀಕೃಷ್ಣನ ಎದುರಿಗೆ ಯುದ್ಧದಲ್ಲಿ ಮರಣವನ್ನಪ್ಪುವ ಪುರುಷನು ನಿಜವಾಗಿಯೂ ಸಾಯುವುದಿಲ್ಲ. ಅವನು ತನ್ನ ಇಪ್ಪತ್ತೊಂದು ಪೀಳಿಗೆಯವರನ್ನು ಉದ್ಧಾರಮಾಡುತ್ತಾನೆ -

**ಹರೇಃ ಕಿಂ ಸಮ್ಮುಖೇ ಪುತ್ರ ಪತಿತಃ ಪತಿತೋ ಭವೇತ್ ।**
**ತೇನೈವ ಚೋದ್‌ಧೃತಾಃ ಸರ್ವೇ ಆತ್ಮನಾ ಚೈಕವಿಂಶತಿಃ ॥**

ಪ್ರಪಂಚದಲ್ಲಿ ಯಾರ ಮಗ ಮೊಮ್ಮಗ ಭಗವಂತ ಶ್ರೀಹರಿಯ ಕಡೆಗೆ ಹೋಗುವುದಿಲ್ಲವೋ ಅವರ ತಾಯಂದಿರು ಅಳಬೇಕಾಗುತ್ತದೆ.

ಒಂದು ದಿನ ಶ್ರೇಷ್ಠ ಮಾತೆ ಸುಮಿತ್ರಾದೇವಿ ಕೂಡಾ ಪ್ರಿಯ ಪುತ್ರ ಲಕ್ಷ್ಮಣನಿಗೆ ಇದೇ ಉಪದೇಶ ಮಾಡಿದ್ದಳು -

**ಪುತ್ರವತೀ ಜುಬತೀ ಜಗ ಸೋಈ ।**
**ರಘುಪತಿ ಭಗತು ಜಾಸು ಸುತು ಹೋಈ ॥**
**ನತರು ಬಾಂಝು ಭಲಿ ಬಾದಿ ಬಿಆನೀ ।**
**ರಾಮ ಬಿಮುಖ ಸುತ ತೇ ಹಿತ ಜಾನೀ ॥**

**(ರಾಮಚರಿತ ಮಾನಸ)**

ಯಾರ ಮಗನು ಭಗವಂತನ ಭಕ್ತನಾಗಿದ್ದಾನೆಯೋ ಆ ಪುತ್ರವತಿಯೇ ಧನ್ಯಳು. ಇಲ್ಲವಾದರೆ ಬಂಜೆಯಾಗುವುದೇ ಒಳ್ಳೆಯದು. ರಾಮನಿಂದ ವಿಮುಖನಾದ ಪುತ್ರನಿಗೆ ಜನ್ಮನೀಡುವುದೇ ವ್ಯರ್ಥ.

ತಾಯಿಯ ಸದುಪದೇಶವನ್ನು ಕೇಳಿ ವೀರ ಸುಧನ್ವನು ತಾಯಿಯನ್ನು ಸಂತೋಷಪಡಿಸುತ್ತಾ ಹೇಳಿದನು - 'ಅಮ್ಮಾ! ನಿನ್ನ ಆಜ್ಞೆಯಂತೆ ಯುದ್ಧದಲ್ಲಿ ತೊಡಗಿ ತನು-ಮನ ಪೂರ್ವಕ ಹೋರಾಡಿ ಹರಿಯು ಧಾವಿಸಿ ಬರುವಂತೆ

ಮಾಡುವೆನು. ಕರ್ತವ್ಯ ಮಾಡುವುದು ನನ್ನ ಅಧೀನ, ಫಲ ಭಗವಂತನ ಕೈ ಸೇರಿದ್ದು. ಆದರೆ ಶ್ರೀಕೃಷ್ಣನನ್ನು ನೋಡಿ ನಾನು ವಿಮುಖನಾಗಿ ಹೋದರೆ, ನಿನ್ನ ಹೊಟ್ಟೆಯಲ್ಲಿ ಹುಟ್ಟಿದವನೆಂದು ಹೇಳಲಾರೆ ಮತ್ತು ನನಗೆ ಸದ್ಗತಿಯೂ ದೊರೆಯದಿರಲಿ.

ತದನಂತರ ಸಹೋದರಿ ಕುವಲಾಳಿಂದ ಅನುಮತಿ ಮತ್ತು ಉತ್ಸಾಹ ಪಡೆದು ಸುಧನ್ವನು ತನ್ನ ಪತ್ನಿ ಪ್ರಭಾವತಿಯ ಬಳಿಗೆ ಹೋದನು. ಅವಳು ಮೊದಲೇ ದೀಪವಿರುವ ಬಂಗಾರದ ತಟ್ಟೆಯಲ್ಲಿ ಚಂದನ-ಕರ್ಪೂರ ಇಟ್ಟುಕೊಂಡು ಆರತಿ ಎತ್ತುವುದಕ್ಕಾಗಿ ಬಾಗಿಲಲ್ಲಿಯೇ ನಿಂತಿದ್ದಳು. ಸತಿಶಿರೋಮಣಿಯು ಬಹಳ ಭಕ್ತಿ-ಭಾವದಿಂದ ವೀರ ಪತಿಯನ್ನು ಪೂಜಿಸಿದಳು. ನಂತರ ಧೈರ್ಯದಿಂದ ಆರತಿ ಎತ್ತುತ್ತಾ ನಮ್ರತೆಯಿಂದ ಪತಿಗೆ ಪ್ರೇಮಪೂರಿತ ಗುಹ್ಯವಾದ ಮಾತನ್ನು ಹೇಳಿದನು - 'ಹೇ ಪ್ರಾಣನಾಥ! ನಾನು ಶ್ರೀಕೃಷ್ಣನ ದರ್ಶನಾರ್ಥಿಯಾದ ತಮ್ಮ ಮುಖ ಕಮಲದ ದರ್ಶನ ಮಾಡುತ್ತಿದ್ದೇನೆ. ಆದರೆ ನಾಥ! ಇಂದು ನಿಮ್ಮ ಏಕಪತ್ನೀವ್ರತ ನಷ್ಟವಾಗಿ ಹೋಗುವುದೇನೋ ಎಂದು ಗೊತ್ತಾಗುತ್ತಿದೆ, ತಾವು ಯಾರಲ್ಲಿ ಅನುರಕ್ತರಾಗಿ ಉತ್ಸಾಹದಿಂದ ಹೋಗುತ್ತಾ ಇರುವಿರೋ, ಆ ಸ್ತ್ರೀಯು ಎಂದಿಗೂ ನನಗೆ ಸರಿಸಮಾನ ಆಗಲಾರಳು. ನಾನು ನಿಮ್ಮ ಹೊರತು ಬೇರೆ ಯಾರನ್ನೂ ಸಹ ಮರೆತಾದರೂ ಕೂಡಾ ನೋಡಿಲ್ಲ. ಆದರೆ ಆ 'ಮುಕ್ತಿ' ಎಂಬ ಹೆಸರಿನ ರಮಣಿಯಾದರೋ ಪಿತಾ, ಪುತ್ರ ಎಲ್ಲರ ಕಡೆಗೆ ಹೋಗುವವಳು. ನಿಮ್ಮ ಮನಸ್ಸಿನಲ್ಲಿ 'ಮುಕ್ತಿ' ನೆಲಸಿದ್ದಾಳೆ, ಅದರಿಂದಲೇ ಶ್ರೀಕೃಷ್ಣನ ಮೂಲಕ ಅವಳು ದೊರೆಯುವಳೆಂಬ ಆಶೆಯಿಂದ ನೀವು ಓಡುತ್ತಾ ಹೋಗುತ್ತಿರುವಿರಿ. ಪುರುಷರ ಮನಸ್ಸು ದೇವ ರಮಣಿಯರ ಕಡೆ ಹೊರಟು ಹೋಗುತ್ತದೆ. ಆದರೆ ಶ್ರೀಹರಿಯನ್ನು ನೋಡಿ ಆತನ ಅತುಲನೀಯ ಮುಖಕಾಂತಿಯ ಮುಂದೆ 'ಮುಕ್ತಿ' ನಿಮಗೆಂದಿಗೂ ಪ್ರಿಯವಾಗುವುದಿಲ್ಲ ಎಂಬುದನ್ನು ನೀವು ನಿಶ್ಚಯ ಮಾಡಿಟ್ಟುಕೊಳ್ಳಿರಿ. ಏಕೆಂದರೆ ಆತನ ಭಕ್ತರು ಆತನ ಪ್ರೇಮ-ಮಾಧುರ್ಯಕ್ಕೆ ತಮ್ಮನ್ನೇ ಸಮರ್ಪಿಸಿಕೊಳ್ಳುತ್ತಾರೆ, ಅವರು ಮುಕ್ತಿಯನ್ನು

ಎಂದಿಗೂ ಇಚ್ಛಿಸುವುದಿಲ್ಲ. ಮುಕ್ತಿಯು ದಾಸಿಯಂತೆ ಚರಣ-ಸೇವೆಯನ್ನು ಅವಕಾಶವನ್ನು ಹುಡುಕುತ್ತಾ ಅವರ ಹಿಂದೆಯೇ ತಿರಗುತ್ತಿರುತ್ತಾಳೆ. ಆದರೆ ಅವರು ಅವಳ ಕಡೆಗೆ ನೋಡುವುದೇ ಇಲ್ಲ. ಇಷ್ಟೇ ಅಲ್ಲ. ಹರಿಯು ಸ್ವತಃ ತಾನೇ ಒಮ್ಮೊಮ್ಮೆ ಅವರಿಗೆ ಮುಕ್ತಿ ದಯಪಾಲಿಸಲು ಇಚ್ಛಿಸಿದಾಗಲೂ ಅವರು ಅವಳನ್ನು ಸ್ವೀಕರಿಸುವುದಿಲ್ಲ. ಆದುದರಿಂದ ಶ್ರೀಹರಿಯು ಅವರ ಗುಣಗಾನಮಾಡುತ್ತಾ ಹೇಳಿದ್ದಾನೆ -

**ಸಾಲೋಕ್ಯಸಾರ್ಷ್ಟಿಸಾಮೀಪ್ಯಸಾರೂಪ್ಯೈಕತ್ವಮಪ್ಯುತಃ ।**
**ದೀಯಮಾನಂ ನ ಗೃಹ್ಣಂತಿ ವಿನಾ ಮತ್ಸೇವನಂ ಜನಾಃ ॥**

**(ಶ್ರೀಮದ್ಭಾ ೩/೨೯/೧೩)**

‘ನನ್ನಲ್ಲಿ ಅನುರಕ್ತರಾದ ಭಕ್ತರು ನನ್ನ ಸೇವೆಯನ್ನು ಬಿಟ್ಟು ಸಾಲೋಕ್ಯ, ಸಾರ್ಷ್ಟಿ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯ - ಈ ಐದು ಪ್ರಕಾರಗಳ ಮುಕ್ತಿಗಳನ್ನು ನಾನು ಕೊಟ್ಟರೂ ಸಹ ಸ್ವೀಕರಿಸುವುದಿಲ್ಲ.’ ಆದುದರಿಂದ ನೀವು ಶ್ರೀಕೃಷ್ಣನ ಅನುಪಮ ರೂಪ-ಮಾಧುರ್ಯವನ್ನು ನೋಡುವವರೆಗೂ ಮುಕ್ತಿಯನ್ನೇ ಬಯಸುತ್ತೀರಿ.

ಇಷ್ಟಲ್ಲದೆ ಪುರುಷರಂತೆ ಸ್ತ್ರೀ-ಪುರುಷನ ಬಳಿ ಹೋಗುವುದಿಲ್ಲ. ಇಲ್ಲವಾದರೆ ನೀವು ಹೊರಟು ಹೋದ ಮೇಲೆ ನಾನು ‘ಮೋಕ್ಷ’ ದ ಕಡೆಗೆ ಹೊರಟು ಹೋದರೆ ನೀವು ಏನು ಮಾಡಬಲ್ಲಿರಿ? ಆದರೆ ವಿವೇಕ ಎಂಬ ಅದೃಶ್ಯ ಪುತ್ರನು ನಿರಂತರ ನನ್ನ ರಕ್ಷಣೆ ಮಾಡುತ್ತಾನೆ. ಯಾವ ಹೆಂಗಸರಿಗೆ ವಿವೇಕ ಎಂಬ ಪುತ್ರನಿಲ್ಲವೋ ಅವರೇ ಪರ-ಪುರುಷರ ಬಳಿಗೆ ಹೋಗುತ್ತಾರೆ. ನನಗೆ ಬಾಲ್ಯದಿಂದಲೇ ವಿವೇಕ-ಪುತ್ರ ದೊರೆತಿದ್ದಾನೆ, ಆದ್ದರಿಂದ ಹೇ ಆರ್ಯ! ನನಗೆ ಮೋಕ್ಷದ ಬಳಿ ಹೋಗಲು ಸಂಕೋಚವಾಗುತ್ತಿದೆ.

ಪತ್ನಿಯ ಮಧುರ, ಮಾರ್ಮಿಕ ವಚನಗಳನ್ನು ಕೇಳಿ ಉತ್ತರ ಕೊಡುತ್ತಾ ಸುಧನ್ವನು ಹೇಳಿದನು - ‘ಎಲೈ ಸುಂದರೀ! ನಾನು ಶ್ರೀಕೃಷ್ಣನೊಡನೆ ಯುದ್ಧಮಾಡಲು ಹೋಗುತ್ತಿರುವಾಗ ನಿನ್ನನ್ನು ಮೋಕ್ಷದತ್ತ ಹೋಗದಂತೆ

ಹೇಗೆ ತಡೆಯಬಲ್ಲೆನು? ನೀನು ಸಹ ನನ್ನ ಉತ್ತಮ ವಸ್ತ್ರ, ಸ್ವರ್ಣ-ರತ್ನಾದಿಗಳ ಸಮೂಹವನ್ನು ಮತ್ತು ಈ ಶರೀರ ಹಾಗೂ ಮನಸ್ಸನ್ನು ತ್ಯಾಗ ಮಾಡಿ ಹೊರಟು ಹೋಗು. ನೀನು 'ಮೋಕ್ಷ'ದ ಬಗ್ಗೆ ಆಸಕ್ತಿಯುಳ್ಳವಳೆಂದು ನಾನು ಮೊದಲಿ ನಿಂದಲೂ ತಿಳಿದುಕೊಂಡಿದ್ದೆ. ಆದುದರಿಂದ ನಾನು ಪ್ರತ್ಯಕ್ಷವಾಗಿ ವಿವೇಕ ಪುತ್ರನ ಜನ್ಮವನ್ನುಂಟುಮಾಡಲು ಪ್ರಯತ್ನ ಮಾಡಲಿಲ್ಲವೇ?

ಪ್ರಭಾವತಿಯು ಹೇಳಿದಳು - 'ಪ್ರಾಣನಾಥ! ನೀವು ಅರ್ಜುನನೊಡನೆ ಯುದ್ಧಕ್ಕೆ ಹೋಗುತ್ತಿರುವಿರಿ; ಆದರೆ ನನ್ನ ಹೃದಯದಲ್ಲಿರುವ ವಿವೇಕ ಎಂಬ ಪುತ್ರನನ್ನು ನಾನು ಕಣ್ಣುಗಳಿಂದ ನೋಡಬೇಕು. ನೀವು ಹೊರಟು ಹೋದಮೇಲೆ ಜಲತರ್ಪಣಾದಿ ಕೊಡುವ ಸುಪುತ್ರನಿರಬೇಕೆಂದು ನಾನು ಬಯಸುತ್ತೇನೆ.'

ಸುಧನ್ವ - 'ಶ್ರೀಕೃಷ್ಣ ಮತ್ತು ಅರ್ಜುನರನ್ನು ಗೆದ್ದುಕೊಂಡ ಮೇಲೆಯೇ ನಾನು ನಿನ್ನ ಹತ್ತಿರಕ್ಕೆ ಬರುತ್ತೇನೆ.'

ಪ್ರಭಾವತಿ 'ಇಲ್ಲಾ ಪ್ರಭು! ಶ್ರೀಕೃಷ್ಣನ ದರ್ಶನ ಮಾಡಿಕೊಂಡವರು ಪುನಃ ಸಂಸಾರಕ್ಕೆ ಅರ್ಥಾತ್ ಪ್ರಪಂಚಕ್ಕೆ ಎಂದಿಗೂ ಹಿಂದಿರುಗುವುದಿಲ್ಲ.'

ಸುಧನ್ವ - 'ಶ್ರೀಕೃಷ್ಣ ದರ್ಶನ ಮಾಡಿದ ಮೇಲೆ ಪುನರಾಗಮನ ಉಂಟಾಗುವುದಿಲ್ಲವೆಂಬುದೇ ನಿನ್ನ ನಿಶ್ಚಯವಾದರೆ ಜಲತರ್ಪಣಾದಿ ಕೊಡುವ ಪುತ್ರನಿಗಾಗಿ ವ್ಯರ್ಥವಾಗಿ ಇಚ್ಛೆಪಡುವುದೇಕೆ?

ಪ್ರಭಾವತಿ - 'ನನ್ನ ಇಚ್ಛೆಯನ್ನು ನೀವು ಪೂರ್ಣಗೊಳಿಸಲೇ ಬೇಕು.'

ಸುಧನ್ವ - 'ಕಲ್ಯಾಣಿ! ಕಠಿಣವಾದ ಆಳ್ವಿಕೆಯ ಕರ್ತಾ ಮಹಾರಾಜನು ಎಂದು ನಿನಗೆ ತಿಳಿಯದೇ? ಕಿಂಚಿತ್ ಸಮಯ ಮೀರಿದರೂ ಕುದಿಯುವ ಎಣ್ಣೆಯ ಕೊಪ್ಪರಿಗೆ ಸಿದ್ಧವಾಗಿದೆ. ವೀರರೆಲ್ಲಾ ಹೊರಟು ಹೋಗಿದ್ದಾರೆ, ನಾನೊಬ್ಬನೇ ಉಳಿದುಕೊಂಡಿರುವವನು.'

ಅನೇಕ ಬಗೆಯ ಪ್ರಶ್ನೋತ್ತರಗಳು ನಡೆದವು. ಕೊನೆಗೆ ಈ ಧರ್ಮ-

ಸಂಕಟದಲ್ಲಿ ಪತಿವ್ರತೆ ಪ್ರಭಾವತಿಗೇ ವಿಜಯವಾಯಿತು. ಸುಧನ್ವನು ಪುನಃ ಸ್ನಾನ ಪ್ರಾಣಯಾಮಾದಿಗಳನ್ನು ಮಾಡಿ ಯುದ್ಧಕ್ಕಾಗಿ ರಥವೇರಿ ಹೊರಟನು.

ವೀರರ ದಳಗಳೆಲ್ಲಾ ಯುದ್ಧ ಭೂಮಿಯಲ್ಲಿ ಬಂದು ಸೇರಿಕೊಳ್ಳುತ್ತಿವೆ. ಸುತ್ತಲೂ ರಣ-ದುಂದುಭಿ ಮತ್ತು ಶಂಖಧ್ವನಿ ಮೊಳಗುತ್ತಾ ಇದೆ. ನಾಲ್ವರು ಕುಮಾರುರು ಮತ್ತು ಸಮಸ್ತ ಸೇನಾನಾಯಕರುಗಳೆಲ್ಲಾ ಬಂದು ಮಹಾರಾಜ ಹಂಸಧ್ವಜನಿಗೆ ಅಭಿವಂದನೆ ಸಲ್ಲಿಸಿದರು. ಆದರೆ ವೀರಶ್ರೇಷ್ಠ ರಾಜಕುಮಾರ ಸುಧನ್ವನು ಇನ್ನೂ ಬಂದಿರಲಿಲ್ಲ. ಮಹಾರಾಜನು ಸೇನಾಪತಿಯೊಡನೆ ಹೇಳಿದನು "ವಿಚಾರವೇನು? ನನಗೆ ಸುಧನ್ವ ಕಾಣಿಸಲೇ ಇಲ್ಲ. ಇಷ್ಟು ಅಪರಾಧವನ್ನು ಅವನು ಹೇಗೆ ಮಾಡಿದ, ಅವನು ನನ್ನ ಕಠಿಣವಾದ ಆಜ್ಞೆಯನ್ನು ಮರೆತುಬಿಟ್ಟನೋ? ಅವನು ಬಹಳ ಕೆಟ್ಟದಾಗಿ ನಡೆದುಕೊಂಡಿದ್ದಾನೆ, ಕೆಲವು ಸೈನಿಕರು ಹೋಗಿ ಆ ದುಷ್ಟನ ತಲೆ ಕೂದಲನ್ನು ಹಿಡಿದುಕೊಂಡು ನೆಲದಮೇಲೆ ಎಳೆದುಕೊಂಡು ಎಣ್ಣೆಯ ಕೊಪ್ಪರಿಗೆಯ ಹತ್ತಿರಕ್ಕೆ ತರಲಿ ಎಂದು ಆಜ್ಞಾಪಿಸಿದನು. ಕಠಿಣವಾದ ರಾಜಾಜ್ಞೆಯನ್ನು ಪಡೆದು ಕೆಲವು ಸಿಪಾಯಿಗಳು ಹೊರಟರು. ಸುಧನ್ವನು ಅವರಿಗೆ ದಾರಿಯಲ್ಲಿಯೇ ಸಿಕ್ಕಿದನು. ಕಠಿಣ ಹೃದಯದಿಂದ ಕಠೋರ ರಾಜಾಜ್ಞೆಯನ್ನು ತಿಳಿಸುವ ಕಠಿಣ ಕರ್ತವ್ಯವನ್ನು ಸಿಪಾಯಿಗಳಿಗೆ ಪಾಲಿಸಬೇಕಾಯಿತು. ಸುಧನ್ವನು ತಂದೆಯ ಚರಣಗಳ ಬಳಿಗೆ ಹೋಗಿ ಅತ್ಯಂತ ವಿನಯದಿಂದ ನಮಸ್ಕಾರ ಮಾಡಿದನು ಮತ್ತು ವಿಳಂಬವಾದುದಕ್ಕೆ ಕಾರಣವನ್ನು ಸಂಕ್ಷೇಪವಾಗಿ ಹೇಳಿದನು. ರಾಜಾ ಹಂಸಧ್ವಜನು ಕ್ರೋಧದಿಂದ ತಾಳ್ಮೆ ಕಳೆದುಕೊಂಡಿದ್ದನು. ಅವನು ಹೇಳಿದನು - 'ನೀನು ದೊಡ್ಡ ಮೂರ್ಖ. ಭಗವಾನ್ ಶ್ರೀಕೃಷ್ಣನ ಕೃಪೆಯಿಲ್ಲದೆ ಕೇವಲ ಮಗನಿಂದ ಎಂದಿಗೂ ಸದ್ಗತಿ ದೊರೆಯಲಾರದು. ಪುತ್ರನುಳ್ಳವನಿಗೇ ಸದ್ಗತಿಯುಂಟಾಗುವಂತಿದ್ದರೆ ನಾಯಿ ಮತ್ತು ಹಂದಿಗಳಿಗೂ ಖಂಡಿತವಾಗಿಯೂ ಉಂಟಾಗಲೇಬೇಕು. ನಿನ್ನ ಬಲ, ವಿಚಾರ ಮತ್ತು ಧರ್ಮಕ್ಕೆ ಧಿಕ್ಕಾರವಿರಲಿ. ಶ್ರೀಕೃಷ್ಣನ ಹೆಸರನ್ನು ಕೇಳಿದ ಮೇಲೆಯೂ ಕೂಡ ನಿನ್ನ ಮನಸ್ಸು ಕಾಮಕ್ಕೆ ವಶವಾಗಿ ಹೋಯಿತು. ಇಂತಹ

ಮಲಿನ ಮನಸ್ಸಿನ, ಕಾಮ ನಿರತ ಕೃಷ್ಣ - ವಿಮುಖನಾದ ಕುಪುತ್ರನನ್ನು ಕುದಿಯುವ ಎಣ್ಣೆಯ ಕೊಪ್ಪರಿಗೆಯಲ್ಲಿ ಮುಳುಗಿಸುವುದೇ ಉಚಿತ.' ಸುಧನ್ವನು ತಲೆತಗ್ಗಿಸಿಕೊಂಡು ಧೈರ್ಯದಿಂದ ಎಲ್ಲಾ ಮಾತುಗಳನ್ನೂ ಕೇಳಿಸಿಕೊಂಡನು. ರಾಜನು ಪುರೋಹಿತರಾದ ಶಂಖ-ಲಿಖಿತರ ಬಳಿಗೆ ದೂತರನ್ನು ಕಳುಹಿಸಿದನು.

ಪುರೋಹಿತರು ಬಹಳ ಕೋಪಿಷ್ಠರು, ಅವರು ದೂತರ ಮಾತನ್ನು ಕೇಳಿದಕೂಡಲೇ ಹೇಳಿದರು - 'ರಾಜನು ತನ್ನ ಪುತ್ರನಾದ ಕಾರಣ ಮೋಹದಿಂದ ವ್ಯವಸ್ಥೆಯನ್ನು ಕೇಳುತ್ತಾನೆ. ಎಲ್ಲರಿಗೂ ಒಂದೇ ನಿಯಮವಿರುವಾಗ ವ್ಯವಸ್ಥೆಯ ಮಾತೇನಿದೆ? ಮಂದಾತ್ಮಾ, ಲೋಭಿ ಅಥವಾ ಭಯದಿಂದ ತನ್ನ ವಚನವನ್ನು ಪಾಲಿಸದವನು ಬಹು ಕಾಲದವರೆಗೆ ನರಕದ ದಾರುಣ ದುಃಖವನ್ನು ಅನುಭವಿಸುತ್ತಾನೆ. ರಾಜಾ ಹರಿಶ್ಚಂದ್ರ ಮತ್ತು ದಶರಥ ಕುಮಾರ ಶ್ರೀರಾಮಚಂದ್ರನು ವಚನ ಪಾಲನೆಗಾಗಿ ಎಂತೆಂಥಹ ಕಷ್ಟಗಳನ್ನು ಸಹಿಸಿಕೊಂಡರು. ಈಗ ಹಂಸಧ್ವಜನು ಪುತ್ರವಾತ್ಸಲ್ಯದಿಂದ ತನ್ನ ವಚನವನ್ನು ಸುಳ್ಳುಮಾಡಲು ಇಚ್ಛಿಸುವುದಾದರೆ ನಾವು ಇಂತಹ ಅಧರ್ಮೀರಾಜನ ರಾಜ್ಯದಲ್ಲಿರಲು ಇಷ್ಟಪಡುವುದಿಲ್ಲ.' ದೂತರು ಹೋಗಿ ಎಲ್ಲಾ ವಿಚಾರವನ್ನೂ ರಾಜನಿಗೆ ತಿಳಿಸಿದರು. ರಾಜಾ ಹಂಸಧ್ವಜನು 'ಸುಧನ್ವನನ್ನು ಕುದಿಯುತ್ತಿರುವ ಎಣ್ಣೆಯ ಕೊಪ್ಪರಿಗೆಯಲ್ಲಿ ಹಾಕಿಬಿಡುವಂತೆ' ಮಂತ್ರಿಗೆ ಆಜ್ಞಾಪಿಸಿ ಪುರೋಹಿತರನ್ನು ಸಮಾಧಾನಪಡಿಸಲು ಹೊರಟನು. ಮಂತ್ರಿಗೆ ಬಹಳ ದುಃಖವಾಯಿತು. ಆದರೆ ಯಾವ ಉಪಾಯವೂ ಇಲ್ಲ. ಮಂತ್ರಿಯು ಸುಧನ್ವನಲ್ಲಿ ಅನೇಕ ಪ್ರಕಾರದಿಂದ ಕ್ಷಮಾಪಣೆಯ ಪ್ರಾರ್ಥನೆ ಮಾಡಿ ತನ್ನ ಕರ್ತವ್ಯವನ್ನು ನಿವೇದಿಸಿದನು. ಸುಧನ್ವನು ಧೀರತನದಿಂದ ಹೇಳಿದನು - 'ಮಂತ್ರಿವರ್ಯ! ನೀವು ಮಹಾರಾಜರ ಆಜ್ಞೆಯನ್ನು ಖಂಡಿತವಾಗಿಯೂ ಪಾಲಿಸಬೇಕು. ಶ್ರೀಪರಶುರಾಮನು ತಂದೆಯ ಮಾತಿನಂತೆ ತಾಯಿಯ ತಲೆಯನ್ನು ಕಡಿದುಹಾಕಿದ್ದನು. ನನಗೆ ನನ್ನ ಮೃತ್ಯುವಿಗಾಗಿ ಯಾವ ಭಯವೂ ಇಲ್ಲ. ನೀವು ಸಂಕೋಚಪಡದೆ ನನ್ನನ್ನು ಎಣ್ಣೆಯಲ್ಲಿ ಹಾಕಿಸಿರಿ.' ಎಲ್ಲರೂ

ಮಂತ್ರಮುಗ್ಧರಂತೆ ಸುಧನ್ವನ ಮಾತನ್ನು ಕೇಳಿಸಿಕೊಂಡರು. ಸುತ್ತಲೂ ಜನರ ಕಣ್ಣುಗಳಿಂದ ಕಣ್ಣೀರು ಧಾರಾಕಾರವಾಗಿ ಹರಿಯಲಾರಂಭಿಸಿತು. ಆದರೆ ಸುಧನ್ವನು ಶಾಂತಚಿತ್ತದಿಂದಿದ್ದಾನೆ. ಅವನು ದಿವ್ಯ ವಸ್ತ್ರಗಳನ್ನು ಧರಿಸಿ, ತುಲಸೀ ಮಾಲೆಯನ್ನು ಕೊರಳಲ್ಲಿ ಹಾಕಿಕೊಂಡನು ಮತ್ತು ಭಗವಾನ್ ವಾಸುದೇವ ಶ್ರೀಕೃಷ್ಣನ ಸ್ಮರಣೆ ಮಾಡುತ್ತಾ ಶ್ರೀಕೃಷ್ಣನನ್ನು ಕುರಿತು ಈ ರೀತಿ ಹೇಳುತ್ತಾ ಎಣ್ಣೆಯ ಕೊಪ್ಪರಿಗೆಯಲ್ಲಿ ಹಾರಿಕೊಂಡನು - 'ಹೇ ಹರೇ ! ಹೇ ಗೋವಿಂದ !! ಹೇ ಭಕ್ತ-ಭಯ-ಭಂಜನ !!! ನನಗೆ ಸಾಯಲು ಕಿಂಚಿತ್ತಾದರೂ ಭಯವಿಲ್ಲ. ನಾನು ನಿನ್ನ ಚರಣಗಳ ಮೇಲೆ ಪ್ರಾಣಬಿಡುವುದಕ್ಕಾಗಿಯೇ ಬಂದಿದ್ದೆನು. ಆದರೆ ನಿನ್ನನ್ನು ತಿರಸ್ಕಾರಮಾಡಿ ನಾನು ಮಧ್ಯದಲ್ಲಿಯೇ ಕಾಮನ ಸೇವನೆ ಮಾಡಿದುದರಿಂದ ನಿನ್ನ ಪ್ರತ್ಯಕ್ಷ ದರ್ಶನದಿಂದ ವಂಚಿತನಾಗಿದ್ದೇನೆಂದು ಗೊತ್ತಾಗುತ್ತದೆ ಮತ್ತು ಇದರಿಂದಲೇ, ಹೇ ಪ್ರಭು! ಬಹುಶಃ ನೀನು ನನ್ನ ರಕ್ಷಣೆಗೆ ಈಗ ಮನ ಮಾಡುತ್ತಿಲ್ಲ. ಯಾರು ಕೇವಲ ಭಯದಿಂದ ವ್ಯಾಕುಲರಾಗಿ ಕಷ್ಟದಲ್ಲಿ ಸಿಕ್ಕಿಕೊಂಡು ನಿನ್ನ ಸ್ಮರಣೆ ಮಾಡುತ್ತಾರೆಯೋ ಅವರಿಗೆ ಸುಖ ದೊರೆಯುವುದಿಲ್ಲವೆಂದು ಗೊತ್ತಾಗುತ್ತದೆ. ಭಕ್ತ ಪ್ರಹ್ಲಾದ, ಧ್ರುವ, ದ್ರೌಪದಿ ಮತ್ತು ಗೋಪಾದಿಗಳು ಮೊದಲೇ ನಿನ್ನ ಸ್ಮರಣೆ ಮಾಡಿದ್ದರು. ಆದ್ದರಿಂದ ಆಪತ್ತಿನ ಸಮಯದಲ್ಲಿ ನೀನು ಅವರನ್ನು ರಕ್ಷಿಸಿದೆ. ಅಂತ್ಯಕಾಲದಲ್ಲಿ ನಿನ್ನ ಧ್ಯಾನ ಮಾಡುವುದರಿಂದ ಮನುಷ್ಯನು ನಿನ್ನನ್ನು ಸೇರುತ್ತಾನೆ. ಆದುದರಿಂದ ಹೇ ಜನಾರ್ದನ! ನಾನು ನಿನ್ನನ್ನು ಖಂಡಿತ ಸೇರುತ್ತೇನೆ. ಆದರೆ ಸುಧನ್ವನು ವೀರನಾಗಿದ್ದೂ ಸಹ ಯುದ್ಧಭೂಮಿಯಿಂದ ವಿಮುಖನಾಗಿ ಕೊಪ್ಪರಿಗೆಯಲ್ಲಿ ಸುಟ್ಟು ಸತ್ತನೆಂದು ಜನರು ಕಂಡಿತ ಹೇಳುವರು. ನಿನ್ನ ಭಕ್ತ ವೀರ ಅರ್ಜುನನನ್ನು ಮತ್ತು ನಿನ್ನನ್ನು ಯುದ್ಧಭೂಮಿಯಲ್ಲಿ ಬಾಣಗಳ-ಮಳೆಯಿಂದ ಪ್ರಸನ್ನಗೊಳಿಸಿ ಹಾಗೂ ಗಾಂಡೀವ ಧನುಸ್ಸಿನಿಂದ ಬಿಡಲ್ಪಟ್ಟ ತೀಕ್ಷ್ಣವಾದ ಬಾಣಗಳಿಂದ ತುಂಡು-ತುಂಡಾಗಿ ಹೋಗಿ ಸತ್ತಿದ್ದರೆ ಯಾವ ಚಿಂತೆಯೂ ಇರುತ್ತಿರಲಿಲ್ಲ. ಆದರೆ ಇಂದು

ಅಪರಾಧೀ ಕಳ್ಳನ ಹಾಗೆ ಸಾಯುತ್ತಿದ್ದೇನೆ. ಆದ್ದರಿಂದ ನೀನು ಈ ಬಾಲಕನ ಈ ಪ್ರಕಾರದ ಮರಣವನ್ನು ಅನುಚಿತವೆಂದು ತಿಳಿದುಕೊಳ್ಳುತ್ತಿರುವೆಯಾದರೆ ಅಗ್ನಿ-ದಾಹದಿಂದ ಉಳಿಸಿ ಈ ಶರೀರವನ್ನು ನಿನ್ನ ಚರಣಗಳ ಮುಂದೆ ಬೀಳಿಸು. ನಾನೇನೋ ನಿನ್ನವನೇ ಆಗಿದ್ದೇನೆ, ನಿನ್ನವನೇ ಆಗಿರುವೆನು. ನೀನು ಸರ್ವಸಮರ್ಥನಾಗಿರುವೆ. ಲಜ್ಜಾರೂಪೀ ಸಮುದ್ರದಲ್ಲಿ ಬಿದ್ದಿದ್ದ ದ್ರೌಪದಿಯನ್ನು ಪಿತಾಮಹ ಭೀಷ್ಮ ಮತ್ತು ಗುರು ದ್ರೋಣಾಚಾರ್ಯರ ಮುಂದೆ ನೀನು ವಸ್ತ್ರಾವತಾರ ತಾಳಿ ಉದ್ಧಾರ ಮಾಡಿಲ್ಲವೇ!

ಪ್ರಭುವಿನ ಲೀಲೆ ವಿಚಿತ್ರವಾದದ್ದು. ಒಂದು ದಿನ ಪ್ರಹ್ಲಾದನಿಗಾಗಿ ಪ್ರಭು ಅಗ್ನಿಯನ್ನು ತಂಪಾಗಿ ಮಾಡಿದ್ದನು. ಒಂದು ಸಲ ಇಂದ್ರಾದಿ ದೇವತೆಗಳ ದರ್ಪವನ್ನು ಮುರಿಯುವುದಕ್ಕಾಗಿ ದರ್ಪಹಾರಿಯು ದಾವಾನಲದ ದಾರುಣ ಶಕ್ತಿಯನ್ನು ಕಸಿದುಕೊಂಡಿದ್ದನು. ಇಂದು ಭಕ್ತ ಸುಧನ್ವನನ್ನು ಕಾಪಾಡುವುದಕ್ಕಾಗಿಯೂ ಕುದಿಯುವ ಎಣ್ಣೆಯು ಸಜ್ಜನರ ಚಿತ್ತದಂತೆ ಶಾಂತವಾಗಿ ತಂಪೆರೆಯಿತು. **'ತೈಲಂ ಸುಶೀತಲಂ ಜಾತಂ ಸಜ್ಜನಸ್ಯೇವ ಮಾನಸಮ್'** ಸುಧನ್ವನು ಪ್ರೇಮದಿಂದ 'ಗೋವಿಂದ, ದಾಮೋದರ, ಮಾಧವ, ಗೋವಿಂದಾ ಇತ್ಯಾದಿ ಹರಿಯ ಪವಿತ್ರನಾಮ ಸಂಕೀರ್ತನೆ ಮಾಡುತ್ತಾ ತನ್ನ ತನುವಿನ ಪ್ರಜ್ಞೆಯನ್ನೇ ಮರೆತುಬಿಟ್ಟನು. ಕೊಪ್ಪರಿಗೆಯಲ್ಲಿ ಅವನ ಪ್ರೇಮ-ಸಮಾಧಿಯಾಯಿತು. ಕುದಿಯುವ ಎಣ್ಣೆಯಲ್ಲಿ ಬಿದ್ದರೂ ಸಹ ಸುಧನ್ವನು ಸುಡುತ್ತಾ ಇಲ್ಲ ಮತ್ತು ಎಣ್ಣೆಯ ಮೇಲೆ-ಮೇಲೆಯೇ ತೇಲುತ್ತಿದ್ದಾನೆ. ಇದನ್ನು ನೋಡಿ ಜನರಿಗೆ ಆಶ್ಚರ್ಯವೇ-ಆಶ್ಚರ್ಯ. ರಾಜಾ ಹಂಸಧ್ವಜನೂ ಸಹ ಇಬ್ಬರು ಪುರೋಹಿತರನ್ನು ಸಂಗಡ ಕರೆದುಕೊಂಡು ಇದಕ್ಕಿಂತ ಮೊದಲೇ ಬಂದಿದ್ದನು. ರಾಜನಿಗೆ ಬಹಳ ವಿಸ್ಮಯವಾಯಿತು.

ಭಗವಂತನಲ್ಲಿ ಭಕ್ತಿ ಮತ್ತು ಶ್ರದ್ಧೆಗಳಿಲ್ಲದೆ ಕೇವಲ ತರ್ಕ ಮತ್ತು ಬುದ್ಧಿಯ ಅಭಿಮಾನಗಳನ್ನೇ ಅವಲಂಬಿಸಿರುವ ದುರಹಂಕಾರೀ ಪುರೋಹಿತ ಶಂಖನು ಸುಧನ್ವನ ಮೇಲೆ ಸಂದೇಹ ಪಡುತ್ತಾ ರಾಜನ ಬಳಿ ಹೇಳಿದನು -

'ಮಹಾರಾಜ! ಏನಿದು? ಎಣ್ಣೆ ಕಾಯ್ದಿಲ್ಲವೋ ಅಥವಾ ನಿನ್ನ ಮಗ ಏನಾದರೂ ಔಷಧ-ಮಂತ್ರ ತಿಳಿದುಕೊಂಡಿದ್ದಾನೆಯೋ? ಇವನ ಮುಖ ಅರಳಿದ ಕಮಲದಂತೆ ಕಾಂತಿಯಿಂದ ಕೂಡಿದ ತೇಜಸ್ಸಿನಿಂದ ಹೊಳೆಯುತ್ತಿದೆ. ಇವನ ಅಂಗಾಗಂಗಳ ಮೇಲೆ ಎಲ್ಲಿಯೂ ಒಂದು ಬೊಬ್ಬೆಯೂ ಸಹ ಎದ್ದಿಲ್ಲ! ಏನೇ ಆಗಲಿ ಇದರಲ್ಲಿ ಏನಾದರೂ ಒಂದು ಚಮತ್ಕಾರವಿದೆ. ನಿಜವಾಗಿಯೂ ಎಣ್ಣೆ ಕಾಯ್ದಿದ್ದರೆ ಹೀಗೆ ಎಂದಿಗೂ ಆಗುತ್ತಿರಲಿಲ್ಲ. ಕಾದ ಎಣ್ಣೆಯಿಂದ ಮನುಷ್ಯ ಸುಡದೇ ಇರುವುದು ಪ್ರಕೃತಿಗೆ ವಿರುದ್ಧವಾಗಿದೆ.' ಎಲೈ! ಧರ್ಮ ಶಾಸ್ತ್ರಜ್ಞಾನಿ ಬ್ರಾಹ್ಮಣ! ಪ್ರಭು ಪ್ರಕೃತಿಯ ಸ್ವಾಮಿ, ಆತನ ಇಚ್ಛೆಯಿಂದ, ಅಲ್ಲ-ಅಲ್ಲ ಸಂಕಲ್ಪ ಮಾತ್ರದಿಂದಲೇ ಅಸಂಭವಾದದ್ದು ಸಂಭವವಾಗಿಬಿಡುತ್ತದೆ ಎಂಬುದು ನೀನಿನ್ನೂ ತಿಳಿಯೆ.

ಶಂಖನಿಗೆ ಸುಮ್ಮನಿರಲಾಗಲಿಲ್ಲ, ಅವನು ತೈಲದ ಪರೀಕ್ಷೆ ಮಾಡುವುದಕ್ಕಾಗಿ ಕೊಪ್ಪರಿಗೆಯಲ್ಲಿ ಒಂದು ತೆಂಗಿನಕಾಯನ್ನು ಹಾಕಿಸಿದನು. ಕುದಿಯುವ ಎಣ್ಣೆಯಲ್ಲಿ ಬಿದ್ದ ಕೂಡಲೇ ತೆಂಗಿನಕಾಯಿ ಚಟ್ಟೆಂದು ಸಿಡಿಯಿತು. ಅದು ಎರಡು ಚೂರಾಗಿ ಹಾರಿಹೋಗಿ ಶಂಖ-ಲಿಖಿತ ಎಂಬ ಇಬ್ಬರು ಋಷಿಗಳ ಹಣೆಗೆ ಜೋರಾಗಿ ಬಡಿಯಿತು. ಮುನಿಗಳು ಗಾಬರಿಯಾದರು. ಈಗ ಅವರ ಕಣ್ಣು ತೆರೆದವು ಭಗವಂತ ಮತ್ತು ಆತನ ಭಕ್ತರ ಮಾಹಾತ್ಮ್ಯ ತಿಳಿಯಿತು.

ಮುನಿವರ ಶಂಖನು ಆಳುಗಳನ್ನು ಕೇಳಿದನು - 'ಕುದಿಯುವ ಎಣ್ಣೆಯಲ್ಲಿ ಸುಧನ್ವನು ಸುಡದಿರಲು ಕಾರಣವೇನು? ಇವನು ಯಾವುದಾದರೂ ಮಂತ್ರವನ್ನು ಜಪಿಸಿದನೇ? ಅಥವಾ ಎಣ್ಣೆಯ ಬಿಸಿ ತಟ್ಟದಿರುವ ಹಾಗೆ ಶರೀರಕ್ಕೆ ಯಾವುದಾದರೂ ಮೂಲಿಕೆಯನ್ನು ಕಟ್ಟಿಕೊಂಡಿದ್ದನೇ?'

ಆಳುಗಳು ನಮ್ರತೆಯಿಂದ ಹೇಳಿದರು - 'ಮುನಿವರರೇ! ರಾಜಕುಮಾರರು ಯಾವ ಮಂತ್ರವನ್ನು ಜಪಿಸುವುದಾಗಲೀ ಅಥವಾ ಔಷಧಿಯನ್ನು ಕಟ್ಟಿಕೊಳ್ಳುವುದನ್ನಾಗಲೀ ನೋಡಲಿಲ್ಲ. ಹೌದು, ಕುಮಾರ ದೀನರಾಗಿ ಆ ಮಹಾಮಹಿಮ ಭಗವಾನ್ ಶ್ರೀಕೃಷ್ಣನ ಸ್ಮರಣೆಯನ್ನು ಖಂಡಿತ ಮಾಡಿದ್ದರು. **'ಯಸ್ಯ**

**ಸ್ಮರಣಮಾತ್ರೇಣ ಮುಚ್ಯತೇ ಯೋನಿಸಂಕಟಾತ್'** ಆತನ ಸ್ಮರಣೆ ಮಾತ್ರದಿಂದಲೇ ಜೀವನು ಜನನ-ಮರಣದ ಸಂಕಟದಿಂದ ಮುಕ್ತನಾಗಿಬಿಡುತ್ತಾನೆ. ಈಗಲೂ ಸಹ ಸುಧನ್ವನ ಅದುರುತ್ತಿರುವ ತುಟಿಯನ್ನೂ ನೋಡಿ, ಈತನಿಂದ ಭಗವಾನ್ ಶ್ರೀಕೃಷ್ಣನ ನಾಮ ಸ್ಮರಣೆ ಹೇಗೆ ಸತತವಾಗಿ ಜರುಗುತ್ತಿದೆ. ಇದನ್ನು ಕೇಳಿ ಶಂಖ ಮುನಿಯು ತನ್ನನ್ನು ಧಿಕ್ಕರಿಸಿಕೊಳ್ಳುತ್ತಾ ಹೇಳಿದನು - 'ಇವನು ಧನ್ಯ, ಇವನು ಮಹಾನ್ ಸಾಧು, ಇವನು ಭಗವಾನ್ ಶ್ರೀಕೃಷ್ಣನ ಸ್ಮರಣೆಯಲ್ಲಿ ಎಷ್ಟೊಂದು ಮನಸ್ಸಿಟ್ಟಿದ್ದಾನೆ. ನಮ್ಮಂತಹ ವ್ಯರ್ಥ ಪಂಡಿತರಿಗೆ ಧಿಕ್ಕಾರ, ಪಾಂಡಿತ್ಯದ ಅಭಿಮಾನದಲ್ಲಿ ಭಗವಂತನಿಂದ ವಿಮುಖರಾಗಿದ್ದೇವೆ.' ಇದೇ ಪ್ರಕಾರ ಒಂದು ದಿನ ವ್ರಜಭೂಮಿಯಲ್ಲಿಯೂ ಸಹ ಯಜ್ಞಕರ್ತೃಗಳಾದ ಬ್ರಾಹ್ಮಣರು ತಮ್ಮ ಪತ್ನಿಯರ ಅತುಲನೀಯ ಶ್ರೀಕೃಷ್ಣ - ಪ್ರೇಮದಿಂದ ಪ್ರಭಾವಿತರಾಗಿ ತಮ್ಮನ್ನು ಧಿಕ್ಕರಿಸಿಕೊಳ್ಳುತ್ತಾ ಹೇಳಿದ್ದರು -

**ಧಿಗ್ ಜನ್ಮ ನಸ್ತ್ರಿವೃದ್ವಿದ್ಯಾಂ ಧಿಗ್ ವ್ರತಂ ಧಿಗ್ ಬಹುಜ್ಞತಾಮ್ ।**
**ಧಿಕ್ ಕುಲಂ ಧಿಕ್ ಕ್ರಿಯಾದಾಕ್ಷ್ಯಂ ವಿಮುಖಾ ಯೇ ತ್ವಧೋಕ್ಷಜೇ ॥**

**ನೂನಂ ಭಗವತೋ ಮಾಯಾ ಯೋಗಿನಾಮಪಿ ಮೋಹಿನೀ ।**
**ಯದ್ ವಯಂ ಗುರುವೋ ನೃಣಾಂ ಸ್ವಾರ್ಥೇ ಮುಹ್ಯಾಮಹೇ ದ್ವಿಜಾಃ॥**

**ಅಹೋ ಪಶ್ಯತ ನಾರೀಣಾಮಪಿ ಕೃಷ್ಣೇ ಜಗದ್ಗುರೌ ।**
**ದುರಂತಭಾವಂ ಯೋऽವಿಧ್ಯನ್ ಮೃತ್ಯುಪಾಶಾನ್ ಗೃಹಾಭಿಧಾನ್॥**

**ನಾಸಾಂ ದ್ವಿಜಾತಿ ಸಂಸ್ಕಾರೋ ನ ನಿವಾಸೋ ಗುರಾವಪಿ ।**
**ನ ತಪೋ ನಾತ್ಮಮೀಮಾಂಸಾ ನ ಶೌಚಂ ನ ಕ್ರಿಯಾಃ ಶುಭಾಃ ॥**

**ಅಥಾಪಿ ಹ್ಯುತ್ತಮಶ್ಲೋಕೇ ಕೃಷ್ಣೇ ಯೋಗೇಶ್ವರೇಶ್ವರೇ ।**
**ಭಕ್ತಿರ್ದೃಢಾ ನ ಚಾಸ್ಮಾಕಂ ಸಂಸ್ಕಾರಾದಿಮತಾಮಪಿ ॥**

**(ಶ್ರೀಮದ್ಭಾ. ೧೦/೨೩/೩೯-೪೩)**

'ಭಗವಾನ್ ಶ್ರೀಹರಿಯಿಂದ ವಿಮುಖರಾಗಿರುವ ಬ್ರಾಹ್ಮಣರಾದ ನಮ್ಮ

ಮೂರು ಜನ್ಮಗಳಿಗೂ (ಒಂದು ಗರ್ಭದಿಂದ, ಎರಡನೆಯದು ಉಪನಯನ ದಿಂದ, ಮೂರನೆಯದು ಯಜ್ಞದೀಕ್ಷೆಯಿಂದ) ಬ್ರಹ್ಮಚರ್ಯವ್ರತಕ್ಕೆ, ಬಹು ನಿಪುಣತೆಗೆ ಪದೇ-ಪದೇ ಧಿಕ್ಕಾರವಿರಲಿ. ಭಗವಂತನ ಮಾಯೆಯು ಯೋಗಿಗಳನ್ನೂ ಕೂಡ ಮೋಹಗೊಳಿಸುತ್ತದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಜನರಿಗೆ ಉಪದೇಶ ಮಾಡುವ ಗುರುವಾಗಿದ್ದರೂ ನಾವು ಈ ದಿನ ನಮ್ಮ ಯಥಾರ್ಥ ಸ್ವಾರ್ಥದಿಂದ ದಾರಿತಪ್ಪಿದ್ದೇವೆ. ಆಹಾ! ಈ ಸ್ತ್ರೀಯರಿಗೆ ಜಗದ್ಗುರು ಭಗವಾನ್ ಶ್ರೀಕೃಷ್ಣನಲ್ಲಿ ಎಂತಹ ಅನನ್ಯ-ಭಕ್ತಿಯಿದೆ, ಅದರಿಂದ ಇವರು ಮನೆಯ ಮಮತೆಯೆಂಬ ಕಠಿಣವಾದ ಮೃತ್ಯು-ಪಾಶವನ್ನು ಕ್ಷಣಮಾತ್ರದಲ್ಲಿ ಕಿತ್ತೊಗೆದರು. ಈ ಮಹಿಳೆಯರಿಗೆ ನಮ್ಮ ಹಾಗೆ ಉಪನಯನ-ಸಂಸ್ಕಾರವಿಲ್ಲ, ಇವರು ಗುರುಗಳ ಬಳಿಯಿದ್ದು ವಿದ್ಯೆ ಕಲಿತಿಲ್ಲ, ತಪಸ್ಸು ಮಾಡಿಲ್ಲ, ಆತ್ಮಜ್ಞಾನದ ವಿಚಾರಮಾಡಲಿಲ್ಲ. ಇವರಲ್ಲಿ ಮಡಿವಂತಿಕೆಯಿಲ್ಲ ಮತ್ತು ಇವರು ಯಜ್ಞಾದಿ ಶುಭಕಾರ್ಯಗಳನ್ನು ಮಾಡುವುದಿಲ್ಲ. ಹೀಗಿದ್ದರೂ ಯೋಗೇಶ್ವರರ ಈಶ್ವರ ಪವಿತ್ರ ಕೀರ್ತಿ ಭಗವಾನ್ ಶ್ರೀಕೃಷ್ಣನಲ್ಲಿ ಇವರಿಗೆ ಸುದೃಢವಾದ ಭಕ್ತಿಯಿದೆ. ನಮಗೆ ಎಲ್ಲಾ ಸಂಸ್ಕಾರಗಳೂ ಆಗಿವೆ, ನಮ್ಮಲ್ಲಿ ವಿದ್ಯೆ, ವಿವೇಕ, ತಪಸ್ಸು, ಶೌಚ (ಪವಿತ್ರತೆ) ಮತ್ತು ಯಜ್ಞಾದಿ ಕ್ರಿಯೆಗಳೂ ಇವೆ. ಆದರೂ ನಮ್ಮಲ್ಲಿ ಭಗವಂತನ ಭಕ್ತಿ ಇಲ್ಲವೆಂಬುದು ಬಹು ದುಃಖದ ಸಂಗತಿ.

ನಿತ್ಯವೂ ಭಗವಂತನ ಚರಣಗಳ ಚಿಂತನೆ ಮಾಡುತ್ತಾ ಆತನಿಗೆ ಶರಣಾಗಿರುವವನೇ ದೊಡ್ಡವನು ಮತ್ತು ಬುದ್ಧಿವಂತನೂ ಕೂಡಾ ಎಂಬುದು ಸತ್ಯವಾದ ಮಾತು. ಭಕ್ತ ಪ್ರಹ್ಲಾದನು ಹೀಗೆ ಹೇಳಿದ್ದಾನೆ - 'ಹನ್ನೆರಡು ಪ್ರಕಾರಗಳ ಸದ್ಗುಣಗಳಿಂದ ಸಂಪನ್ನನಾದ ಬ್ರಹ್ಮನೂ ಕೂಡ, ಭಗವಾನ್ ಕಮಲನಾಭನ ಚರಣಕಮಲಗಳಿಂದ ವಿಮುಖನಾದರೆ ಅವನಿಗಿಂತ, ತನ್ನ ತನು, ಮನ, ಧನ, ವಚನ, ಕರ್ಮ ಮತ್ತು ಪ್ರಾಣವನ್ನು ಭಗವದರ್ಪಣ ಮಾಡಿರುವ ಚಾಂಡಾಲನು ಶ್ರೇಷ್ಠವಾಗಿದ್ದಾನೆ. ಆ ಭಗವದ್ಭಕ್ತ ಚಾಂಡಾಲನು

ತನ್ನ ಕುಲವನ್ನೆಲ್ಲಾ ಪವಿತ್ರಗೊಳಿಸಬಲ್ಲನು. ಆದರೆ ಆ ಬಹು ಸನ್ಮಾನಿತ ಬ್ರಾಹ್ಮಣ ತನ್ನನ್ನೂ ಪವಿತ್ರ ಮಾಡಿಕೊಳ್ಳಲಾರನು. (ಶ್ರೀಮದ್ಭಾ. ೭/೯/೯.)

ಈಗ ಶಂಖಮುನಿಗೆ ತಾನು ಮಾಡಿದ ಕೆಲಸಕ್ಕೆ ಪಶ್ಚಾತ್ತಾಪವಾಗಿ ಹೇಳುತ್ತಾನೆ - 'ನಾನು ಈ ಕಾದ ಎಣ್ಣೆಯ ಕೊಪ್ಪರಿಗೆಯಲ್ಲಿ ಹಾರಿ ಮರಣಾಂತ ಪ್ರಾಯಶ್ಚಿತ್ತ ಮಾಡಿಕೊಳ್ಳುವೆನು. **'ಪ್ರಾಯಶ್ಚಿತ್ತಂ ಸ್ವದೇಹಸ್ಯ ಕರಿಷ್ಯೇ ಮರಣಾಂತಕಮ್'** ಹೀಗೆಂದು ಹೇಳುತ್ತಾ ಮುನಿಯು ಹಾರಿ ಎಣ್ಣೆಯ ಕೊಪ್ಪರಿಗೆಯಲ್ಲಿ ಬಿದ್ದನು. ಆದರೆ ಭಕ್ತ ಸುಧನ್ವನು ಶುಭ ಭಾವನೆಯಿಂದ ಕುದಿಯುತ್ತಿರುವ ಎಣ್ಣೆ ಅವನಿಗೂ ಸಹ ತಂಪಾಗಿ ಹೋಯಿತು. ಮುನಿಯು ಸುಧನ್ವನನ್ನು ಎದೆಗಪ್ಪಿ ಗದ್ಗದ-ಕಂಠದಿಂದ ಹೇಳಿದನು -

'ಪ್ರಿಯ ಕುಮಾರ! ನೀನು ಮಹಾನ್ ಸಾಧು, ಶ್ರೇಷ್ಠ ಕ್ಷತ್ರಿಯ ವೀರನಾಗಿರುವೆ, ನೀನೇ ಧನ್ಯ. ನಾನಾದರೋ ಅಸಾಧು ಬ್ರಾಹ್ಮಣ, ನನ್ನಂತಹ ಮೂರ್ಖನು ನಿನ್ನಂತಹ ಭಕ್ತನನ್ನು ಕುದಿಯುವ ಎಣ್ಣೆಯಲ್ಲಿ ಹಾಕಿಸಿದೆ. ಭಗವಾನ್ ಶ್ರೀಕೃಷ್ಣನ ಸ್ಮರಣೆ ಮಾಡದೇ ಇರುವಂತಹ ಮೂರ್ಖನಿಗೆ ಪ್ರಪಂಚದಲ್ಲಿ ಯಾವಾಗಲೂ ಸಂತಾಪ, ಕೊರತೆ ಮತ್ತು ದುಃಖವುಂಟಾಗುತ್ತದೆ ಎಂದು ನಾನು ತಿಳಿದುಕೊಂಡೆನು.' ಭಾಗ್ಯವಂತರಾದವರು ಸರ್ವಾಭೀಷ್ಟ ಫಲದಾತಾ ಭಗವಾನ್ ಗೋವಿಂದನ ಸ್ಮರಣೆ ಮಾಡುತ್ತಾ ಮೂರು ತಾಪಗಳಿಂದಲೂ ಬಿಡುಗಡೆ ಹೊಂದಿ ಪೂರ್ಣ ಸುಖಿಯಾಗುತ್ತಾರೆ-

**ಯೇ ಸ್ಮರಂತಿ ಚ ಗೋವಿಂದಂ ಸರ್ವಕಾಮಫಲಪ್ರದಮ್ ।**
**ತಾಪತ್ರಯವಿನಿರ್ಮುಕ್ತಾ ಜಾಯಂತೇ ದುಃಖವರ್ಜಿತಾಃ ॥**

ನಿನ್ನಂತಹ ಪರಮ ವೈಷ್ಣವನನ್ನು ಸುಡುವಂತಹ ಶಕ್ತಿ ಅಗ್ನಿಗೆಲ್ಲಿದೆ. ಸುರಾಸುರ ಗುರು ಭಗವಾನ್ ಶ್ರೀಕೃಷ್ಣನ ದರ್ಶನ ಮುನಿಗಳಿಗೂ ಸಹ ದುರ್ಲಭ. ಆತನು ಒಂದು ದಿನ ಅಗ್ನಿ-ಜ್ವಾಲೆಯಿಂದ ಭಕ್ತ ಪ್ರಹ್ಲಾದನ ರಕ್ಷಣೆ ಮಾಡಿದ್ದನು, ನೀನು ಪ್ರಾಣಾಂತ್ಯದ ಸಮಯದಲ್ಲಿ ಆತನನ್ನು ಮನಸ್ಸು

ಮತ್ತು ವಾಣಿಗಳಿಂದ ಸ್ಮರಿಸಿಕೊಂಡೆ. ಪುರುಷಸಿಂಹ! ನಿನ್ನ ಶರೀರದ ಸ್ಪರ್ಶದಿಂದ ಇಂದು ನನ್ನ ಈ ಅಧಮ ಶರೀರವೂ ಸಹ ಪವಿತ್ರವಾಗಿಹೋಯಿತು. ಪವಿತ್ರವಾಗಲು ಇದಕ್ಕಿಂತಲೂ ಶ್ರೇಷ್ಠ ಉಪಾಯ ಬೇರೆ ಯಾವುದೂ ಇಲ್ಲ. ತೀರ್ಥವೂ ಸಹ ಭಕ್ತರ ಮೂಲಕ ತೀರ್ಥತ್ವವನ್ನೂ ಪಡೆದುಕೊಳ್ಳುತ್ತದೆ. ಮಹಾರಾಜ ಯುಧಿಷ್ಠಿರನು ವಿದುರನಿಗೆ ಹೇಳಿದ್ದನು -

**ಭವದ್ವಿಧಾ ಭಾಗವತಾಸ್ತೀರ್ಥಭೂತಾಃ ಸ್ವಯಂ ವಿಭೋ ।**
**ತೀರ್ಥೀಕುರ್ವಂತಿ ತೀರ್ಥಾನಿ ಸ್ವಾಂತಃಸ್ಥೇನ ಗದಾಭೃತಾ ॥**

**(ಶ್ರೀಮದ್ಭಾ ೧/೧೩/೧೦)**

'ಹೇ ಪ್ರಭು! ನಿನ್ನಂತಹ ಭಗವದ್ಭಕ್ತನು ಸ್ವತಃ ತಾನೇ ತೀರ್ಥರೂಪನಾಗಿರುತ್ತಾನೆ. ಪಾಪಿಗಳಿಂದ ಕಲುಷಿತಗೊಂಡ ತೀರ್ಥವು ನಿನ್ನಂತಹ ಭಕ್ತರ ಮೂಲಕ ಪುನಃ ತೀರ್ಥತ್ವವನ್ನು ಪಡೆದುಕೊಳ್ಳುತ್ತವೆ. ಏಕೆಂದರೆ ನಿನ್ನ ಹೃದಯದಲ್ಲಿ ಗದಾಧರ ಭಗವಂತನು ಯಾವಾಗಲೂ ವಾಸಿಸುತ್ತಿರುತ್ತಾನೆ.'

**ಅಕ್ಷ್ಣೋಃ ಫಲಂ ತ್ವಾದೃಶದರ್ಶನಂ ಹಿ**
**ತನ್ವಾಃ ಫಲಂ ತ್ವಾದೃಶಗಾತ್ರಸಂಗಃ ।**
**ಜಿಹ್ವಾಫಲಂ ತ್ವಾದೃಶಕೀರ್ತನಂ ಹಿ**
**ಸುದುರ್ಲಭಾ ಭಾಗವತಾ ಹಿ ಲೋಕೇ ॥**

'ನಿನ್ನಂತಹ ಭಕ್ತರ ದರ್ಶನದಲ್ಲಿಯೇ ಕಣ್ಣುಗಳ ಸಫಲತೆಯಿದೆ. ನಿನ್ನಂತಹ ಭಕ್ತರ ಅಂಗಸ್ಪರ್ಶದಿಂದ ಶರೀರದ ಸಫಲತೆಯಿದೆ ಮತ್ತು ನಿನ್ನಂತಹ ಭಕ್ತರ ಗುಣ-ಗಾನದಲ್ಲಿ ನಾಲಿಗೆಯ ಸಫಲತೆಯಿದೆ. ಏಕೆಂದರೆ ಪ್ರಪಂಚದಲ್ಲಿ ಭಕ್ತರ ದರ್ಶನ ಅತ್ಯಂತ ದುರ್ಲಭ.' ಆದುದರಿಂದ -

**ರಾಜಾನಂ ರಾಜಪುತ್ರಾಂಶ್ಚ ಸೈನ್ಯಂ ಪಾವಯ ಸುವ್ರತ ।**
**ಉತ್ತಿಷ್ಠ ವತ್ಸ ತೈಲಾತ್ತ್ವಂ ಮಾಂ ಸಮುದ್ಧರ ಭೂಪಜ ॥**
**ಕೃಷ್ಣೋಽಯಂ ಪಾಂಡವಸ್ಯಾಥ ಸಾರಥ್ಯಂ ಪ್ರಕರೋತಿ ಚ ।**
**ಅರ್ಜುನೇನಾದ್ಯ ಸಂಗ್ರಾಮಂ ಕುರು ವೀರ ಯಥೋಚಿತಮ್ ॥**

‘ಎಲೈ ಪವಿತ್ರ ರಾಜಕುಮಾರ! ಹೇ ವತ್ಸ! ಎದ್ದು ನಿಲ್ಲು. ಎಣ್ಣೆಯಿಂದ ಹೊರಕ್ಕೆ ಬಂದು ನಿನ್ನ ತಂದೆ, ನಾಲ್ವರು ಅಣ್ಣಂದಿರನ್ನು ಮತ್ತು ಸೈನ್ಯವನ್ನೆಲ್ಲಾ ಪಾವನ ಮಾಡು, ಜೊತೆಗೆ ನನ್ನನ್ನೂ ಸಹ ಉದ್ಧಾರಮಾಡು. ಎಲೈ ವೀರ! ಭಗವಾನ್ ಶ್ರೀಕೃಷ್ಣನು ತನ್ನ ಭಕ್ತ ಅರ್ಜುನನ ಸಾರಥಿಯಾಗಿದ್ದಾನೆ, ನೀನು ಆ ಅರ್ಜುನನೊಡನೆ ರಣಾಂಗಣದಲ್ಲಿ ಯಥಾಯೋಗ್ಯ ಯುದ್ಧಮಾಡು.’

ಮುನಿಯ ಸಂಗಡ ಸುಧನ್ವನು ಹೊರಕ್ಕೆ ಬಂದು ತಂದೆಯ ಬಳಿ ಹೋದನು. ಮುನಿಯು ಸುಧನ್ವನ ಭಕ್ತಿಭಾವ ಹಾಗೂ ಅಪರಿಮಿತ ಪ್ರಭಾವವನ್ನು ರಾಜನ ಮುಂದೆ ಬಹುವಾಗಿ ಪ್ರಶಂಸಿಸಿದನು. ರಾಜನು ಮಗನನ್ನು ಎದೆಗಪ್ಪಿಕೊಂಡನು ಮತ್ತು ಗದ್ಗದ ಕಂಠದಿಂದ ಶ್ರೇಯಸ್ಸನ್ನು ಕೋರಿ ಆಶೀರ್ವದಿಸುತ್ತಾ ಯುದ್ಧದ ಅನುಪಮ ಅತಿಥಿ ಅರ್ಜುನನಿಗೆ ಯಥೋಚಿತ ಸತ್ಕಾರ ಮಾಡುವಂತೆ ಆಜ್ಞಾಪಿಸಿದನು.

ಪಿತೃ-ಆಜ್ಞೆಯನ್ನು ಪಡೆದು ಸುಧನ್ವನು ರಥವೇರಿ ತಕ್ಷಣ ರಣರಂಗವನ್ನು ಪ್ರವೇಶಿಸಿದನು. ಎರಡು ಕಡೆಗಳಲ್ಲಿಯೂ ಬಗೆ-ಬಗೆಯ ರಣವಾದ್ಯಗಳು ಮೊಳಗಿದವು. ಶಂಖಗಳ ಧ್ವನಿ ಪ್ರಾರಂಭವಾಯಿತು. ವಾದ್ಯಗಳು ಮತ್ತು ರಥ, ಕುದುರೆಗಳು ಹಾಗೂ ಆನೆಗಳ ಗರ್ಜನೆಯಿಂದ ಭೂಮಿ ನಡುಗಿತು. ಭಯಂಕರ ಯುದ್ಧ ಪ್ರಾರಂಭವಾಯಿತು. ಪಾಂಡವರ ಕಡೆ ಮಹಾವೀರ ಅರ್ಜುನನ ನೇತೃತ್ವದಲ್ಲಿ ಅಪಾರ ಸೇನಾಸಹಿತ ಶ್ರೀಕೃಷ್ಣಾತ್ಮಜ ಪ್ರದ್ಯುಮ್ನ, ಕರ್ಣಪುತ್ರ ವೃಷಕೇತು, ಕೃತವರ್ಮ, ಸಾತ್ಯಕಿ, ಅನುಶಾಲ್ವ ಮುಂತಾದ ಪ್ರಸಿದ್ಧ ವೀರರಿದ್ದಾರೆ. ಇತ್ತಕಡೆ ಸುಧನ್ವನ ನೇತೃತ್ವದಲ್ಲಿ ರಾಜಾ ಹಂಸಧ್ವಜನ ವಿಪುಲ ವಾಹಿನಿಯಿದೆ. ಶ್ರೀಕೃಷ್ಣ ಭಕ್ತ ವೀರ ಕ್ಷತ್ರಿಯ ಕುಮಾರ ಸುಧನ್ವನು ಕ್ರಮಶಃ ವೀರರನ್ನೆಲ್ಲಾ ಪರಾಜಯಗೊಳಿಸಿದನು. ಮಹಾಸಂಗ್ರಾಮದ ನಂತರ ಎಲ್ಲರೂ ಸೋಲನ್ನೊಪ್ಪಿ ಅಥವಾ ಗಾಯಗೊಂಡು ರಣರಂಗದಿಂದ ದೂರಹೋಗಬೇಕಾಯಿತು. ಕೊನೆಗೇ ಅರ್ಜುನನೇ ಸ್ವತಃ ಮುಂದೆ ಬಂದನು. ಎರಡು ಕಡೆಗಳಲ್ಲಿಯೂ ಭಗವಂತನ ಅನನ್ಯ ಭಕ್ತರು ಮತ್ತು ಅಜೇಯ

ವೀರರಿದ್ದಾರೆ. ಅರ್ಜುನ ದೊಡ್ಡ ದೊಡ್ಡ ಯುದ್ಧಗಳ ಅನುಭವೀ ವೀರನಾದರೆ, ಸುಧನ್ವನಿನ್ನೂ ಹೊಸ ರಣ-ಚತುರ. ಅರ್ಜುನನಿಗೆ ತನ್ನ ಭಕ್ತಿ ಮತ್ತು ಶೌರ್ಯದ ಬಗ್ಗೆ ಸ್ವಲ್ಪ ಗರ್ವವಿದೆ; ಸುಧನ್ವನು ಪೂರ್ಣವಾಗಿ ಭಗವಂತನ ನಂಬಿಕೆಯ ಮೇಲಿದ್ದಾನೆ - ಇದಿಷ್ಟೇ ವ್ಯತ್ಯಾಸ. ಆದುದರಿಂದ ಇಂದು ಭಕ್ತಿಗೂ ಮತ್ತು ಶೌರ್ಯಕ್ಕೂ ಯಾರೂ ಗುತ್ತಿಗೆದಾರರಲ್ಲ ಎಂಬುದನ್ನು ಪ್ರತ್ಯಕ್ಷವಾಗಿ ತೋರಿಸಲು ಭಗವಂತನು ಇಷ್ಟಪಟ್ಟನು. ಭಗವಾನ್ ಶ್ರೀಕೃಷ್ಣನ ಸಹಾಯ ಮತ್ತು ಜೊತೆಯಿಲ್ಲದಿದ್ದರೆ ಒಬ್ಬ ಬಾಲಕನಿಂದಲೇ ಅರ್ಜುನನು ಸೋಲಬಲ್ಲನು ಎಂಬ ಸತ್ಯವನ್ನು ಜಗತ್ತಿಗೆ ತೋರಿಸಬೇಕಾಗಿತ್ತು.

ಅರ್ಜುನ ಸುಧನ್ವನು ಎದುರಿಗೆ ಬಂದ ಕೂಡಲೇ ಅವನೊಡನೆ ಹೇಳಿದನು - 'ವೀರ ಬಾಲಕ! ನಾನು ಭಾರಿ-ಭಾರಿ ಯುದ್ಧಗಳಲ್ಲಿ ವಿಜಯ ಗಳಿಸಿದ್ದೇನೆ. ಮಹಾತ್ಮ ಗುರುದ್ರೋಣ, ಪಿತಾಮಹ ಭೀಷ್ಮ, ಕುಲಗುರು ಕೃಪಾಚಾರ್ಯ ಮತ್ತು ಮಹಾವೀರ ಕರ್ಣ ಇವರೊಡನೆ ನಾನು ಯುದ್ಧ ಮಾಡಿದ್ದೇನೆ. ಭಗವಾನ್ ಶಿವ ಹಾಗೂ ದೊಡ್ಡ ದೊಡ್ಡ ದೈತ್ಯರೊಡನೆಯೂ ಕೂಡ ನಾನು ಸಂಗ್ರಾಮದಲ್ಲಿ ಗೆದ್ದಿದ್ದೇನೆ, ಆದರೆ ನಿನ್ನ ಸಮಾನರಾದ ರಣಶೂರರು ಯಾರೂ ಎಲ್ಲಿಯೂ ಸಿಕ್ಕಲಿಲ್ಲ. ನಿನ್ನನ್ನು ನೋಡಿ ನನಗೆ ಆಶ್ಚರ್ಯವಾಗುತ್ತಿದೆ.

**'ತಥಾ ನ ವಿಸ್ಮಯೋ ಜಾತೋ ಯಥಾ ತ್ವಾಂ ವೀಕ್ಷ್ಯ ಜಾಯತೇ।'**

ಸುಧನ್ವ ಹೇಳಿದನು - 'ವೀರವರ! ಮೊದಲಿನ ಯುದ್ಧಗಳಲ್ಲಿ ನಿಮ್ಮ ಪರಮ ಹಿತಕಾರಿ ಭಗವಾನ್ ಶ್ರೀಕೃಷ್ಣನು ಬಹು ಜಾಗರೂಕತೆಯಿಂದ ರಥದಲ್ಲಿ ಕುಳಿತು ಸಾರಥಿಯ ಕೆಲಸ ಮಾಡುತ್ತಿದ್ದನು. ಇಂದು ನೀವು ಶ್ರೀಕೃಷ್ಣನಿಲ್ಲದೇ ಇರುವಿರಿ. ಆದ್ದರಿಂದೆ ನಿಮಗೆ ಆಶ್ಚರ್ಯವಾಗುತ್ತಾ ಇದೆ. ನೀವು ಶ್ರೀಕೃಷ್ಣನನ್ನು ಹೇಗೆ ಬಿಟ್ಟುಬಿಟ್ಟಿರಿ? ನೀವು ನನ್ನೊಡನೆ ಯುದ್ಧ ಮಾಡಲು ಸಮರ್ಥರೋ ಅಥವಾ ಇಲ್ಲವೋ ಹೇಳಿ? ಸುಧನ್ವನ ಮಾತು ಕೇಳಿ ಅರ್ಜುನನು ಕ್ರೋಧಗೊಂಡು ಅವನ ಮೇಲೆ ಬಾಣಗಳ ಸುರಿಮಳೆ ಪ್ರಾರಂಭಿಸಿದನು. ಸುಧನ್ವನು ನಗುತ್ತಾ

ಮಾತಾಡುತ್ತಿದ್ದ ಹಾಗೆಯೇ ಅವನ ಎಲ್ಲಾ ದಿವ್ಯ ಬಾಣಗಳನ್ನು ಕತ್ತರಿಸಿ ಹಾಕಿದನು - **'ಸುಧನ್ವಾ ತಾನ್‌ಶರಾನ್ ದಿವ್ಯಾಂಶ್ಚಿಚ್ಛೇದ ಪ್ರಹಸನ್ನಿವ ।'**

ಬಹು ಭಯಂಕರ ಯುದ್ಧವಾಯಿತು. ಅರ್ಜುನನು ತನ್ನ ಎಲ್ಲಾ ಕುಶಲತೆಯಿಂದ ಕಾದಾಡಿದನು. ಆದರೆ ಸುಧನ್ವನ ಮುಂದೆ ಒಂದೂ ನಡೆಯಲಿಲ್ಲ. ವೀರ ಭಕ್ತ ಬಾಲಕ ಸುಧನ್ವನ ಯುದ್ಧ ನಿಪುಣತೆ ಮತ್ತು ನಿರಂತರ ಬಾಣದ ಮಳೆಯಿಂದ ಅರ್ಜುನನು ಗಾಬರಿಗೊಂಡನು, ಅವನ ಸಾರಥಿ ಹತಾಶನಾಗಿ ಕೆಳಕ್ಕುರುಳಿದನು. ಇದನ್ನು ನೋಡಿ ಸುಧನ್ವ ನಗುತ್ತಾ ಹೇಳಿದನು -

**ಶರೈಃ ಕ್ಷತೋಽಸಿ ಪಾರ್ಥ ತ್ವಂ ಪೌರುಷಂ ಕ್ವ ಗತಂ ಚ ತೇ ।**
**ಸರ್ವಜ್ಞಂ ಸಾರಥಿಂ ತ್ಯಕ್ತ್ವಾ ಪ್ರಾಕೃತಃ ಸಾರಥಿಃ ಕೃತಃ ॥**
**ಸ್ಮರ ಸ್ವಸೂತಂ ಕೃಷ್ಣಾಖ್ಯಂ ಮಮಾಗ್ರೇ ಪತಿತೋ ಹ್ಯಸಿ ॥**

'ಎಲೈ ಪಾರ್ಥ! ನೀನು ನನ್ನ ಬಾಣಗಳಿಂದ ಗಾಯಗೊಂಡಿರುವೆ, ಇಂದು ನಿನ್ನ ಪುರುಷಾರ್ಥ ಎಲ್ಲಿ ಹೋಯಿತು? ವೀರವರ! ನೀನು ನಿನ್ನ ಸರ್ವಜ್ಞ ಸಾರಥಿಯನ್ನು ಬಿಟ್ಟು ಬದಲಾಗಿ ಸಾಧಾರಣ ಸಾರಥಿಯನ್ನು ನೇಮಿಸಿಕೊಂಡು ದೊಡ್ಡ ತಪ್ಪು ಮಾಡಿರುವೆ. ನೀನು ನನ್ನ ಮುಂದೆ ಯುದ್ಧದಲ್ಲಿ ಬಿದ್ದು ಹೋಗಿರುವೆ. ಆದುದರಿಂದ ಬಹು ಶೀಘ್ರವಾಗಿ ನಿನ್ನ ಸಾರಥಿಯಾದ ಶ್ರೀಕೃಷ್ಣನನ್ನು ಕರೆಸು.

ಅರ್ಜುನನು ತನ್ನ ಎಡಗೈಯಿಂದ ಧನುಸ್ಸು ಸಹಿತ ಕುದುರೆಗಳ ವಾಘೆಗಳನ್ನು ಹಿಡಿದು ಯುದ್ಧಮಾಡಲು ಪ್ರಾರಂಭಿಸಿದನು ಮತ್ತು ಮನದಲ್ಲಿಯೇ ತನ್ನ ಜೀವನಾಧಾರ, ಜಗದಾಧಾರ ಶ್ರೀಕೃಷ್ಣನನ್ನು ದೀನನಾಗಿ ಸ್ಮರಣೆ ಮಾಡಿದನು. ಸ್ಮರಣೆ ಮಾಡುವುದೇ ತಡ, ತತ್‌ಕ್ಷಣ ಭಗವಾನ್ ಶ್ರೀಕೃಷ್ಣನು ರಥದ ಮೇಲೆ ಬಂದು ಕುಳಿತನು; 'ಕುದುರೆಗಳ ಲಗಾಮನ್ನು ಬಿಡು' ಎಂದು ಅರ್ಜುನನಿಗೆ ಹೇಳುತ್ತಾ ಕಾಣಿಸಿಕೊಂಡನು -

**'ಮುಂಚ ಚಾಶ್ವಾನರ್ಜುನೇತಿ ವ್ಯಾಜಹಾರ ವಚೋ ಹರಿಃ' ।**

ಭಗವಾನ್ ವಾಸುದೇವನನ್ನು ನೋಡಿ ಅರ್ಜುನ ಮತ್ತು ಸುಧನ್ವ ಇಬ್ಬರೂ ಒಂದೇ ಬಾರಿಗೆ ಪ್ರಣಾಮ ಮಾಡಿದರು. ಅರ್ಜುನನಿಗೆ ಹರ್ಷವಾಗುವುದು ಸ್ವಾಭಾವಿಕವಾಗಿಯೇ ಇತ್ತು. ಆದರೆ ಸುಧನ್ವನ ಹರ್ಷದ ರೀತಿಯೇ ಸ್ವಲ್ಪ ಬೇರೆಯದಾಗಿತ್ತು. ಯಾವ ಕಾರ್ಯಕ್ಕಾಗಿ ತಾಯಿ ತಂದೆಯರ ಆಜ್ಞೆ ಮತ್ತು ಪ್ರಿಯ ಪತ್ನಿಯ ಅಭಿಲಾಷೆಯಂತೆ ರಣಕ್ಷೇತ್ರಕ್ಕೆ ಬಂದು ಅರ್ಜುನನ್ನು ಚಕಿತಗೊಳಿಸಿದನೋ, ಆ ಶುಭಕಾರ್ಯ ಇದೀಗ ನೆರವೇರಿದೆ. ಭಗವಂತನ ದಿವ್ಯರೂಪು ಮಾಧುರ್ಯ ಮತ್ತು ಆತನ ಅತುಲನೀಯ ಭಕ್ತವತ್ಸಲತೆಯನ್ನು ನೋಡಿ ಸುಧನ್ವನು ಕೃತಾರ್ಥನಾದನು. ಸುಧನ್ವನು ಮನಸ್ಸಿನಲ್ಲಿಯೇ ಪದೇ-ಪದೇ ನಮಸ್ಕರಿಸಿ ಭಗವಂತನ ಪ್ರೇರಣೆಯಂತೆ ಹೇಳಿದನು -

**ದೃಷ್ಟಸ್ತ್ವಮಸಿ ಗೋವಿಂದ ಪಾಂಡವಾರ್ಥೇ ಸಮಾಗತಃ ।**
**ಸರ್ವಗತ್ವಂ ಮಯಾ ಜ್ಞಾತಂ ತ್ವದೀಯಂ ಕಿಲ ಕೇಶವ ॥**

'ಹೇ ಕೇಶವ! ಅರ್ಜುನನಿಗೋಸ್ಕರ ದಯಮಾಡಿಸಿದ ನಿನ್ನ ದರ್ಶನವನ್ನು ನಾನೂ ಮಾಡಿಕೊಂಡೆನು. ಹೇ ಗೋವಿಂದ! ನನಗೆ ನಿನ್ನ ಸರ್ವವ್ಯಾಪಕತೆಯ ಅನುಭವವುಂಟಾಯಿತು.' ಸೂಚ್ಯವಾಗಿ ಭಗವಂತನಿಗೆ ಗೂಢಾರ್ಥವಾಗಿ ಇಷ್ಟುಮಾತ್ರ ಹೇಳಿ ನಗುತ್ತಾ ಸುಧನ್ವನು ಅರ್ಜುನನಿಗೆ ಹೇಳಿದನು - 'ಪಾರ್ಥ! ನಿನ್ನ ಸಾರಥಿ ಶ್ರೀಕೃಷ್ಣ ಬಂದಿದ್ದಾನೆ. ಈಗ ನನ್ನ ಮೇಲೆ ವಿಜಯ ಸಾಧಿಸಲು ನೀನು ಯಾವುದಾದರೂ ಪ್ರತಿಜ್ಞೆ ಮಾಡಬಹುದು.' ಈ ಶಬ್ದಗಳಿಂದ, ಶ್ರೀಕೃಷ್ಣನು ಕೇವಲ ನಿನಗೊಬ್ಬನಿಗೇ ಸಾರಥಿಯಲ್ಲ, ನನಗೂ ಕೂಡ ಸರ್ವಸ್ವವಾಗಿದ್ದಾನೆ ಎಂಬುದನ್ನು ಅರ್ಜುನನಿಗೆ ತಿಳಿಸುವಂತಿತ್ತು. ನಿನ್ನ ಪ್ರತಿಜ್ಞೆಯ ಸಲುವಾಗಿ ತನ್ನ ಪುಣ್ಯವನ್ನು ಕೊಟ್ಟು ನಿನ್ನ ರಕ್ಷಣೆ ಮಾಡುವನು, ಆದರೆ ನನ್ನ ಪ್ರತಿಜ್ಞೆಯ ರಕ್ಷಣೆಯನ್ನೂ ಕೇವಲ ಸಂಕಲ್ಪದಿಂದಲೇ ಮಾಡಿಬಿಡುವನು. ಭಗವಂತನ ಈ ಲೀಲೆಯನ್ನೂ ಇಂದು ಜಗತ್ತು ನೋಡಲಿ.

ಸುಧನ್ವನ ಆವೇಶದ ಮಾತನ್ನು ಕೇಳಿ ಅರ್ಜುನನು ಮೂರು ಬಾಣಗಳನ್ನು

ತೆಗೆದುಕೊಂಡು ಪ್ರತಿಜ್ಞೆ ಮಾಡುತ್ತಾ ಹೇಳಿದನು - 'ಈ ಮೂರು ಬಾಣಗಳಿಂದ ನಿನ್ನ ಸುಂದರವಾದ ತಲೆಯನ್ನೂ ಕೆಳಕ್ಕುರುಳಿಸುವೆನು. ನಾನು ಹಾಗೆ ಮಾಡದಿದ್ದರೆ ನನ್ನ ಪೂರ್ವಜರು ಪುಣ್ಯಹೀನರಾಗಿ ನರಕದಲ್ಲಿ ಬೀಳುವರು. ನನ್ನ ಮಾತು ಸಂಪೂರ್ಣವಾಗಿಯೂ ಸತ್ಯ. ಇದರಲ್ಲಿ ಕಿಂಚಿತ್ತೂ ಮಿಥ್ಯೆಯಿಲ್ಲ. ಅರ್ಜುನನ ಪ್ರತಿಜ್ಞೆಯನ್ನು ಕೇಳಿ ಮರಣೋನ್ಮತ್ತನಾದ ಭಕ್ತ ವೀರಸುಧನ್ವನೂ ಕೂಡ 'ಶ್ರೀ ಕೃಷ್ಣನ ಸಮ್ಮುಖದಲ್ಲಿಯೇ ನಾನು ನಿನ್ನ ಮೂರು ಬಾಣಗಳನ್ನೂ ಕತ್ತರಿಸಿ ಹಾಕುವೆನು. ಹಾಗೆ ಮಾಡದೇ ಹೋದರೆ ನನಗೆ ದುರ್ಗತಿಯುಂಟಾಗಲಿ ಎಂದು ಕೈ ಎತ್ತಿ ಘೋಷಣೆ ಮಾಡಿದನು. ಎರಡು ಕಡೆಯೂ ಪರಸ್ಪರ ವಿರೋಧೀ ಪ್ರತಿಜ್ಞೆಗಳು ನಡೆದುಹೋದವು. ಇಬ್ಬರೂ ಮಹಾವೀರರು ಮತ್ತು ಭಗವಂತನ ಅನನ್ಯ ಭಕ್ತರು. ಎರಡು ಕಡೆಯ ಸೈನ್ಯದ ಎಲ್ಲಾ ವೀರರೂ ಹಾಗೂ ಸಮಸ್ತ ದೇವತೆಗಳು ಮತ್ತು ಋಷಿಗಣಗಳೂ ಈ ಆಶ್ಚರ್ಯವನ್ನು ನೋಡಲು ಉತ್ಸಾಹಭರಿತರಾದರು.

ಸುಧನ್ವನು ಬಾಣಗಳ ಸುರಿಮಳೆಯಿಂದ ಶ್ರೀಕೃಷ್ಣ ಸಹಿತ ಅರ್ಜುನನನ್ನು ಗಾಯಗೊಳಿಸಿ ಬಾಣಗಳ ಕೌಶಲ್ಯದಿಂದ ಅವನು ರಥವನ್ನು ಚಕ್ರದಂತೆ ತಿರುಗಿಸಿದನು. ಅನಂತರ ಹತ್ತು ಬಾಣಗಳಿಂದ ಅರ್ಜುನನ್ನೂ ಮುಚ್ಚಿ ಅವನ ರಥ ನಾಲ್ಕು ನೂರು ಮೊಳ ಹಿಂದಕ್ಕೆ ಸರಿಯುವಂತೆ ಒಂದು ಬಾಣವನ್ನು ಪ್ರಯೋಗಿಸಿದನು. ಇದನ್ನು ನೋಡಿ ಭಗವಂತನು ಅರ್ಜುನನಿಗೆ ಹೇಳಿದನು - 'ಅರ್ಜುನ! ನೀನು ಸುಧನ್ವನ ಪುರುಷಾರ್ಥವನ್ನು ನೋಡಿದೆಯಾ? ಎಂತಹ ವೀರ! ನೀನು ನನ್ನೊಡನೆ ವಿಚಾರಮಾಡದೆ ಎಂತಹ ಕಠಿಣ ಪ್ರತಿಜ್ಞೆ ಮಾಡಿ ಕೆಟ್ಟ ಕೆಲಸ ಮಾಡಿಬಿಟ್ಟೆ. ಜಯದ್ರಥ-ವಧೆಯಲ್ಲಿ ಎಷ್ಟು ಕಷ್ಟವಾಯಿತು, ಆ ಘಟನೆಯನ್ನು ನೀನು ಮರೆತುಬಿಟ್ಟೆಯಾ? ನನ್ನ ಕಾಲುಗಳ ಬಲದಿಂದ ಒತ್ತಿ ಹಿಡಿದಿದ್ದ ರಥವನ್ನು ಒಂದೇ ಬಾಣದಿಂದ ನಾಲ್ಕು ನೂರು ಮೊಳ ಹಿಂದಕ್ಕೆ ಸರಿಸಿಬಿಟ್ಟ ವೀರನ ಮುಂದೆ ನೀನು ಹೇಗೆ ವಿಜಯಿಯಾಗಬಲ್ಲೆ. ಇದು ಸುಧನ್ವನ 'ಏಕಪತ್ನೀವ್ರತ' ದ ಅತ್ಯಂತ ಮಹತ್ವವೇ ಸರಿ. ಈ ಏಕಪತ್ನೀವ್ರತದಲ್ಲಿ

ನಾನು ಮತ್ತು ನೀನು ಇಬ್ಬರೂ ಬಹಳ ಹಿಂದಿದ್ದೇವೆ. ಇಂತಹ ಸ್ಥಿತಿಯಲ್ಲಿ ಮಹಾಕಷ್ಟವುಂಟಾಗುವುದು ನಿಶ್ಚಯ.

ಅರ್ಜುನ ಹೇಳಿದನು ಹೇ ಗೋವಿಂದ! ನಿನ್ನ ಶುಭಾಗಮನವಾಗಿರುವಾಗ ನನಗೇನು ಭಯ? ನಾನು ನಿಜವಾಗಿಯೂ ಈ ಮೂರು ಬಾಣಗಳಿಂದ ಸುಧನ್ವನನ್ನೂ ರಣಭೂಮಿಯಲ್ಲಿ ಬೀಳಿಸುವೆನು. ಈಗ ನನಗೆ ಮಹಾಕಷ್ಟದ ಯಾವ ಸಂಭವವೂ ಇಲ್ಲ. ನಿನ್ನ ಕೈಯಲ್ಲಿ ನನ್ನ ಜೀವನ-ರಥದ ಲಗಾಮು ಇರುವಾಗ ನನಗೆ ಯಾರು ತಾನೆ ಅನಿಷ್ಟ ಮಾಡಬಲ್ಲರು? ಅರ್ಜುನನು ಮೊದಲನೇ ಬಾಣವನ್ನು ಕೈಗೆತ್ತಿಕೊಂಡನು. ಆಗ ಸುಧನ್ವನು ಕೂಗಿ ಹೇಳಿದನು - 'ಗೋವಿಂದ! ಯಾವ ಪ್ರಕಾರ ಗೋಕುಲದಲ್ಲಿ ಗೋವುಗಳ ರಕ್ಷಣೆಗಾಗಿ ನೀನು ಗೋವರ್ಧನವನ್ನು ಕೈಮೇಲೆ ಎತ್ತಿಕೊಂಡಿದ್ದೆಯೋ, ಅದೇ ಪ್ರಕಾರ ಈಗಲೂ ನೀನು ನಿನ್ನ ಭಕ್ತ ಅರ್ಜುನನ ರಕ್ಷಣೆಮಾಡು; ಆದರೆ ನಾನೂ ಸಹ ನಿನ್ನ ದಾಸಾನುದಾಸನೆಂಬುದನ್ನು ಜ್ಞಾಪಕದಲ್ಲಿಟ್ಟುಕೊ.' ಭಗವಂತನು ಭಕ್ತ ಸುಧನ್ವನ ಕೀರ್ತಿ ಪತಾಕೆಯನ್ನು ಚಿರಕಾಲದವರೆಗೆ ಸ್ಥಿರವಾಗಿ ಹಾರುತ್ತಿರುವಂತೆ ಮಾಡಲು ಹಾಗೂ ಭಕ್ತ ಅರ್ಜುನನ ರಕ್ಷಣೆಗಾಗಿ ತನ್ನ ಗೋವರ್ಧನ ಧರಣದ ಪುಣ್ಯವನ್ನು ಬಾಣದೊಡನೆ ಸೇರಿಸಿದನು. ಕಾಲಾಗ್ನಿಯಂತೆ ಅರ್ಜುನನ ಬಾಣವು ಹೊರಟಿತು. ಆದರೆ ಪುಣ್ಯಾತ್ಮ ಭಕ್ತವರ ಸುಧನ್ವನು ಕ್ಷಣಮಾತ್ರದಲ್ಲಿ ಅದನ್ನು ಮಧ್ಯದಲ್ಲಿಯೇ ತುಂಡರಿಸಿದನು. ರಾಜಾ ಹಂಸಧ್ವಜನು ಸೇನಾಸಹಿತ ಸಂತೋಷಪಟ್ಟನು. ಪಾರ್ಥನ ಬಾಣ ಮುರಿದು ಬೀಳುತ್ತಲೇ ಭೂಮಿ ನಡುಗಿತು. ದೇವತೆಗಳು ಆಶ್ಚರ್ಯದಲ್ಲಿ ಮುಳುಗಿ ಹೋದರು. ಭಗವಂತನು ಸುಧನ್ವನ ಬಲ-ಪೌರುಷ ಮತ್ತು ಪ್ರಾಣ-ರಕ್ಷಣೆಯ ಕಾರ್ಯವನ್ನು ಪ್ರಶಂಸಿಸುತ್ತಾ ಅರ್ಜುನನಿಗೆ ಎರಡನೇ ಬಾಣವನ್ನು ಸಂಧಾನ ಮಾಡುವಂತೆ ಆಜ್ಞೆಮಾಡಿದನು. ಜೊತೆಗೆ ತನ್ನ ಪುಣ್ಯಗಳನ್ನು ಅರ್ಪಿಸಿದನು. ಸುಧನ್ವನು ಹೇಳಿದನು - 'ಗೋವಿಂದ! ನಿನ್ನ ಲೀಲೆ ಧನ್ಯವಾದದ್ದು! ಆದರೆ ಈ ನಿನ್ನ ದಾಸನೂ ಸಹ ನಿನ್ನ ಲೀಲೆಗಳಿಂದ ಅಪರಿಚಿತನಲ್ಲವೆಂಬುದು ಜ್ಞಾಪಕವಿರಲಿ! ನಂತರ

ಅರ್ಜುನನೊಡನೆ ಹೇಳಿದನು - ‘ಪಾರ್ಥ! ಶ್ರೀಕೃಷ್ಣನ ಸ್ಮರಣೆ ಮಾಡಿ ಬಾಣ ಬಿಡು; ಅರ್ಜುನನ ಪ್ರಲಯಕಾರಿ ಭಯಂಕರ ಬಾಣ ಹೊರಟಿತು, ಆದರೆ ವೀರ ಸುಧನ್ವನು ತನ್ನ ಪ್ರಬಲ ಪುರುಷಾರ್ಥದಿಂದ ಅದನ್ನೂ ಕೂಡ ಮಧ್ಯದಲ್ಲಿಯೇ ಕತ್ತರಿಸಿ ಹಾಕಿದನು. ಎರಡನೇ ಬಾಣ ಮುರಿದು ಬಿದ್ದಕೂಡಲೇ ಅರ್ಜುನ ಸ್ವಲ್ಪ ನಿರಾಶನಾದನು ಮತ್ತು ರಣಭೂಮಿಯಲ್ಲಿ ಹಾಹಾಕಾರವೆದ್ದಿತು. ಸುತ್ತಲೂ ಸುಧನ್ವನ ಶೌರ್ಯದ ಪ್ರಶಂಸೆಯೇ ಕೇಳಿಬಂತು. ಅನಂತರ ಭಗವಂತನು ಮೂರನೇ ಬಾಣವನ್ನು ಸಂಧಾನ ಮಾಡುವಂತೆ ಆಜ್ಞೆಮಾಡಿದನು, ಮತ್ತು ತನ್ನ ರಾಮಾವತಾರದ ಪುಣ್ಯವನ್ನು ಬಾಣಕ್ಕೆ ಸಮರ್ಪಿಸಿದನು. ಬಾಣದ ಹಿಂಭಾಗದಲ್ಲಿ ಬ್ರಹ್ಮನನ್ನು ಮಧ್ಯದಲ್ಲಿ ಯಮನನ್ನು ಸ್ಥಾಪಿಸಿ, ತುದಿಯಲ್ಲಿ ಸ್ವತಃ ತಾನೇ ಸ್ಥಿರಗೊಂಡನು. ಸುಧನ್ವನು ಹೇಳಿದನು - ‘ಪರಮಾತ್ಮಾ! ನೀನು ನನ್ನ ವಧೆ ಮಾಡುವುದಕ್ಕಾಗಿಯೇ ಬಾಣದಲ್ಲಿ ನೀನೇ ಸೇರಿಕೊಂಡೆ ಎಂಬುದು ನನಗೆ ಗೊತ್ತಾಯಿತು. ಬಾ ನಾಥ! ರಣಭೂಮಿಯಲ್ಲಿ ನನಗೆ ನಿನ್ನ ಚರಣಗಳ ಆಶ್ರಯವನ್ನು ಕೊಟ್ಟು ಕೃತಾರ್ಥನನ್ನಾಗಿ ಮಾಡು, ನಾನಾದರೋ ಬಯಸುವುದು ಇದನ್ನೇ. ಇದಕ್ಕಿಂತಲೂ ಹೆಚ್ಚಿನ ಸೌಭಾಗ್ಯ ನನಗೆ ಮತ್ತೇನಿರಬಹುದು? ಅರ್ಜುನ! ನಿನಗೆ ಧನ್ಯವಾದಗಳು, ಸಾಕ್ಷಾತ್ ನಾರಾಯಣನೇ ನಿನಗಾಗಿ ಕೇವಲ ತನ್ನ ಪುಣ್ಯವನ್ನು ಕೊಡುವುದಲ್ಲದೆ, ತಾನೇ ಸ್ವತಃ ಬಾಣದಲ್ಲಿ ಸೇರಿಕೊಂಡಿದ್ದಾನೆ. ನಿಜವಾಗಿಯೂ ನಿನಗೆ ಶುಭವಾಗುವುದು. ಆದರೆ ಎಚ್ಚರಿಕೆ! ಶ್ರೀಕೃಷ್ಣನ ಕೃಪೆಯಿಂದ ನಾನು ನಿನ್ನ ಬಾಣವನ್ನು ಖಂಡಿತವಾಗಿಯೂ ಕತ್ತರಿಸಿ ಹಾಕುವೆನು; ಅರ್ಜುನನ ಬಾಣ ಹೊರಟಿತು, ಆದರೆ ವೀರಶ್ರೇಷ್ಠ ಸುಧನ್ವನು ಶ್ರೀಕೃಷ್ಣನ ಜಪಮಾಡುತ್ತಾ ತಕ್ಷಣ ಅದನ್ನು ಕತ್ತರಿಸಿಹಾಕಿದನು. ಸುಧನ್ವನಿಂದ ಕತ್ತರಿಸಲ್ಪಟ್ಟ ಬಾಣದ ಹಿಂದಿನ ಅರ್ಧಭಾಗ ಭೂಮಿಗೆ ಬಿದ್ದಿತು. ಈ ಬಾಣ ತುಂಡಾದ ಕೂಡಲೇ ಚಂದ್ರಮಂಡಲವೆಲ್ಲಾ ನಡುಗಿತು. ಭಕ್ತ ಸುಧನ್ವನ ಪ್ರತಿಜ್ಞೆಯ ರಕ್ಷಣೆಯಾಯಿತು. ಈಗ ಅರ್ಜುನನ ಪ್ರತಿಜ್ಞೆಯ ರಕ್ಷಣೆಯಾಗಬೇಕಾಗಿದೆ. ಬಾಣದ ಮುಂದಿನ ಅರ್ಧಭಾಗ ವೇಗವಾಗಿ ಬಂದು ಸುಧನ್ವನ ಪ್ರಕಾಶಮಯ ಕುಂಡಲವುಳ್ಳ, ಪುರುಷಾರ್ಥದ ಭಂಡಾರವಾದ

ಸುಂದರ ಮಸ್ತಕವನ್ನು ತಕ್ಷಣ ಮುಂಡದಿಂದ ಬೇರ್ಪಡಿಸಿತು. ತಲೆಯಿಲ್ಲದ ಆ ಸುಧನ್ವನ ರುಂಡವು ಪಾಂಡವ ಸೇನೆಯನ್ನು ಅಸ್ತವ್ಯಸ್ತಗೊಳಿಸಿತು ಮತ್ತು ಅವನ ಭಾಗ್ಯಶಾಲಿ ತಲೆಯು ಆನಂದದಿಂದ ಕೇಶವ, ರಾಮ, ನೃಸಿಂಹ ಇತ್ಯಾದಿ ಭಗವನ್ನಾಮಗಳನ್ನು ಉಚ್ಚರಿಸುತ್ತಾ ಶ್ರೀಕೃಷ್ಣನ ಜಗತ್ಪಾವನ ಚರಣ ಕಮಲಗಳಲ್ಲಿ ಬಿದ್ದಿತು -

**ತಚ್ಛಿನ್ನಂ ತ್ವರಿತಂ ಪ್ರಾಪ್ತಂ ಶಿರಃ ಕೃಷ್ಣಪದಾಂಬುಜಮ್ ।**
**ಜಪನ್ ಕೇಶವ ರಾಮೇತಿ ನೃಸಿಂಹೇತಿ ಮುದಾ ಯುತಮ್ ॥**

ಭಗವಂತನು ಚರಣಗಳಲ್ಲಿ ಬಿದ್ದಿರುವ ಸುಂದರವಾದ ಶಿರಸ್ಸನ್ನೂ ಪ್ರೀತಿಯಿಂದ ತನ್ನೆರಡು ಕೈಗಳಿಂದಲೂ ಎತ್ತಿಕೊಂಡನು. ಅಷ್ಟರಲ್ಲಿ ವೀರ ಬಾಲಕ ಸುಧನ್ವನ ಮುಖದಿಂದ ಒಂದು ತೇಜಸ್ಸಿನ ಜ್ಯೋತಿ ಹೊರಟು ಎಲ್ಲರೂ ನೋಡುತ್ತಾ-ನೋಡುತ್ತಾ ತಕ್ಷಣ ಶ್ರೀಕೃಷ್ಣನ ಮುಖದಲ್ಲಿ ಪ್ರವೇಶಿಸಿ ಬಿಟ್ಟಿತು. ಈ ಘಟನೆಯನ್ನು ಯಾರೂ ತಿಳಿಯರು -

**ಉಭಾಭ್ಯಾಮಪಿ ಹಸ್ತಾಭ್ಯಾಂ ಸುಮುಖಂ ಪಶ್ಯತಾ ತದಾ ।**
**ಮುಖಾದ್ವಿನಿರ್ಗತಂ ತೇಜಃ ಪ್ರವಿಷ್ಟಂ ಕೇಶವಾನನೇ ॥**
**ಸುಧನ್ವನೋಽತಿಸತ್ತ್ವಸ್ಯ ಕೃಷ್ಣೋ ಜಾನಾತಿ ನೇತರಃ ॥**

**॥ ಭಕ್ತ ಮತ್ತು ಪ್ರಿಯ ಭಗವಂತನಿಗೆ ಜಯವಾಗಲಿ ॥**

**ಹರಿಃ ಓಂ ತತ್ಸತ್**

❑❑❑

# ಸಂತ ಸೂಕ್ತಿಗಳು

ಮನಸ್ಸನ್ನು ವಶಮಾಡಿಕೊಳ್ಳುವುದರಲ್ಲಿ ನಿಯಮಾನುಸಾರ ವರ್ತಿಸುವುದರಿಂದ ಬಹಳ ಸಹಾಯ ದೊರೆಯುತ್ತದೆ. ಎಲ್ಲಾ ಕೆಲಸಗಳು ಸರಿಯಾದ ಸಮಯಕ್ಕೆ ನಿಯಮಾನುಸಾರ ನಡೆಯಬೇಕು. ಪರಮಾರ್ಥದಲ್ಲಿಯೂ ಇದರಿಂದ ಬಹು ಲಾಭವಾಗುತ್ತದೆ.

ಮನಸ್ಸಿನ ಪ್ರತಿಯೊಂದು ಕಾರ್ಯದ ಬಗ್ಗೆಯೂ ಯೋಚಿಸಬೇಕು.

ಮನಸ್ಸು ಹೇಳಿದಂತೆ ನಡೆದುಕೊಳ್ಳಬಾರದು, ಈ ಮನಸ್ಸು ವಶವಾಗದೇ ಇರುವವರೆಗೂ ಇದನ್ನು ಪರಮ ಶತ್ರುವೆಂದೇ ಭಾವಿಸಿಕೊಳ್ಳಬೇಕು.

* * *

ಕೇವಲ ಪತಿ ಪರಾಯಣಳಾಗಿರುವುದೇ ಸ್ತ್ರೀಯಳ ಮುಖ್ಯ ಧರ್ಮ. ಮತ್ತೆಲ್ಲಾ ಧರ್ಮಗಳೂ ಗೌಣ. ಆಕೆಯ ಎಲ್ಲ ಆಚರಣೆ ಕೇವಲ ಪತಿಯ ಹಿತಕ್ಕಾಗಿಯೇ ಮಾಡಲ್ಪಡುತ್ತದೆ.

ಯಾರು ತಮ್ಮ ಸ್ತ್ರೀಯರಿಗೆ ಕಷ್ಟ ಕೊಡುತ್ತಾರೆಯೋ, ನಿಯಮಾನುಸಾರ ಅವರ ಪಾಲನೆ ಪೋಷಣೆ ಮತ್ತು ಸತ್ಕಾರ ಮಾಡುವುದಿಲ್ಲವೋ ಅವರು ಅಧರ್ಮ ಮಾಡಿದಂತೆ.

ಸ್ತ್ರೀಯರು ಶರೀರದಿಂದ ಪತಿಯ ಸೇವೆ ಮಾಡಬೇಕು, ಮನೆಯ ಎಲ್ಲಾ ಕಾರ್ಯಗಳನ್ನೂ ಮಾಡಬೇಕು ಮತ್ತು ಮನಸ್ಸಿನಿಂದ ಪರಮಾತ್ಮನ ಚಿಂತನೆ ಮಾಡಬೇಕು.

* * *

ದುರ್ದಶಾಗ್ರಸ್ತವಾಗಿರುವ ದೇಶದ ರಕ್ಷಣೆ ಬ್ರಹ್ಮಚರ್ಯದ ಪುನಃ ಪ್ರತಿಷ್ಠಾಪನೆಯಿಂದಲೇ ಸಾಧ್ಯವಾಗಬಲ್ಲದು. ಕಚ್ಚಾ ತಳಹದಿಯಮೇಲೆ ಕಟ್ಟಡ ನಿಲ್ಲಲಾರದು. ಅದರಂತೆಯೇ ಬ್ರಹ್ಮಚರ್ಯ ಪಾಲನೆಯಿಲ್ಲದೆ ಜೀವನ ನಿಲ್ಲಲಾರದು. ಒಂದು ವೇಳೆ ಇರುವುದಾದರೆ ಅದು ದುಃಖದಿಂದ ತುಂಬಿರುತ್ತದೆ.

ಕೆಲವು ಜನರು ವಿವಾಹ ಮಾಡಿಕೊಂಡ ಪತ್ನಿಯ ಜೊತೆಯಲ್ಲಿ ಹೇಗೆ ವರ್ತಿಸಿದರೂ ಎಲ್ಲಾ ಧರ್ಮಸಂಗತವಾದದ್ದೇ ಎಂದು ತಿಳಿಯುತ್ತಾರೆ. ಆದರೆ ಇದು ಅವರ ಭ್ರಮೆ. ಸ್ತ್ರೀ ಸಂಬಂಧೀ ಚರ್ಚೆಯನ್ನು ಎಂದಿಗೂ ಮಾಡಬಾರದು.

* * *

ಅವಿನಾಶೀ ಶುದ್ಧ ಬ್ರಹ್ಮನನ್ನು ಬ್ರಹ್ಮಜ್ಞಾನಿಗಳು ಈ ರೀತಿ ವರ್ಣನೆ ಮಾಡುತ್ತಾರೆ. ಇದು ಸ್ಥೂಲಕ್ಕಿಂತ, ಸೂಕ್ಷ್ಮಕ್ಕಿಂತ ಭಿನ್ನ, ಹ್ರಸ್ವಕ್ಕಿಂತ, ದೀರ್ಘಕ್ಕಿಂತಲೂ ಭಿನ್ನ, ಲೋಹಕ್ಕಿಂತಲೂ ಭಿನ್ನ, ಸ್ನೇಹಕ್ಕಿಂತಲೂ ಭಿನ್ನ, ಪ್ರಕಾಶಕ್ಕಿಂತಲೂ ಭಿನ್ನ, ಅಂಧಕಾರಕ್ಕಿಂತಲೂ ಭಿನ್ನ, ವಾಯುವಿಗಿಂತಲೂ ಭಿನ್ನ, ಆಕಾಶಕ್ಕಿಂತಲೂ ಭಿನ್ನ, ಸಂಗರಹಿತ, ರಸರಹಿತ, ಗಂಧರಹಿತ, ನೇತ್ರರಹಿತ, ಕರ್ಣರಹಿತ, ವಾಣಿರಹಿತ, ಮನರಹಿತ, ತೇಜರಹಿತ, ಪ್ರಾಣರಹಿತ, ಮುಖರಹಿತ, ಪರಿಮಾಣ ರಹಿತ, ಛಿದ್ರರಹಿತ ಮತ್ತು ದೇಶ, ಕಾಲ, ವಸ್ತು ಮುಂತಾದ ಪರಿಚ್ಛೇದ ರಹಿತ ಸರ್ವವ್ಯಾಪೀ ಅಪರಿಚ್ಛಿನ್ನವಾಗಿದೆ. ಅದು ಏನನ್ನೂ ಸಹ ತಿನ್ನುವುದಿಲ್ಲ ಮತ್ತು ಅದನ್ನೂ ಸಹ ಯಾರೂ ತಿನ್ನುವುದಿಲ್ಲ. ಈ ಪ್ರಕಾರ ಅದು ಎಲ್ಲಾ ವಿಶೇಷಣಗಳಿಂದ ಹೊರತಾಗಿ ಒಂದೇ ಅದ್ವಿತೀಯವಾಗಿದೆ.

* * *

ಆರ್ಯರ ನಾಗರೀಕತೆಗೆ ಅನುಸಾರವಾಗಿ ಶಿಕ್ಷಣದ ಉದ್ದೇಶ ಹೀಗಿದೆ - ಅದರ ಮೂಲಕ ಇಹ ಲೋಕದಲ್ಲಿ ಸರ್ವಾಂಗೀಣ ಅಭ್ಯುದಯ ಮತ್ತು ಪರಲೋಕದಲ್ಲಿ ಮೋಕ್ಷ ಪ್ರಾಪ್ತಿ. ಋಷಿಗಳ ದೃಷ್ಟಿಯಲ್ಲಿ - ನಮ್ಮನ್ನು ಅಜ್ಞಾನದ ಬಂಧನದಿಂದ ವಿಮುಕ್ತಗೊಳಿಸುವುದೇ ವಿದ್ಯೆ. ಇಂದು ಇಪ್ಪತ್ತನೇ ಶತಮಾನದಲ್ಲಿ ನಮ್ಮ ಸಂಸ್ಕೃತಿಯ ಸುದೃಢವಾದ ನೌಕೆಯು ನಮ್ಮ ಕೈಯಿಂದಲೇ ನಷ್ಟ-ಭ್ರಷ್ಟವಾಗಿ ಮುಳುಗಿ ಹೋಗುತ್ತಾ ಇದೆ. ವಿನಾಶದ ಆಳವಾದ ಗುಂಡಿಯಲ್ಲಿ ಬೀಳುವುದೇ ಇಂದು ನಮ್ಮ ಮನಸ್ಸಿನ ಉನ್ನತಿಯ ನಿದರ್ಶನವಾಗಿ ಹೋಗಿದೆ. ಇದೊಂದು ಮತಿಭ್ರಮಣೆಯಾಗಿದೆ.

* * *

ಮನುಷ್ಯನ ಉತ್ಥಾನ ಮತ್ತು ಪತನಗಳಿಗೆ ಎಷ್ಟು ಕಾರಣಗಳಿವೆಯೋ,

ಅವುಗಳಲ್ಲಿ ಸಂಗ ಒಂದು ಬಹು ಮುಖ್ಯ ಕಾರಣ. ಸಂಗದಂತೆಯೇ ಮನುಷ್ಯನ ಮನಸ್ಸು ಬೆಳೆಯುತ್ತದೆ, ಮತ್ತು ಮನಸ್ಸಿಗನುಸಾರವಾಗಿಯೇ ಮನುಷ್ಯನ ಕ್ರಿಯೆ ನಡೆಯುತ್ತದೆ ಹಾಗೂ ಕ್ರಿಯೆಯಂತೆಯೇ ಅದರ ಫಲ ದೊರೆಯುತ್ತದೆ. ಒಳ್ಳೆಯ ಮನುಷ್ಯನೂ ಸಹ ನೀಚ ಸಂಗದಿಂದ ಕೆಟ್ಟುಹೋಗಿ ಅವನತಿ ಹೊಂದುತ್ತಾನೆ ಮತ್ತು ಸದಾಚಾರಿಯಲ್ಲದ ಮನುಷ್ಯನೂ ಸಹ ಉತ್ತಮ ಸಲಹೆ ಪಡೆದು ದುರಾಚಾರದಿಂದ ಮುಕ್ತವಾಗಿ ಮಹಾತ್ಮನಾಗುತ್ತಾನೆ. ಸಾಧಾರಣ ಮನುಷ್ಯನ ಮೇಲೆ ದುಸ್ಸಂಗದ ಪರಿಣಾಮ ಬಹಳ ಬೇಗ ಉಂಟಾಗುತ್ತದೆ ಮತ್ತು ಸತ್ಸಂಗದ್ದು ನಿಧಾನವಾಗಿ.

* * *

ಧರ್ಮಹೀನ ಮನುಷ್ಯನನ್ನು ಶಾಸ್ತ್ರಕಾರರು ಪಶು ಎಂದು ತಿಳಿಸಿದ್ದಾರೆ. ಯಾವುದು ಜಗತ್ತಿನ ಸಮಸ್ತ ಜೀವಿಗಳಿಗೆ ಕಲ್ಯಾಣಕಾರಿಯೋ ಅದನ್ನೇ ಧರ್ಮವೆಂದು ತಿಳಿದುಕೊಳ್ಳಬೇಕು. ಧೃತಿ (ಧೈರ್ಯ), ಕ್ಷಮೆ, ದಮ, ಅಸ್ತೇಯ (ಕಳ್ಳತನ ಮಾಡದಿರುವುದು), ಶೌಚ, ಇಂದ್ರಿಯ ನಿಗ್ರಹ, ಧೀ (ಜ್ಞಾನ), ವಿದ್ಯೆ, ಸತ್ಯ ಮತ್ತು ಅಕ್ರೋಧ - ಈ ಹತ್ತು ಧರ್ಮದ ಲಕ್ಷಣಗಳು.

ಕಳ್ಳತನ ಅನೇಕ ರೀತಿಯಲ್ಲಾಗುತ್ತದೆ. ಬೇರೆಯವರ ವಸ್ತುವನ್ನು ಎತ್ತಿಕೊಳ್ಳುವುದು, ಮಾತಿನಲ್ಲಿ ಮುಚ್ಚಿಟ್ಟುಕೊಳ್ಳುವುದು. ಹೇಳಿ ಕಳ್ಳತನ ಮಾಡಿಸುವುದು, ಮನಸ್ಸಿನಿಂದ ಪರರ ವಸ್ತುವನ್ನು ನೋಡುವುದು ಇತ್ಯಾದಿ ಎಲ್ಲವೂ ಕಳ್ಳತನದ ರೂಪಗಳೇ ಆಗಿವೆ. ಸಮಾಜದ ಪ್ರಗತಿ ಕಳ್ಳತನದ ಕಡೆಗೆ ಬಹು ವೇಗದಿಂದ ಮುನ್ನುಗ್ಗುತ್ತಿದೆ.

* * *

ಪರರ ದೋಷದ ದರ್ಶನ ಮಾಡುವುದು ಸಾಧನೆಗೆ ಒಂದು ವಿಘ್ನ. 'ಬೇರೆಯವರು ಏನು ಮಾಡುತ್ತಾರೆ' ಎಂಬ ಮಾತಿನ ಬಗ್ಗೆ ಸಾಧಕರು ಯಾವ ಪ್ರಯೋಜನವನ್ನೂ ಇಟ್ಟುಕೊಳ್ಳಬಾರದು. ಸಾಧಕನಿಗೆ ತನ್ನ ಸಾಧನೆಯ ಕಾರ್ಯದಲ್ಲಿ ಇತರರ ಒಂದು ದೋಷವನ್ನೂ ಸಹ ನೋಡಲು ವಿರಾಮವೇ ಇಲ್ಲದಂತೆ ಇರಬೇಕು. ಜನರಲ್ಲಿ ಇತರರ ದೋಷವನ್ನು ನೋಡುವ ಅಭ್ಯಾಸ

ಬಂದುಬಿಟ್ಟರೆ ಅವರು ಸಾಧನೆಯ ಮಾರ್ಗದಲ್ಲಿ ಸ್ಥಿರವಾಗಿದ್ದು ಮುಂದುವರಿಯಲಾರರು. ದೋಷವೇ ಕಾಣಿಸದಿರುವಾಗ ಅವರಿಗೆ ಆಲೋಚನೆ ಮಾಡುವ ಯಾವ ಮಾತೂ ಇರುವುದಿಲ್ಲ. ತನ್ನ ದೋಷವನ್ನು ನೋಡಿಕೊಳ್ಳಬೇಕು.

* * *

ನಿನ್ನ ಮನಸ್ಸಿಗೆ ವಿರುದ್ಧವಾದ ಶಬ್ದವನ್ನು ಕೇಳಿದ ಕೂಡಲೇ ಯಾರ ಪ್ರಾಮಾಣಿಕತೆಯ ಬಗ್ಗೆಯೂ ಸಂದೇಹ ಪಡುವುದು ಉಚಿತವಲ್ಲ. ನೀವು ಬೇರೆಯವರನ್ನು ಸುಮ್ಮನೆ ಕುಳ್ಳಿರಿಸಿಕೊಂಡು ನಿಮ್ಮ ಮಾತನ್ನು ಹೇಳುವುದು ಮತ್ತು ತಿಳಿಸುವುದನ್ನು ಇಷ್ಟಪಡುವುದಾದರೆ ಅದೇ ರೀತಿ ಅವನ ಮಾತನ್ನು ಕೇಳಲು ನೀವೂ ಸಹ ಸಿದ್ಧವಾಗಿರಬೇಕು.

❑❑❑

# ಏಕ ಶ್ಲೋಕೀ

ಕಿಂ ಜ್ಯೋತಿಸ್ತವ ಭಾನುಮಾನಹನಿ ಮೇ ರಾತ್ರೌ ಪ್ರದೀಪಾದಿಕಂ
ಸ್ಯಾದೇವಂ ರವಿದೀಪದರ್ಶನವಿಧೌ ಕಿಂ ಜ್ಯೋತಿರಾಖ್ಯಾಹಿ ಮೇ ।
ಚಕ್ಷುಸ್ತಸ್ಯ ನಿಮೀಲನಾದಿಸಮಯೇ ಕಿಂ ಧೀರ್ಧಿಯೋ ದರ್ಶನೇ
ಕಿಂ ತತ್ರಾಹಮತೋ ಭವಾನ್ಪರಮಕಂ ಜ್ಯೋತಿಸ್ತದಸ್ಮಿ ಪ್ರಭೋ ॥

ಪ್ರಶ್ನೆ - ಸೃಷ್ಟಿಯಲ್ಲಿರುವ ವಸ್ತುಗಳನ್ನು ಯಾವ ಪ್ರಕಾಶದ ಮೂಲಕ ನೀನು ಅರಿಯುವೆ?

ಉತ್ತರ - ಹಗಲುವೇಳೆ ಸೂರ್ಯನ ಪ್ರಕಾಶದಿಂದಲೂ, ರಾತ್ರಿಯವೇಳೆ ದೀಪಾದಿಗಳಿಂದಲೂ, ಈ ಸೃಷ್ಟಿಯ ವಸ್ತುಗಳನ್ನು ಅರಿಯುತ್ತೇನೆ.

ಪ್ರಶ್ನೆ - ಹಾಗಾದರೆ ಇವನು ಸೂರ್ಯ, ಇದು ದೀಪ, ಎಂದು ಗುರುತಿಸಲು ಯಾವ ಜ್ಯೋತಿ ನಿನಗೆ ಸಾಧನವಾಗಿದೆ?

ಉತ್ತರ - ಕಣ್ಣುಗಳ ನೋಟದಿಂದ ಅವನ್ನು ಅರಿಯಬಲ್ಲೆನು.

ಪ್ರಶ್ನೆ - ಕಣ್ಣುಗಳನ್ನು ಮುಚ್ಚಿಕೊಂಡಿರುವಾಗ ಅವನ್ನು ಯಾವ ಪ್ರಕಾಶದಿಂದ ಹೇಗೆ ತಿಳಿಯುವೆ?

ಉತ್ತರ - ಬುದ್ಧಿಯ ಮೂಲಕ ತಿಳಿಯುವೆನು.

ಪ್ರಶ್ನೆ - ಬುದ್ಧಿಗೆ ದರ್ಶನ (ಜ್ಞಾನ) ಎಲ್ಲಿಂದ ಬಂದಿತು?

ಉತ್ತರ - ನನ್ನ ಬುದ್ಧಿಯು ಅದನ್ನು ಅರಿಯಲು ನಾನೇ ಕಾರಣನಾಗಿರುವೆನು.

ಪ್ರಶ್ನೆ - ಓ! ಹಾಗಾದರೆ ಸೂರ್ಯ, ದೀಪ, ಕಣ್ಣು, ಬುದ್ಧಿ, ಇವೆಲ್ಲಕ್ಕೂ ತಿಳಿವಳಿಕೆ (ಪ್ರಕಾಶ) ಯನ್ನು ಕೊಡುವ ಪರಂಜ್ಯೋತಿ ಪ್ರಕಾಶವೇ ನೀನಾಗಿರುವೆಯಲ್ಲವೇ?

ಉತ್ತರ - ಅಹುದು ಪ್ರಭು, ಪರಂಜ್ಯೋತಿಯಾದ ಆತ್ಮನೇ ನಾನು.

– ಶ್ರೀ ಶಂಕರಭಗವತ್ಪಾದರು

❑❑❑